ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಬೆಂಗಳೂರು

ಭಾನುವಾರ, 19 ಏಪ್ರಿಲ್ 2026

ಸಂಪುಟ 33, ಸಂಚಿಕೆ 168, ಪುಟಗಳು 12+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94
REG No.KA/BG GPO/2532/2021-23

hosadigantha.com
epaper.hosadigantha.com
Hosadigantha Digital



ಬನ್ನೇರುಘಟ್ಟ ಉದ್ಯಾನಕ್ಕೆ ಬಂದ ದಕ್ಷಿಣ ಆಫ್ರಿಕಾದ ನಾಲ್ಕು ಚೀತಾಗಳು

೦೭

ಯಶಸ್ಸಿನ ಶ್ರೇಯಕ್ಕಾಗಿ ಒಪ್ಪಂದ ತಡ ಮಾಡಿದ್ರಾ ಅಧ್ಯಕ್ಷ ಟ್ರಂಪ್?



೦೫

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಭರಣಿ ಉಪರಿ ಕೃತ್ತಿಕೆ

ದಿನದ ಮಾತು

ನಾಲಿಗೆಯ ತುದಿಯಲ್ಲಿ ಲಕ್ಷ್ಮಿ ನೆಲೆಸಿದ್ದಾಳೆ. ಅಲ್ಲಿಯೇ ಮಿತ್ರರು, ಬಂಧುಗಳು, ಆದರಿಂದಲೇ ಬಂಧನ ಹಾಗೂ ಮರಣ ಒದಗುತ್ತದೆ. ಇದು ಸತ್ಯ.

▲ ಶಾರ್ಙ್ಗಧರ ಪದ್ಧತಿ

ನೆನ್ನೆ ಎಂಬ ನೆಚ್ಚಿನ ಸಂಗಾತಿ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಹಿಂದಿನ ವಿವಾಹ ಬಚ್ಚಿಟ್ಟು ಸುಳ್ಳು ಭರವಸೆ: ನಾಸಿಕ್ ಸಂತ್ರಸ್ತೆ ದೂರು

• ಪುಟ ೫

ರೈಲ್ವೆ ಕಾರಿಡಾರ್ ನಿರ್ಮಾಣಕ್ಕೆ ಕೇಂದ್ರ ಅಸ್ತು

• ಪುಟ ೫

ಕಾಂಗ್ರೆಸ್ಸಿಗೆ ಮುಖಭಂಗ ಕಾದಿದೆ: ಛಲವಾದಿ

• ಪುಟ ೩

ಪ್ರಜಾಪ್ರಭುತ್ವದ ಗೆಲುವು ಎಂದ ಪ್ರಿಯಾಂಕಾ ವಾದ್ರಾ

• ಪುಟ ೫

ಭಾರತ ಸಿದ್ಧತೆ ಸಮರ್ಪಕ: ರಾಜನಾಥ್ ಸಿಂಗ್

• ಪುಟ ೫

ರಷ್ಯಾ ತೈಲ ಖರೀದಿ ನಿರ್ಬಂಧ ಸಡಿಲಿಸಿದ ಅಮೆರಿಕ

• ಪುಟ ೫

ಕಲಾಪ ಅನಿರ್ದಿಷ್ಟಾವಧಿ ಮುಂದೂಡಿಕೆ

• ಪುಟ ೫

ಮಹಿಳಾ ಮೀಸಲಿಗೆ ಕೈನಿಂದ ವಿರೋಧವಿಲ್ಲ: ಸಿಎಂ

• ಪುಟ ೩

ವಿಪಕ್ಷಗಳಿಂದ ಮಸೂದೆಯ ಭ್ರೂಣಹತ್ಯೆ | ಮೋದಿ ವಾಗ್ದಾಳಿ
ಮಹಿಳೆಯರಲ್ಲಿ ಮೋದಿ ಕ್ಷಮೆ | ಹೋರಾಟ ಮುಂದುವರಿಕೆ

ನಾರೀಶಕ್ತಿಗೆ ಅಪಮಾನ

• **ಹೊಸದಿಲ್ಲಿ:** ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆ ಸಂಸತ್ತಿನಲ್ಲಿ ವಿಫಲವಾದ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳ ವಿರುದ್ಧ ಕಿಡಿಕಾರಿದರು. 'ನಾರಿ ಶಕ್ತಿ ವಂದನ ಅಧಿನಿಯಮ' ತಿದ್ದುಪಡಿ ಮಸೂದೆ ಜಾರಿಯಾಗದಿರುವುದು ದೇಶದ ಮಹಿಳಾ ಶಕ್ತಿಯ ಕನಸುಗಳ ಮೇಲೆ ಬಿದ್ದ ದೊಡ್ಡ ಹೊಡೆತವಾಗಿದ್ದು, ಇದಕ್ಕಾಗಿ ದೇಶದ ತಾಯಂದಿರು, ಸಹೋದರಿಯರಲ್ಲಿ ಕ್ಷಮೆಯಾಚಿಸುತ್ತೇನೆ ಎಂದು ಹೇಳಿದರು. ಪ್ರತಿಪಕ್ಷಗಳು ಮಹಿಳಾ ಮಸೂದೆಯ ಭ್ರೂಣ ಹತ್ಯೆ ಮಾಡಿವೆ ಎಂದೂ ಆಕ್ರೋಶ ವ್ಯಕ್ತಪಡಿಸಿದರು.

ದೇಶವನ್ನುದ್ದೇಶಿಸಿ ಶನಿವಾರ ರಾತ್ರಿ ಭಾಷಣ ಮಾಡಿದ ಮೋದಿ ಅವರು, ಮಹಿಳಾ ಮಸೂದೆ ವಿಚಾರದಲ್ಲಿ ಪ್ರತಿಪಕ್ಷಗಳ ನಡೆಯನ್ನು ತೀವ್ರವಾಗಿ ಖಂಡಿಸಿದರು.



ಸಂಸತ್ತಿನಲ್ಲಿ ಮಹಿಳೆಯರ ಹಿತಾಸಕ್ತಿಯ ಪ್ರಸ್ತಾವನೆ ಬಿದ್ದಾಗ ವಿಪಕ್ಷಗಳು ತೋರಿದ ವರ್ತನೆ ತೀವ್ರ ನೋವುಂಟುಮಾಡಿದೆ ಎಂದು ಮೋದಿ ಹೇಳಿದರು. ಮಹಿಳೆಯರ ಹಕ್ಕುಗಳನ್ನು ಕಸಿದುಕೊಂಡು ಚಪ್ಪಾಳೆ ತಟ್ಟುವುದು ಅವರ ಸ್ವಾಭಿಮಾನಕ್ಕೆ ಮಾಡಿದ ಪೆಟ್ಟು ಎಂದು ಬೇಸರ ವ್ಯಕ್ತಪಡಿಸಿದರು. ಮಹಿಳೆಯರು ತಮ್ಮ ಮೇಲೆ ಆಗಿರುವ ಅವಮಾನವನ್ನು ಎಂದಿಗೂ ಮರೆಯುವುದಿಲ್ಲ; ಆದ್ದರಿಂದ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳ ನಡೆ ಮಹಿಳೆಯರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಲಿದೆ ಎಂದು ಎಚ್ಚರಿಸಿದರು. 21ನೇ ಶತಮಾನದ ಮಹಿಳೆ ಎಲ್ಲವನ್ನೂ ಗಮನಿಸುತ್ತಿದ್ದು, ಸತ್ಯವನ್ನು ಅರಿತುಕೊಂಡಿದ್ದಾಳೆ. ಮಹಿಳಾ ಮೀಸಲಾತಿ ವಿರೋಧಿಸಿದವರಿಗೆ ತಕ್ಕ ಉತ್ತರ ನೀಡಲಾಗುತ್ತದೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು.

ಎಲ್ಲರಿಗೂ ಅವಕಾಶ ಯತ್ನ: ಈ ತಿದ್ದುಪಡಿ ಯಾರಿಂದಲೂ ಏನನ್ನೂ ಕಸಿದುಕೊಳ್ಳುವ ಉದ್ದೇಶ ಹೊಂದಿರಲಿಲ್ಲ, ಬದಲಿಗೆ ಎಲ್ಲರಿಗೂ ಅವಕಾಶ ನೀಡುವ ಪ್ರಯತ್ನವಾಗಿತ್ತು ಎಂದು ಪ್ರಧಾನಿ ವಿವರಿಸಿದರು. 40 ವರ್ಷಗಳಿಂದ ಬಾಕಿ ಉಳಿದಿದ್ದ ಮಹಿಳೆಯರ ಹಕ್ಕನ್ನು 2029ರಿಂದ ಜಾರಿಗೊಳಿಸುವ ಮಹತ್ವದ ಹೆಜ್ಜೆ.

➡ ಪುಟ 9



ಮೋದಿ ಪ್ರಮುಖ ಹೇಳಿಕೆಗಳು

- 'ಮಹಿಳೆಯರ ಹಕ್ಕು ಕಸಿದುಕೊಂಡ ಘಟನೆ'
- 'ವಿಪಕ್ಷಗಳ ಸ್ವಾರ್ಥದಿಂದ ಮಸೂದೆ ವಿಫಲ'
- 'ಮಹಿಳೆಯರ ಅವಮಾನ ಮರೆಯುವುದಿಲ್ಲ'
- 'ಸಂಕಲ್ಪ ಅಚಲ ಹೋರಾಟ ಮುಂದುವರಿಯುತ್ತದೆ'
- ಕಾಂಗ್ರೆಸ್, ಡಿಎಂಕೆ, ಟಿಎಂಸಿ, ಎಸ್‌ಪಿಗಳಿಂದ ಸ್ವಾರ್ಥ ರಾಜಕಾರಣ
- ಮಸೂದೆ ಸೋತಾಗ ಮೇಜುಕುಟ್ಟಿ ಸಂಭ್ರಮಿಸಿದ್ದು ನೋವುಂಟು ಮಾಡಿತು
- ನಾರಿ ಎಲ್ಲ ಮರೆಯುತ್ತಾಳೆ, ಆದರೆ ತನ್ನ ಮೇಲಿನ ಅಪಮಾನ ಮರೆಯಲ್ಲ
- ಪ್ರತಿಪಕ್ಷಗಳು ಮಹಿಳಾ ಮಸೂದೆ ಸೋಲಿಸಿ ಭ್ರೂಣಹತ್ಯೆ ಮಾಡಿವೆ
- ವಿರೋಧ ಪಕ್ಷಗಳು ಮಾಡಿದ ಪಾಪಕ್ಕೆ ಆಕೆಯೇ ಶಿಕ್ಷೆ ನೀಡುತ್ತಾಳೆ
- ಸಂವಿಧಾನ ಶಿಲ್ಪಿಗಳ ಆಶಯಕ್ಕೂ ಪ್ರತಿಪಕ್ಷಗಳಿಂದ ಧಕ್ಕೆ

➡ ಪುಟ 9

ಮಸೂದೆ ಮುಖ್ಯ ಅಂಶಗಳು

- ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಗೆ ಮೀಸಲಾತಿ
- 2029ರಿಂದ ಜಾರಿಗೆ ಉದ್ದೇಶ
- 40 ವರ್ಷಗಳ ನಿರೀಕ್ಷೆಗೆ ಅಂತ್ಯ ಮಾಡುವ ಪ್ರಯತ್ನ
- ದೇಶದ ಅರ್ಧ ಜನಸಂಖ್ಯೆಗೆ ರಾಜಕೀಯ ಹಕ್ಕು

ಮೀಸಲಾತಿ ಮಸೂದೆ ವಿಫಲ: ರಾಹುಲ್ ನಿವಾಸಕ್ಕೆ ಮುತ್ತಿಗೆ

• **ಹೊಸದಿಲ್ಲಿ:** ಮಹಿಳಾ ಮೀಸಲಾತಿ ಜಾರಿಗೆ ತರುವ ಸಂಬಂಧ ಮಂಡಿಸಲಾಗಿದ್ದ 131ನೇ ಸಂವಿಧಾನ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಅಂಗೀಕಾರಗೊಳ್ಳಲು ವಿಫಲವಾದ ಹಿನ್ನೆಲೆಯಲ್ಲಿ, ಬಿಜೆಪಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿತು. ಬಿಜೆಪಿ ಮಹಿಳಾ ಮುಖಂಡರು, ಕಾರ್ಯಕರ್ತರು ಶನಿವಾರ ಲೋಕಸಭಾ ವಿಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಸುನೇಹ್ರಿ ಬಾಗ್ ನಿವಾಸಕ್ಕೆ ಮುತ್ತಿಗೆ ಹಾಕಿದ್ದಾರೆ.ಅದೇರೀತಿ ದೇಶದ ಹಲವೆಡೆ ಬಿಜೆಪಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

➡ ಪುಟ 9

ನ್ಯಾಯಾಂಗ ಸಮ್ಮೇಳನದಲ್ಲಿ ಸಿಎಂ ಅಭಿಮತ

ದಕ್ಷಿಣದಲ್ಲಿ ಸುಪ್ರೀಂ ನ್ಯಾಯಖಾತ್ರಿಗೆ ಶಕ್ತಿ



• **ಬೆಂಗಳೂರು:** ದಕ್ಷಿಣ ಭಾರತದಲ್ಲಿ ಸರ್ವೋಚ್ಚ ನ್ಯಾಯಾಲಯದ ಪೀಠ ಸ್ಥಾಪನೆಯಾದರೆ ನ್ಯಾಯವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಬಹು ದೊಡ್ಡ ಹೆಜ್ಜೆ ಇರಿಸಿದಂತಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದಿಂದ ಶನಿವಾರ ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾದ



ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆಯ ಸಹಾಯದಿಂದ ತ್ವರಿತ ಕಾನೂನು ಸಂಶೋಧನೆ, ಪ್ರಕರಣ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಸುಧಾರಿತ ನಿರ್ವಹಣೆ ವ್ಯವಸ್ಥೆಗಳ ಮೂಲಕ ಬಾಕಿ ಇರುವ ಪ್ರಕರಣಗಳನ್ನು ಕಡಿಮೆ ಮಾಡುವ ಸಾಧ್ಯತೆಯಿದೆ ಎಂದರು.

ನ್ಯಾಯಾಂಗ ವ್ಯವಸ್ಥೆಯಲ್ಲಿ ಎಐ ಅಳವಡಿಸಿಕೊಳ್ಳುವುದರ ಕುರಿತು ಆಳವಾದ ಕಳವಳಗಳು ಮೂಡದೆ ಇರಲಾರದು. ಅಲ್ಗಾರಿದಮಿಕ್ ಪಕ್ಷಪಾತವು ಕಾನೂನಿನ ಮುಂದೆ ಸಮಾನತೆಯ ಖಾತರಿ ಹಾಳುಮಾಡಬಹುದು. ಅಪಾರದರ್ಶಕವ್ಯವಸ್ಥೆ ನ್ಯಾಯಾಂಗವ್ಯವಸ್ಥೆಯ ತಾರ್ಕಿಕ ನಿರ್ಧಾರಗಳ ಸಿದ್ಧಾಂತ ದುರ್ಬಲಗೊಳಿಸುವ ಆತಂಕವನ್ನು ಅಲ್ಲಗಳೆಯುವಂತಿಲ್ಲ ಎಂದರು.

➡ ಪುಟ 9

ಲೋಕಾಯುಕ್ತ ಅತ್ಯಂತ ಪರಿಣಾಮಕಾರಿ: ಸಿಜೆಐ

• **ಬೆಂಗಳೂರು:** ಕರ್ನಾಟಕ ಲೋಕಾಯುಕ್ತ ಸಂಸ್ಥೆ ದೇಶದಲ್ಲೇ ಅತ್ಯಂತ ಪರಿಣಾಮಕಾರಿ ಲೋಕಾಯುಕ್ತ ಸಂಸ್ಥೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಭ್ರಷ್ಟಾಚಾರಮುಕ್ತ ಆಡಳಿತ ಮತ್ತು



ಸಾಮಾನ್ಯ ಜನರ ಹಕ್ಕುಗಳ ರಕ್ಷಣೆಯಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ದೇಶಕ್ಕೇ ಮಾದರಿಯಾಗಿದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು. ಶನಿವಾರ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಲೋಕಾಯುಕ್ತ ಸಂಸ್ಥೆಗೆ ನಲವತ್ತರ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

➡ ಪುಟ 9

4 ಶಂಕಿತ ಉಗ್ರರ ಸೆರೆ | ರಾಮಮಂದಿರ, ಸಂಸತ್ ದಾಳಿ ಗುರಿ

ರಿಮೋಟ್ ಕಾರಲ್ಲಿ ಸ್ಫೋಟ ಸಂಚು

• **ಹೊಸದಿಲ್ಲಿ:** ರಾಜಧಾನಿಯಲ್ಲಿ ದೊಡ್ಡ ಭಯೋತ್ಪಾದಕ ಸಂಚನ್ನು ಭೇದಿಸಿದ ದೆಹಲಿ ಪೊಲೀಸರು ಮಹಾರಾಷ್ಟ್ರ, ಒಡಿಶಾ ಹಾಗೂ ಬಿಹಾರ ಮೂಲದ ನಾಲ್ವರು ಶಂಕಿತ ಉಗ್ರರನ್ನು ಬಂಧಿಸಿದ್ದಾರೆ. ಇವರು ರಾಮಮಂದಿರ, ಸಂಸತ್ ಸೇರಿದಂತೆ



ಪ್ರಮುಖ ಸ್ಥಳಗಳ ಮೇಲೆ ದಾಳಿ ನಡೆಸಲು ಯೋಜನೆ ರೂಪಿಸಿದ್ದು, ಆನ್‌ಲೈನ್ ಎನ್‌ಕ್ರಿಪ್ಟೆಡ್ ವೇದಿಕೆಗಳ ಮೂಲಕ ಇತರರನ್ನು ಸೇರಿಸಿಕೊಳ್ಳಲು ಯತ್ನಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರು ಕಾರ್ಯಾಚರಣೆ ವೇಳೆ ಸ್ಫೋಟಕ ಸಾಧನ (ಎಲ್‌ಇಡಿ) ಹಾಗೂ ಸಂಬಂಧಿತ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳಲ್ಲಿ ಇಬ್ಬರು ರಿಮೋಟ್ ನಿಯಂತ್ರಿತ ಆಟಿಕೆ ಕಾರಿನಲ್ಲಿ ಬಾಂಬ್ ಅಳವಡಿಸಿ ಜನಸಂದಣಿ ಪ್ರದೇಶಗಳಲ್ಲಿ ದಾಳಿ ನಡೆಸಲು ಸಿದ್ಧತೆ ನಡೆಸುತ್ತಿದ್ದರು ಎಂದು ಆರೋಪಿಸಲಾಗಿದೆ. ವಿಶೇಷ ದಳವು ಗುಪ್ತಚರ ಮಾಹಿತಿ ಆಧಾರದ ಮೇಲೆ ಮಹಾರಾಷ್ಟ್ರದಿಂದ ಇಬ್ಬರು, ಒಡಿಶಾ, ಬಿಹಾರದಿಂದ ತಲಾ ಒಬ್ಬರನ್ನು ಬಂಧಿಸಿದೆ. ಬಂಧಿತರಲ್ಲಿ ಮೋಸೈಬ್ ಅಷ್ಫದ್, ಮೊಹಮ್ಮದ್ ಹಮ್ಮಾದ್, ಮೊಹಮ್ಮದ್ ಸೋಹೈಲ್, ಶೇಖ್ ಇಮ್ರಾನ್ ಸೇರಿದ್ದಾರೆ. ಇವರು ಸಾಮಾನ್ಯ ಸಾಮಾಜಿಕ-ಆರ್ಥಿಕ ಹಿನ್ನೆಲೆಯವರಾಗಿದ್ದು, ತಾಂತ್ರಿಕ ಕೌಶಲ್ಯ ಬಳಸಿ ದಾಳಿ ರೂಪಿಸಲು ಯತ್ನಿಸುತ್ತಿದ್ದರೆಂದು ಪೊಲೀಸರು ಹೇಳಿದ್ದಾರೆ.

➡ ಪುಟ 9

- ದೆಹಲಿ ಉಗ್ರರ ಸಂಚು ಭೇದಿಸಿದ ಪೊಲೀಸರು
- ರೆಡ್ ಫೋರ್ಟ್, ಇಂಡಿಯಾ ಗೇಟ್ ಸೇರಿದಂತೆ ಪ್ರಮುಖ ಸ್ಥಳಗಳ ಪರಿಶೀಲನೆ
- ಸ್ಫೋಟಕ ಸಾಧನ ವಶಕ್ಕೆ
- ಎನ್‌ಕ್ರಿಪ್ಟೆಡ್ ಆನ್‌ಲೈನ್ ಗುಂಪುಗಳ ಮೂಲಕ ನೇಮಕಾತಿ ಯತ್ನ

ಭಾರತದ ತೈಲ ಹಡಗಿನ ಮೇಲೆ ಇರಾನ್ ದಾಳಿ!



• **ಮುಂಬೈ:** ಹಾರ್ಮುಜ್ ಜಲಸಂಧಿಯಿಂದ ಭಾರತದತ್ತ 20 ಲಕ್ಷ ಬ್ಯಾರೆಲ್ ಇರಾಕಿ ಕಚ್ಚಾ ತೈಲ ಹೊತ್ತು ಹೊರಟಿದ್ದ ಭಾರತೀಯ ಹಡಗೊಂದರ ಸಹಿತ ಒಟ್ಟು 14 ತೈಲ ಹಡಗುಗಳ ಕಾನ್ವಾಯ್ ಮೇಲೆ ಶನಿವಾರ ಇರಾನ್ ನೌಕಾಪಡೆಗೆ ಸೇರಿದ 2 ಗನ್‌ಬೋಟುಗಳು ಗುಂಡಿನ ದಾಳಿ ನಡೆಸಿವೆ.

➡ ಪುಟ 9

- 14 ಭಾರತೀಯ ಹಡಗುಗಳ ಕಾನ್ವಾಯ್ ಮೇಲೆ ದಾಳಿ
- ಗುಂಡಿನ ದಾಳಿಯಿಂದ ಯಾವುದೇ ಹಾನಿಯಾಗಿಲ್ಲ
- ಒಂದು ಹಡಗು ಹಾರ್ಮುಜ್ ದಾಟುವಲ್ಲಿ ಯಶಸ್ವಿ
- ದಾಳಿ ವಿರುದ್ಧ ಎಂಇಎ ಆಕ್ರೋಶ, ಇರಾನ್ ರಾಯಭಾರಿಗೆ ಸಮನ್ಸ್

ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಶೇ.2 ಹೆಚ್ಚಳ

• **ಹೊಸದಿಲ್ಲಿ:** ಕೇಂದ್ರ ಸರಕಾರಿ ನೌಕರರ ತುಟ್ಟಿಭತ್ಯೆ ಮತ್ತು ಪಿಂಚಣಿದಾರರ ಡಿಯರ್‌ನೆಸ್ ರಿಲೀಫ್‌ನ್ನು ಶೇ.2ರಷ್ಟು ಹೆಚ್ಚಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಮಂಜೂರಾತಿ



ನೀಡಲಾಗಿದೆ. ಈ ಮೂಲಕ ಡಿಎ-ಡಿಆರ್ ದರವು ಮೂಲ ವೇತನದ ಶೇ.60ರಷ್ಟಾಗಲಿದೆ. ಈ ಹೆಚ್ಚಳವು 2026ರ ಜ.1 ರಿಂದಲೇ ಪೂರ್ವಾನ್ವಯವಾಗಲಿದೆ.

➡ ಪುಟ 9

ಸಿಪಿಎಂ ಕಾರ್ಯಕರ್ತನಿಗೆ 25 ವರ್ಷ ಜೈಲು

• **ಕಣ್ಣೂರು(ಕೇರಳ):** 2011ರಲ್ಲಿ ಆರ್‌ಎಸ್‌ಎಸ್ ಬಿಜೆಪಿ ಕಾರ್ಯಕರ್ತರ ಮೇಲೆ ನಡೆದ ಬಾಂಬ್ ದಾಳಿ ಪ್ರಕರಣದಲ್ಲಿ ಸಿಪಿಐ(ಎಂ)ಗೆ ಸೇರಿದ 10 ಕಾರ್ಯಕರ್ತರಿಗೆ ಕೇರಳದ ನ್ಯಾಯಾಲಯವು 10 ವರ್ಷದಿಂದ 25 ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ವಿಧಿಸಿದೆ.

• ವಿವರ ಪುಟ ೫





ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,75,000(2,65,000) ಆಪರಂಜಿ ಚಿನ್ನ: 1,55,780(1,54,200) ಆಭರಣ ಚಿನ್ನ: 1,42,800(1,41,350) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ, (ಆವರಣದಲ್ಲಿ ಹಿಂದಿನ ದಿನದ ದರ)

$1 = ₹93.20

ವಿನಯ ಕುಲಕರ್ಣಿಗೆ ಖೈದಿ ನಂಬರ್ 16110

• **ಬೆಂಗಳೂರು:** ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ದೋಷಿಯಾಗಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ವಿನಯ ಕುಲಕರ್ಣಿಗೆ ಸೇರಿದಂತೆ 16 ಮಂದಿ ಅಪರಾಧಿಗಳಿಗೆ ಸಜಾ ಬಂಧಿ ಖೈದಿ ನಂಬರ್ ನೀಡಲಾಗಿದೆ. ಶುಕ್ರವಾರದ ಮೊದಲ ದಿನ ಜೈಲಿನಲ್ಲಿ ಊಟವಿಲ್ಲದೇ, ವಿನಯ ಕುಲಕರ್ಣಿ ಕೇವಲ ಹಣ್ಣು ತಿಂದಿದ್ದಾರೆ. ಅಲ್ಲದೆ, ರಾತ್ರಿಯಿಡಿ ನಿದ್ದೆ ಮಾಡದೆ ಚಿಂತೆಗೀಡಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಗರದ ಸಿಸಿಎಚ್-82 ನ್ಯಾಯಾಲಯ ವಿಧಿಸಿದ ಜೀವಾವಧಿ ಶಿಕ್ಷೆ ತೀರ್ಪು ಪ್ರಕ್ರಿಯೆ ಮುಗಿದ ನಂತರ, ಶುಕ್ರವಾರ ರಾತ್ರಿ 11 ಗಂಟೆ ಸುಮಾರಿಗೆ ಪೊಲೀಸರು ಜೈಲಿನಲ್ಲಿ ಬಿಟ್ಟು ಬಂದಿದ್ದಾರೆ, ವಿನಯ ಕುಲಕರ್ಣಿ ಸೇರಿದಂತೆ 16 ಮಂದಿ ಅಪರಾಧಿಗಳಿಗೂ ಪ್ರಸ್ತುತ ಡಿ ಬ್ಯಾರಕ್‌ನ ಕ್ವಾರಂಟೈನ್ ಸೆಲ್‌ಗೆ ಕಳುಹಿಸಲಾಗಿದೆ.

ಎರಡು ಗುಂಪುಗಳನ್ನಾಗಿ ವಿಂಗಡಿಸಿರುವ ಜೈಲು ಸಿಬ್ಬಂದಿ, ವಿನಯ ಕುಲಕರ್ಣಿ ಜತೆಗೆ ಇತರೆ ಮೂವರು ಅಪರಾಧಿಗಳನ್ನು ಒಂದು ಬ್ಯಾರಕ್‌ನಲ್ಲಿ ಇರಿಸಿದರೆ, ಪಕ್ಕದ ಬ್ಯಾರಕ್‌ನಲ್ಲಿ ಇತರೆ ಅಪರಾಧಿಗಳನ್ನು ಇರಿಸಲಾಗಿದೆ. ಮುಂದಿನ 10 ದಿನಗಳ ಕಾಲ ಎಲ್ಲರೂ ಇಲ್ಲೇ ಇರಲಿದ್ದು, ನಂತರ ಅವರನ್ನು ಬೇರೆಡೆಗೆ ಸ್ಥಳಾಂತರಿಸಲಾಗುತ್ತದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ರಾಜಕೀಯ ಉತ್ತುಂಗದಲ್ಲಿ ಪ್ರತಿದಿನ ಐಷಾರಾಮಿ ಜೀವನ ನಡೆಸುತ್ತಿದ್ದ ವಿನಯ ಕುಲಕರ್ಣಿ ಜೈಲಿನಲ್ಲಿ ಇರಲಾಗದೆ ಶುಕ್ರವಾರ ರಾತ್ರಿಯಿಡೀ ಚಿಂತೆಗೆ ಒಳಗಾಗಿದ್ದರು. ಜತೆಗೆ ರಾತ್ರಿ ಚಪಾತಿ ಊಟ ನೀಡಲಾಗಿತ್ತು. ಸರಿಯಾಗಿ ಆಹಾರ ಸೇವಿಸದೆ ಬೇಜಾರಿನಲ್ಲಿ ಮಲಗಿದ್ದರು. ಶನಿವಾರ ಮುಂಜಾನೆ ಬೇಗ ಎದ್ದು ಸಹ ಕೈದಿಗಳೊಂದಿಗೆ ಕೊಂಚ ಚರ್ಚಿಸಿ, ಬಳಿಕ ಮೌನಕ್ಕೆ ಜಾರಿದ್ದಾರೆ. ಬೆಳಗ್ಗೆ ಸ್ವಲ್ಪ ಉಪಹಾರ ಮತ್ತು ರಾತ್ರಿಯೂ ಸಾಮಾನ್ಯ ಕೈದಿಗಳಂತೆ ಜೈಲಿನ ಊಟವನ್ನು ಸೇವಿಸಿದ್ದಾರೆ ಎಂದು ತಿಳಿದುಬಂದಿದೆ.

ದರ್ಶನ್ ಬ್ಯಾರಕ್‌ನ ಕೂಗಳತೆಯ ದೂರದಲ್ಲಿ ವಿನಯವಾಸ್ತವ್ಯ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ವಾಸವನ್ನು ಅನುಭವಿಸುತ್ತಿರುವ ದರ್ಶನ್ ಇರುವ ಬ್ಯಾರಕ್‌ನಿಂದ ಅದೇ ಮಾರ್ಗದಲ್ಲಿ ಮುಂದೆ ಸಾಗುವ ದಾರಿಯ ಕೂಗಳತೆಯ ದೂರದಲ್ಲೇ ವಿನಯ ಕುಲಕರ್ಣಿ ವಾಸ್ತವ್ಯದ ಬ್ಯಾರಕ್ ಇದೆ ಎಂದು ಗೊತ್ತಾಗಿದೆ.

ಅಪರಾಧಿ ಸಂಖ್ಯೆ

- ವಿಕ್ರಂ ಬಳ್ಳಾರಿ - 16097
- ಕೀರ್ತಿ ಕುಮಾರ್ ಬೆಳ್ಳಟ್ಟಿ - 16098
- ಸಂದೀಪ್ ಸವದತ್ತಿ - 16099
- ವಿನಾಯಕ ಕಟಗಿ - 16100
- ಮಹಾಬಲೇಶ್ವರ ಹೊಂಗಲೇ- 16101
- ಸಂತೋಷ ಸವದತ್ತಿ - 16102
- ದಿನೇಶ್ - 16103
- ಅಶ್ಫಾಕ್ - 16104
- ಸುನಿಲ್ - 16105
- ನಜೀರ್ ಅಹ್ಮದ್ - 16106
- ಶಹನವಾಜ್ - 16107
- ನೂತನ್ - 16108
- ಹರ್ಷಿತ್ - 16109
- ವಿನಯ ಕುಲಕರ್ಣಿ - 16110
- ಚಂದ್ರಶೇಖರ್ ಇಂಡಿ - 16111
- ವಿಕಾಸ್ ಕಲಬುರಗಿ - 16112
- ಚನ್ನಕೇಶವ ಟಿಂಗರಿಕರ್ - 16113


ಕೆ.ಎಸ್. ಸೋಮಶೇಖರ್ ರಾಜ್ಯಸಭೆ ಕಾರ್ಯದರ್ಶಿ

• **ಹೊಸದಿಲ್ಲಿ:** ರಾಜ್ಯಸಭಾ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ಅವರು ಕೆ.ಎಸ್. ಸೋಮಶೇಖರ್ ಅವರನ್ನು ರಾಜ್ಯಸಭೆ ಕಾರ್ಯಾಲಯದ ಕಾರ್ಯದರ್ಶಿಯಾಗಿ



ನೇಮಕ ಮಾಡಿದ್ದು, ಶನಿವಾರದಿಂದ ಜಾರಿಗೆ ಬಂದಿದೆ. 1993ರಲ್ಲಿ ಕಾರ್ಯಾಲಯಕ್ಕೆ ಸೇರಿದ ಅವರು ಹೆಚ್ಚುವರಿ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಸೇರಿದಂತೆ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸಂಸತ್ತಿನ ವ್ಯಾಖ್ಯಾನ, ಆಡಳಿತ ಹಾಗೂ ಸಮಿತಿ ಕಾರ್ಯಗಳಲ್ಲಿ ಪರಿಣತಿ ಹೊಂದಿರುವ ಅವರು ಕರ್ನಾಟಕ ಸರ್ಕಾರದಲ್ಲೂ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅಂತರರಾಷ್ಟ್ರೀಯ ಸಂಸದೀಯ ವೇದಿಕೆಗಳಲ್ಲಿ ಭಾರತವನ್ನು ಪ್ರತಿನಿಧಿಸಿರುವ ಅವರು ಯುಕೆ ಮತ್ತು ಯುರೋಪಿಯನ್ ಯೂನಿಯನ್‌ನಲ್ಲಿ ತರಬೇತಿ ಪಡೆದು, ಜಿನೀವಾ ದ ಐಪಿಯು ಸಭೆಗಳಲ್ಲೂ ಭಾಗವಹಿಸಿದ್ದಾರೆ.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಯೋಗೀಶ್ ಗೌಡ ಹತ್ಯೆ ಪ್ರಕರಣದಲ್ಲಿ, ಶಾಸಕ ವಿನಯ್ ಕುಲಕರ್ಣಿ ಸೇರಿ 16 ಮಂದಿಗೆ ಜೀವಾವಧಿ ಶಿಕ್ಷೆ - ವರದಿ

- ಮಾಡಿದ್ದುಣ್ಣೋ ಮಹರಾಯ, ತಡವಾಗಿರಬಹುದು, ಆದರೆ ಕರ್ಮಫಲ ಉಣ್ಣುವುದನ್ನು ತಡೆಯಲಾಗದು ಎಂಬುದನ್ನು ನಾವು ಮರೆಯಬಾರದು!

ದಿನ ಭವಿಷ್ಯ

ಮೇಷ ಸಕಾರಾತ್ಮಕ ಬೆಳವಣಿಗೆ ಇಂದು ನೀವು ಕಾಣುವಿರಿ. ಭಾವುಕ ಪ್ರಸಂಗದಲ್ಲಿ ಮನಸ್ಸು ದೃಢವಾಗಿರಲಿ. ನಿಮ್ಮ ದೌರ್ಬಲ್ಯ ಪ್ರದರ್ಶಿಸದಿರಿ.

ವೃಷಭ ಬಾಕಿ ಇರುವ ಕೆಲಸ ಪೂರೈಸಿ ಸಮಾಧಾನ ಪಟ್ಟುಕೊಳ್ಳುವಿರಿ. ಹಣದ ಕೊರತೆ ನೀಗಲಿದೆ. ಬಂಧುಮಿತ್ರರ ಭೇಟಿ. ಆರೋಗ್ಯ ಚಿಂತೆ ಮಾಯ.

ಮಿಥುನ ಒತ್ತಡ ಹೆಚ್ಚು, ಕೆಲವು ಕಿರಿಕಿರಿಗೆ ಒಳಗಾಗುವಿರಿ. ಮನೆಯಲ್ಲಿ ಸಂಗಾತಿ ಜತೆ ವಾಗ್ವಾದ ನಡೆದೀತು. ತಾಳ್ಮೆಯಿಂದ ವ್ಯವಹರಿಸಿ. ವಿದ್ಯಾರ್ಥಿಗಳಿಗೆ ಯಶ.

ಕಟಕ ಮನೆಯವರ ಜತೆ ಹೆಚ್ಚು ಸೂಕ್ಷ್ಮವಾಗಿ ವರ್ತಿಸುವಿರಿ. ಅವರ ಭಾವನೆಗೆ ಸ್ಪಂದಿಸುವಿರಿ. ಖರೀದಿ ಉತ್ಸಾಹದಲ್ಲಿ ಜೇಬಿಗೆ ತೂತು ಬಿದ್ದೀತು.

ಸಿಂಹ ದಿನದ ಆರಂಭ ಉತ್ಸಾಹದಿಂದ. ಆದರೆ ಸಂಜೆ ವೇಳೆಗೆ ಬೇಸರದ ಬೆಳವಣಿಗೆ ನಡೆದೀತು. ಕೆಲವರನ್ನು ಅತಿಯಾಗಿ ಹಚ್ಚಿಕೊಳ್ಳದಿರಿ.

ಕನ್ಯಾ ಹೆಚ್ಚು ಪರಿಶ್ರಮ ಬೇಡುವ ದಿನ. ಏಕೆಂದರೆ ಯಾವುದೂ ಸುಲಭದಲ್ಲಿ ಸಾಧ್ಯವಾಗದು. ಅಪ್ತರು ಮುನಿಸಿಕೊಳ್ಳಬಹುದು. ಆರ್ಥಿಕ ವ್ಯಯ ಹೆಚ್ಚು.

ತುಲಾ ಪ್ರವಾಸದ ಸಾಧ್ಯತೆ. ಹೊಸ ವ್ಯವಹಾರದಲ್ಲಿ ಹಣ ಹೂಡದಿರಿ. ಬಾಕಿ ಇರುವ ಕಾರ್ಯ ಮುಗಿಸಿ. ಇಲ್ಲವಾದರೆ ಒತ್ತಡ ಎದುರಿಸುವಿರಿ.

ವೃಶ್ಚಿಕ ಮಾನಸಿಕ ಒತ್ತಡವು ನಿಮ್ಮ ಕಾರ್ಯದಲ್ಲಿ ಪ್ರತಿಫಲಿಸಬಹುದು. ನಿಮ್ಮ ಮಿತಿಯಲ್ಲೆ ಕಾರ್ಯಾಚರಿಸಿ. ಕೈಗೆ ಎಟುಕದ ವಿಷಯ ಬಿಡಿ.

ಧನು ನಿಮ್ಮ ಯಾವುದೋ ಕೆಲಸ ಅರ್ಧದಲ್ಲೆ ನಿಂತು ಬಿಟ್ಟಿದೆ. ಅದರ ವ್ಯಾಕುಲ ಕಾಡುವುದು. ಇನ್ನೂ ಕೆಲವು ದಿನ ನೀವು ಕಾಯಬೇಕಾಗುವುದು.

ಮಕರ ವೃತ್ತಿಯಲ್ಲಿ ಉನ್ನತಿ. ಉದ್ದೇಶಿತ ಕಾರ್ಯ ಪೂರ್ಣ. ಆದರೆ ಕೌಟುಂಬಿಕ ಅಸಹನೆ. ಶಾಂತಿ, ಸೌಹಾರ್ದತೆ ದೂರ. ಧನವ್ಯಯ ಅಧಿಕ.

ಕುಂಭ ಸಮಸ್ಯೆ ಪರಿಹಾರಕ್ಕೆ ಆತುರ ತೋರಬೇಡಿ. ಸಾವಧಾನವಾಗಿ ಯೋಚಿಸಿ ನಿರ್ಧಾರ ತಾಳಿ. ಅವಶ್ಯ ಸಹಕಾರ ಪಡೆಯಿರಿ. ಬಂಧು ಭೇಟಿ.

ಮೀನ ನಿರಾಳ ದಿನ. ಕಾಡುತ್ತಿದ್ದ ಚಿಂತೆ ಪರಿಹಾರ. ಉತ್ಸಾಹ ತುಂಬುವ ಕಾರ್ಯದಲ್ಲಿ ತೊಡಗಿ. ಬಂಧುಮಿತ್ರರ ಭೇಟಿ ಸಂತೋಷ ತರಲಿದೆ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 1,6,3,8

ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಇತ್ತು: ಬಿಎಸ್‌ವೈ

ಕಾಂಗ್ರೆಸ್ ಮಹಿಳಾ ವಿರೋಧಿ

• **ಬೆಂಗಳೂರು:** ಮಹಿಳಾ ಮೀಸಲಾತಿ ವಿರೋಧಿಸುವುದು ಸಮಾನತೆಯ ತತ್ವವನ್ನು ವಿರೋಧಿಸಿದಂತೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಿಳಿಸಿದರು.



ಶನಿವಾರ ಮಾಧ್ಯಮಗಳ ಜೊತೆ ಮಾತನಾಡಿ, ವಿಪಕ್ಷಗಳ ಮಹಿಳಾ ವಿರೋಧಿ ನೀತಿಯನ್ನು ಖಂಡಿಸಿದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಸಮಾನ ಅವಕಾಶ ಇತ್ತು. ಮಹಿಳೆಯರಿಗೆ ರಾಜಕೀಯದಲ್ಲಿ ಪ್ರವೇಶ ಸಿಗುವುದೆಂದರೆ ಅದು ಅವರ ಹಕ್ಕು. ಅದನ್ನು ವಿರೋಧಿಸುವುದು ಸಮಾನತೆಯ ವಿರುದ್ಧ ಎಂದು ನುಡಿದರು.

ಹಣಕಾಸಿನ ವ್ಯವಹಾರ ಸರಿ ಮಾಡದೇ, ವಿದ್ಯುತ್ ದರವನ್ನು ಏರಿಸಿದ್ದು ಖಂಡಿತ ಸರಿಯಲ್ಲ.ಸರ್ಕಾರಈ ನಿರ್ಧಾರವನ್ನು ತಕ್ಷಣ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಜನರು ನೆಮ್ಮದಿ, ಸ್ವಾಭಿಮಾನದಿಂದ ಬದುಕಲು ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದರು. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನ ಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸುವುದು ನಿಶ್ಚಿತ ಎಂದು ಅವರು ತಿಳಿಸಿದರು.

ಮಹಿಳೆಯರಿಗೆ ಕಾಂಗ್ರೆಸ್ ದ್ರೋಹ ಬಗೆದಿದೆ: ಅಶೋಕ

ಮಹಿಳಾ ಮೀಸಲಿಗೆ ತಡೆವೊಡ್ಡಿದ ಕಾಂಗ್ರೆಸ್ ಕೋಟ್ಯಂತರ ಮಹಿಳೆಯರಿಗೆ ದ್ರೋಹ ಬಗೆದಿದೆ. ಮಹಿಳೆಯರ ಶಕ್ತಿ ನಿರ್ಲಕ್ಷಿಸಿದ ಕಾಂಗ್ರೆಸ್‌ನ್ನು ದೇಶದ ಜನ ಕ್ಷಮಿಸುವುದಿಲ್ಲ, ಮುಂಬರುವ ರಾಜ್ಯಗಳ ಚುನಾವಣೆಯಲ್ಲಿ ಜನರು ಬುದ್ಧಿ ಕಲಿಸಲಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಭವಿಷ್ಯ ನುಡಿದಿದ್ದಾರೆ. ಶನಿವಾರ ಮಾಧ್ಯಮಗಳ ಜತೆಗೆ ಮಾತನಾಡಿ, ಮಹಿಳಾ ಮೀಸಲು ಮಸೂದೆಗೆ ಸೋಲಾಗಿದ್ದು ಸಾಮಾನ್ಯ ವಿಚಾರ ಅಲ್ಲ, ಇದು ರಾಜಕೀಯ ಪಕ್ಷಗಳ ಪಿತೂರಿ, ನಿರ್ಲಕ್ಷ್ಯ, ಮಹಿಳಾ ವಿರೋಧಿ ಭಾವನೆಯ ಸ್ಪಷ್ಟ ಸಂಕೇತ ಎಂದರು.



ಫ್ರೀ ಬಸ್ ಕೊಟ್ಟರೆ ಸಾಕು: ಮಹಿಳೆಯರಿಗೆ ಪುಕ್ಕಟೆಯಾಗಿ ಎರಡು ಸಾವಿರ ಕೊಟ್ಟರೆ ಸಾಕು. ಫ್ರೀ ಬಸ್ ಕೊಟ್ಟರೆ ಸಾಕು ಮನೆಯಲ್ಲೇ ಇರ್ತಾರೆ. ಅಡಿಗೆ ಮಾಡಿಕೊಂಡು, ದೇವಸ್ಥಾನಕ್ಕೆ ತಿರುಗಿಕೊಂಡು ಇರ್ತಾರೆ. ಅವರಿಗೆ ರಾಜಕೀಯ ಪ್ರಾತಿನಿಧ್ಯ ಸಿಗಬಾರದು. ಸಂಸತ್‌ಗೆ, ವಿಧಾನಸಭೆಗೆ ಹೋಗುವುದು ಬೇಡ ಎಂದು ಕಾಂಗ್ರೆಸ್‌ನವರು ತೀರ್ಮಾನಿಸಿದ್ದಾರೆ. ಮೀಸಲಾತಿ ಕಸಿದ ದ್ರೋಹಿ ಕಾಂಗ್ರೆಸ್ಸಿಗರು ಎಂದರು. ಕ್ಷೇತ್ರ ಮರುವಿಂಗಡಣೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಹೆಚ್ಚಿನ ಕ್ಷೇತ್ರಗಳು ಸಿಗುವಂತೆ ಮಾಡಲು ಅವಕಾಶ ಇತ್ತು. ಆದರೆ ಕಾಂಗ್ರೆಸ್ಸವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡಿದರು. ಈ ಬಗ್ಗೆ ಚರ್ಚೆ ಮಾಡಬಹುದಿತ್ತು. ಹಿಂದೆ ಹಲವು ಬಾರಿ ಕ್ಷೇತ್ರ ಮರುವಿಂಗಡಣೆ ಆದಾಗ ಅವರು ವಿರೋಧಿಸಲಿಲ್ಲ, ಇದೇ ಮೊದಲ ಬಾರಿಗೆ ಆಗಿಲ್ಲ. ಆಗಲೂ ಸಂಸತ್ ಸೀಟು ಹೆಚ್ಚಳ ಆಗಿದೆ. ಆಗ ಇವರು ಬಾಯಿಗೆ ಬಟ್ಟೆ ತುರುಕಿಕೊಂಡಿದ್ದರೇ ಎಂದರು. ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿರೋಧ ಪಕ್ಷಗಳ ನೀತಿಗೆ ಯಡಿಯೂರಪ್ಪ ಖಂಡನೆ

• **ಚಿಕ್ಕಮಗಳೂರು:** ಮಹಿಳಾ ಮೀಸಲಾತಿಯನ್ನು ವಿರೋಧಿಸುವುದು ಬಸವಣ್ಣನವರ ಸಮಾನತೆ ತತ್ವಕ್ಕೆ ವಿರುದ್ಧವಾಗಿದೆ. ವಿರೋಧ ಪಕ್ಷಗಳ ಈ ನೀತಿಯನ್ನು ನಾನು ಖಂಡಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು. ಅವರು ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಮಹಿಳಾ ಮೀಸಲಾತಿಯನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ, ಮಹಿಳಾ ಮೀಸಲಾತಿ ಬಗ್ಗೆ ಬಹಳ ದಶಕಗಳಿಂದ ಮಾತನಾಡಿಕೊಂಡು ಬರುತ್ತಿದ್ದೇವೆ. ಈಗ ಮತ್ತೆ ಅದರ ಬಗ್ಗೆ ಇನ್ನೂ ಚರ್ಚೆ ಆಗಬೇಕು ಎಂದರೆ ಅದು ವಿಳಂಬಮಾಡುವ ನೀತಿ ಎನ್ನುವುದು ಸ್ಪಷ್ಟವಾಗುತ್ತದೆ ಎಂದು ದೂರಿದರು. ರಾಜಕೀಯ ಲಾಭಕ್ಕಾಗಿ ಮಸೂದೆ ತರಲಾಗುತ್ತಿದೆ ಎನ್ನುವುದು ತಪ್ಪು. ಒಳ್ಳೆಯ ನೀತಿ ಯಾವುದಾದರೂ ಒಳ್ಳೆಯದೇ. ಬಸವಣ್ಣನವರು ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಅವಕಾಶಗಳ ಬಗ್ಗೆ ಹೇಳಿದ್ದಾರೆ. ಅವರ ಕಾಲದಲ್ಲಿ ಹೆಣ್ಣು, ಗಂಡು ಭೇದವಿಲ್ಲದೆ ಎಲ್ಲರಿಗೂ ಸಮಾನ ಹಕ್ಕು ಕೊಡಲು ಹೋರಾಟ ಮಾಡಿದರು. ಈಗ ಮಹಿಳಾ ಮೀಸಲಾತಿ ವಿರೋಧಿಸುವುದು ಸಮಾನತೆ ತತ್ವಕ್ಕೆ ವಿರುದ್ಧವಾಗಿದೆ ಎಂದರು. ಮಹಿಳೆಯರು ರಾಜಕೀಯ ಪ್ರವೇಶಿಸುವುದು ಅವರ ಹಕ್ಕು, ಅದನ್ನು ವಿರೋಧಿಸುವುದು ಸಮಾನತೆಯ ವಿರುದ್ಧ. ಇದನ್ನು ಅರ್ಥ ಮಾಡಿಕೊಂಡು ವಿರೋಧ ಮಾಡುತ್ತಿರುವವರು ಪ್ರಧಾನಿ ಅವರ ಐತಿಹಾಸಿಕ ತೀರ್ಮಾನಕ್ಕೆ ಬೆಂಬಲ ಕೊಡಬೇಕು ಎಂದರು.

ವಿದ್ಯುತ್ ದರ ಏರಿಕೆಗೆ ಖಂಡನೆ: ರಾಜ್ಯ ಸರ್ಕಾರ ಬೇಕಾಬಿಟ್ಟಿ ವಿದ್ಯುತ್ ದರ ಏರಿಸುತ್ತಿದೆ. ಇದು ಖಂಡಿತ ಸರಿಯಲ್ಲ ಎಂದು ಯಡಿಯೂರಪ್ಪ ಹೇಳಿದರು. ಸರಿಯಾಗಿ ಆಡಳಿತ ಮಾಡದೆ, ಹಣಕಾಸಿನ ವ್ಯವಹಾರವನ್ನೂ ಸರಿ ಮಾಡದೆ. ಈಗ ವಿದ್ಯುತ್ ದರ ಹೆಚ್ಚಿಸಿದರೆ ಸಾಮಾನ್ಯ ಜನ ಅದನ್ನು ಭರಿಸಲು ಸಾಧ್ಯವಾಗುವುದಿಲ್ಲ. ತಕ್ಷಣ ಈ ನಿರ್ಧಾರ ವಾಪಾಸ್ ತೆಗೆದುಕೊಳ್ಳಬೇಕು. ಜನರು ಸ್ವಾಭಿಮಾನದಿಂದ, ನೆಮ್ಮದಿಯಿಂದ ಬದುಕಲು ಅವಕಾಶ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ಖಾನಾಪುರಕ್ಕೆ ಕಾಡಾನೆ: ಆತಂಕ

• **ಖಾನಾಪುರ:** ಅರಣ್ಯ ಪ್ರದೇಶದ ತನ್ನ ಹಿಂಡಿನಿಂದ ತಪ್ಪಿಸಿಕೊಂಡ 10-12 ವರ್ಷ ವಯಸ್ಸಿನ ಕಾಡಾನೆಯೊಂದು ಶನಿವಾರ ಪಟ್ಟಣದ ಹೊರವಲಯದ ಜನವಸತಿ ಪ್ರದೇಶಗಳ ಬಳಿ ಕಾಣಿಸಿಕೊಂಡು ಆತಂಕ ಸೃಷ್ಟಿಸಿತ್ತು.

ಶುಕ್ರವಾರ ಮಧ್ಯಾಹ್ನ ಮತ್ತು ಸಂಜೆಯ ಹೊತ್ತಿನಲ್ಲಿ ತಾಲೂಕಿನ ಜಾಂಬೋಟಿ ರಸ್ತೆಯ ನಾಗುರ್ಡಾ, ಮೋದೆಕೊಪ್ಪ, ಕಾನಸುಲಿ ಗ್ರಾಮಗಳ ವ್ಯಾಪ್ತಿಯಲ್ಲಿ ಕಾಣಿಸಿಕೊಂಡಿದ್ದ ಆನೆ ಶನಿವಾರ ನಸುಕಿನಜಾವ ಬಾಚೋಳಿ ಮೂಲಕ ಪಟ್ಟಣ ಪ್ರವೇಶಿಸಿ ಶಿವಾಜಿನಗರ, ಮಯೇಕರ ನಗರ, ಅಸೋಗಾ ರಸ್ತೆ, ರೈಲ್ವೆ ಸ್ಟೇಶನ್ ಪ್ರದೇಶದಲ್ಲಿ ಕಾಣಿಸಿಕೊಂಡಿತ್ತು.

ಕಳೆದ ಹಲವು ದಿನಗಳಿಂದ ತಾಲೂಕಿನ ನೀಲಾವಡೆ ಅರಣ್ಯದಲ್ಲಿ ತಂಗಿದ್ದ ಕಾಡಾನೆಗಳ ಹಿಂಡಿನಿಂದ ಬೇರ್ಪಟ್ಟ ಆನೆಯೊಂದು ಶನಿವಾರ ಹಗಲು ಹೊತ್ತಿನಲ್ಲೇ ಪಟ್ಟಣದ ಹೊರವಲಯದ ಜನವಸತಿ ಪ್ರದೇಶದ ಬಳಿ ಕಾಣಿಸಿಕೊಂಡಿದೆ. ಜನವಸತಿ ಪ್ರದೇಶದ ಬಳಿ ಕಾಡಾನೆ ಪತ್ತೆಯಾದ ಮಾಹಿತಿ ಲಭ್ಯವಾಗುತ್ತಲೇ ಆನೆ ಕಾಣಿಸಿಕೊಂಡ ಪ್ರದೇಶದತ್ತ ನಮ್ಮ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಧಾವಿಸಿದ್ದಾರೆ. ಮಧ್ಯಾಹ್ನದ ಬಳಿಕ ಕಾಡಾನೆ ಅರಣ್ಯದಲ್ಲಿ ಮರೆಯಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಅರಣ್ಯ ಇಲಾಖೆಯ ಸಿಬ್ಬಂದಿ ಆನೆಯ ಚಲನವಲನದ ಬಗ್ಗೆ ನಿಗಾ ವಹಿಸಿದ್ದಾರೆ.

ಉಪಟಳ ನೀಡುತ್ತಿದ್ದ ಹುಲಿ ಸೆರೆ

• **ಸರಗೂರು:** ಗ್ರಾಮಸ್ಥರಿಗೆ ಉಪಟಳ ನೀಡುತ್ತಿದ್ದ ಹುಲಿಯೊಂದನ್ನು ಅರಣ್ಯ ಇಲಾಖೆಯ ಸಿಬ್ಬಂದಿ, ಅಧಿಕಾರಿಗಳು ಸೆರೆ ಹಿಡಿದಿರುವ ಘಟನೆ ಸರಗೂರು



ತಾಲೂಕಿನ ಹಾದನೂರು ಬಳಿ ನಡೆದಿದೆ. ಸರಗೂರು ತಾಲೂಕಿನ ಹಾದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾದನೂರು ಗ್ರಾಮದಲ್ಲಿ ಶುಕ್ರವಾರ ಬೆಳಗ್ಗೆ ಹುಲಿ ಕಾಣಿಸಿಕೊಂಡಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿತು. ಗ್ರಾಮದ ಸಮೀಪದಲ್ಲೇ ಹುಲಿ ಕಾಣಿಸಿಕೊಂಡಿದ್ದರಿಂದ ಜನ ಭಯಗೊಂಡು ಅರಣ್ಯ ಇಲಾಖೆ ಕೂಡಲೇ ಹುಲಿ ಸೆರೆಗೆ ಕ್ರಮವಹಿಸಬೇಕೆಂದು ಒತ್ತಾಯಿಸಿದರು.

ರಾಜ್ ನಡವಳಿಕೆಯೇ ಒಂದು ಸಂದೇಶ

• **ಬೆಂಗಳೂರು:** ವರನಟ ಡಾ.ರಾಜ್‌ಕುಮಾರ್ ಅವರು ಬದುಕಿನ ಒಂದೊಂದು ಹೆಜ್ಜೆಯನ್ನೂ ಹೇಳಿಕೊಟ್ಟರು. ಯಾರಿಗೂ ನೇರವಾಗಿ ಏನನ್ನೂ ಹೇಳದ ಅವರು, ತಮ್ಮ ನಡವಳಿಕೆ ಮುಖಾಂತರವೇ ಸಂದೇಶ ನೀಡುತ್ತಿದ್ದರು ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಡಾ. ಜಯಮಾಲಾ ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದ ನಯನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಾರೀಶಕ್ತಿಗೆ ಅಪಮಾನ

ಪುಟ ೧➡ದೇಶದ ಅರ್ಧ ಜನಸಂಖ್ಯೆಗೆ ನ್ಯಾಯ ನೀಡುವ ಪವಿತ್ರ ಪ್ರಯತ್ನವಾಗಿತ್ತು ಎಂದರು. ಆದರೆ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ಈ ಪ್ರಾಮಾಣಿಕ ಪ್ರಯತ್ನವನ್ನು ಭ್ರೂಣದಲ್ಲೇ ಕೊಂದಿವೆ ಎಂದು ಟೀಕಿಸಿದರು.

ವಂಶಪಾರಂಪರ್ಯಕ್ಕೆ ಪೆಟ್ಟು ಆತಂಕ: ವಿಪಕ್ಷಗಳ ವಿರೋಧದ ಹಿಂದೆ 'ಭಯ'ವೇ ಕಾರಣ ಎಂದು ಮೋದಿ ಆರೋಪಿಸಿದರು. ಮಹಿಳೆಯರು ಸಬಲರಾದರೆ ತಮ್ಮ ವಂಶಪಾರಂಪರ್ಯ ರಾಜಕೀಯಕ್ಕೆ ಧಕ್ಕೆ ಉಂಟಾಗುತ್ತದೆ ಎಂಬ ಆತಂಕವೇ ಇದಕ್ಕೆ ಮೂಲ ಎಂದು ಹೇಳಿದರು. ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ ಮಹಿಳೆಯರು ಮುಂದೆ ಬಂದು ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಸೇವೆ ಸಲ್ಲಿಸುವ ಸಾಧ್ಯತೆಯೇ ಈ ಪಕ್ಷಗಳಿಗೆ ಭೀತಿಯಾಗಿದೆ ಎಂದು ಅವರು ವಿವರಿಸಿದರು.

ಕ್ಷೇತ್ರ ಪುನರ್ವಿಂಗಡಣೆಯ ಸುಳ್ಳು: ಕ್ಷೇತ್ರ ಪುನರ್ವಿಂಗಡಣೆಯ ವಿಚಾರದಲ್ಲಿ ವಿಪಕ್ಷಗಳು ನಿರಂತರವಾಗಿ ಸುಳ್ಳು ಪ್ರಚಾರ ನಡೆಸುತ್ತಿವೆ ಎಂದು ಮೋದಿ ಆರೋಪಿಸಿದರು. ಯಾವುದೇ ರಾಜ್ಯದ ಪ್ರಾತಿನಿಧ್ಯ ಕಡಿಮೆಯಾಗುವುದಿಲ್ಲ, ಬದಲಿಗೆ ಎಲ್ಲಾ ರಾಜ್ಯಗಳ ಸೀಟುಗಳು ಹೆಚ್ಚಾಗಲಿವೆ ಎಂದು ಸರ್ಕಾರ ಸ್ಪಷ್ಟಪಡಿಸಿದ್ದರೂ ಕಾಂಗ್ರೆಸ್, ಡಿಎಂಕೆ, ಟಿಎಂಸಿ ಮತ್ತು ಸಮಾಜವಾದಿ ಪಕ್ಷಗಳು ಜನರನ್ನು ತಪ್ಪು ದಾರಿಗೆಳೆಯುತ್ತಿವೆ ಎಂದರು. ಈ ಮಸೂದೆ ಅಂಗೀಕಾರವಾಗಿದ್ದರೆ ತಮಿಳುನಾಡು, ಬಂಗಾಳ, ಉತ್ತರ ಪ್ರದೇಶ, ಕೇರಳ ಸೇರಿದಂತೆ ಎಲ್ಲಾ ರಾಜ್ಯಗಳಿಗೆ ಲಾಭವಾಗುತ್ತಿತ್ತು ಎಂದು ಹೇಳಿದರು.

ಸುಧಾರಣೆ ವಿರೋಧಿ ಕಾಂಗ್ರೆಸ್: ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ, ಅದು ಸದಾ ಸುಧಾರಣೆಗೆ ವಿರೋಧಿಸುವ ಪಕ್ಷವಾಗಿದೆ ಎಂದು ಆರೋಪಿಸಿದರು. ಜನ್‌ಧನ್, ಆಧಾರ್, ಡಿಜಿಟಲ್ ಪಾವತಿ, ಜಿಎಸ್‌ಟಿ, ತ್ರಿವಳಿ ತಲಾಖ್ ನಿಷೇಧ, 370ನೇ ವಿಧಿ ರದ್ದತಿ, ಸಿಎಎ, ಒಂದು ರಾಷ್ಟ್ರ ಒಂದು ಚುನಾವಣೆ, ಸಮಾನ ನಾಗರಿಕ ಸಂಹಿತೆ, ಹಿಂದುಳಿದ ವರ್ಗದವರಿಗೆ ಮೀಸಲಾತಿ ಸೇರಿದಂತೆ ಅನೇಕ ನಿರ್ಧಾರಗಳನ್ನು ಕಾಂಗ್ರೆಸ್ ವಿರೋಧಿಸಿತ್ತು ಎಂದರು.

ಮೋದಿ ಹೇಳಿಕೆಗಳು

- ಪುಟ ೧➡40 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಮಸೂದೆಗೆ ಒಪ್ಪಿಗೆ ಯತ್ನ
- ಮಹಿಳೆಯರಿಗೆ ಹೊಸ ಅವಕಾಶ ಮಾಡಿಕೊಡುವ ಮಹಾಯಜ್ಞ
- ಭಾರತದ ವಿಕಾಸ ಯಾತ್ರೆಯಲ್ಲಿ ಸಹಯಾತ್ರಿ ಮಾಡುವ ಮಹಾನ್ ಉದ್ದೇಶ
- ಎಲ್ಲ ರಾಜ್ಯಗಳಿಗೂ ಸಮಾನ ಕ್ಷೇತ್ರಗಳ ಮರು ಹಂಚಿಕೆ ಯತ್ನ
- ಹಿಂದಿನಿಂದಲೂ ಮಹಿಳಾ ಮಸೂದೆಗೆ ಕಾಂಗ್ರೆಸ್‌ನಿಂದಲೇ ಅಡ್ಡಿ
- ಕ್ಷೇತ್ರ ಪುನರ್‌ವಿಂಗಡಣೆ ವಿಚಾರದಲ್ಲಿ ಪ್ರತಿಪಕ್ಷಗಳಿಂದ ದೊಡ್ಡ ಸುಳ್ಳು
- ಬಂಗಾಳ, ಉ.ಪ್ರದೇಶ, ಕೇರಳದ ಸ್ಥಾನ ಹೆಚ್ಚುತ್ತಿದ್ದವು

ಮೀಸಲಾತಿ ಮಸೂದೆ ವಿಫಲ: ರಾಹುಲ್ ನಿವಾಸಕ್ಕೆ ಮುತ್ತಿಗೆ

ಪುಟ ೧➡ರಾಹುಲ್ ಗಾಂಧಿ ನಿವಾಸದ ಬಳಿ ಪ್ರತಿಭಟನೆ ನಡೆಸುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಬಳಸಿದರು. 2023ರಲ್ಲಿ ಅಂಗೀಕರಿಸಲಾದ 'ನಾರೀಶಕ್ತಿ ವಂದನ್ ಅಧಿನಿಯಮ'ವನ್ನು ಪ್ರಾಯೋಗಿಕವಾಗಿ ಜಾರಿಗೆ ತರಲು ಈ ತಿದ್ದುಪಡಿ ಅತ್ಯಗತ್ಯ ಎಂದು ಬಿಜೆಪಿ ಸಮರ್ಥಿಸಿಕೊಂಡಿದೆ.

ದಕ್ಷಿಣದಲ್ಲಿ ಸುಪ್ರೀಂ ನ್ಯಾಯಖಾತ್ರಿಗೆ ಶಕ್ತಿ

ಪುಟ ೧➡**ಎಐ ನಿಯಂತ್ರಿಸುವಲ್ಲಿ ನ್ಯಾಯಾಂಗ ಪಾತ್ರ ನಿರ್ಣಾಯಕ:** ಭಾರತದಲ್ಲಿ ಎಐ ನಿಯಂತ್ರಕ ಚೌಕಟ್ಟನ್ನು ರೂಪಿಸುವಲ್ಲಿ ನ್ಯಾಯಾಂಗವು ನಿರ್ಣಾಯಕ ಪಾತ್ರ ವಹಿಸುತ್ತದೆ. ಸರಿಯಾದ ಪ್ರಕ್ರಿಯೆ, ಅನುಪಾತ ಮತ್ತು ಗೌಪ್ಯತೆಯ ಹಕ್ಕಿನ ಸಂರಕ್ಷಣೆಯಂತಹ ವಿಶ್ವಾಸಾರ್ಹ ಸಾಂವಿಧಾನಿಕ ಸಿದ್ಧಾಂತಗಳ ಮೂಲಕ ಕೃತಕ ಬುದ್ಧಿಮತ್ತೆಯ ಪರಿಧಿಯನ್ನು ನಿರ್ಧರಿಸಬೇಕಿದೆ. ನ್ಯಾಯಾಂಗವು ತಂತ್ರಜ್ಞಾನದ ಬಳಕೆದಾರ ಮಾತ್ರವಲ್ಲದೆ ಸಮಾಜದಲ್ಲಿ ಅದರ ನಿಯೋಜನೆಗೆ ಮಾರ್ಗದರ್ಶನ ನೀಡುವ ನೈತಿಕ ದಿಕ್ಸೂಚಿಯೂ ಆಗಿದೆ ಎಂದು ಹೇಳಿದರು.

ನ್ಯಾಯಾಂಗ ಪ್ರಕ್ರಿಯೆಗಳನ್ನು ಬಲಪಡಿಸಲು ತಂತ್ರಜ್ಞಾನವು ಅರ್ಥಪೂರ್ಣ ಅವಕಾಶಗಳನ್ನು ನೀಡುತ್ತದೆ. ಕೃತಕ ಬುದ್ಧಿಮತ್ತೆಯು ನೆರವಿನಿಂದ ಕಾನೂನು ನಿರ್ವಹಣಾ ವ್ಯವಸ್ಥೆ ಸುಧಾರಿಸಬಹುದು. ಸವಾಲಿನ ಪ್ರಕರಣಗಳ ನಿರ್ವಹಣೆಯನ್ನು ಸುಗಮಗೊಳಿಸಬಹುದು. ಆಗಬಹುದಾದ ವಿಳಂಬವನ್ನು ತಪ್ಪಿಸಬಹುದು. ಆದರೆ ಈ ಎಲ್ಲಾ ನಾವೀನ್ಯತೆಗಳನ್ನು ಜಾಗರೂಕತೆಯಿಂದ ಅಳವಡಿಸಿಕೊಳ್ಳಬೇಕು ಎಂಬುದನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮಾತನಾಡಿ, ಈಗ ನ್ಯಾಯಾಂಗ ವ್ಯವಸ್ಥೆಯಲ್ಲಿ ಎಐ ಅಳವಡಿಸಬೇಕೇ ಅಥವಾ ಬೇಡವೇ ಎಂಬುದು ಪ್ರಶ್ನೆಯಾಗಿ ಉಳಿದಿಲ್ಲ, ಯಾವ ರೀತಿಯಲ್ಲಿ ಇದನ್ನು ಅಳವಡಿಸಬೇಕು ಎಂಬುದಷ್ಟೇ ಈಗಿನ ಪ್ರಶ್ನೆಯಾಗಿದೆ.

ಲೋಕಾಯುಕ್ತ ಅತ್ಯಂತ ಪರಿಣಾಮಕಾರಿ: ಸಿಜೆಐ

ಪುಟ ೧➡**ಲೋಕಾಯುಕ್ತ ಸಂಸ್ಥೆಯು ಕಳೆದ 40 ವರ್ಷಗಳಿಂದ ಸಾರ್ವಜನಿಕ ಸೇವೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರು. ಜನರಿಗೆ ಆಡಳಿತವನ್ನು ಅರ್ಥವಾಗುವಂತೆ ಮತ್ತು ಸುಲಭವಾಗಿ ತಲುಪುವಂತೆ ಮಾಡುವ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ಲೋಕಾಯುಕ್ತ ಸಂಸ್ಥೆ ಪ್ರಮುಖ ಪಾತ್ರ ವಹಿಸುತ್ತದೆ. ಕಳೆದ ನಾಲ್ಕು ದಶಕಗಳಲ್ಲಿ, ಇದು ಸರ್ಕಾರಿ ಮೇಲ್ವಿಚಾರಣೆಯನ್ನು ಹೆಚ್ಚು ವಿಶ್ವಾಸಾರ್ಹವಾಗಿಸಿದೆ ಎಂದು ಹೇಳಿದರು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ನ್ಯಾ. ಬಿ.ವಿ. ನಾಗರತ್ನ, ನ್ಯಾ. ಅರವಿಂದ್‌ಕುಮಾರ್ ಸೇರಿ ಹಲವು ನ್ಯಾಯಮೂರ್ತಿಗಳು ಉಪಸ್ಥಿತರಿದ್ದರು.**

ಕರ್ನಾಟಕದ ನ್ಯಾಯಾಂಗ ವ್ಯವಸ್ಥೆಯಲ್ಲಿ ದಾಖಲೆಗಳ ಡಿಜಿಟಲೀಕರಣ, ಇ-ಫೈಲಿಂಗ್ ಹಾಗೂ ಕಾಗದರಹಿತ ವ್ಯವಸ್ಥೆ ನಿರ್ಮಿಸುವ ದಿಸೆಯಲ್ಲಿ ಉಪಕ್ರಮಗಳು ಆರಂಭಗೊಂಡಿದ್ದು, ಇದು ವೇಗ ಪಡೆದುಕೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಬೆಂಗಳೂರಿನ ನ್ಯಾಯಾಲಯಗಳಲ್ಲಿ ಕಡತಗಳ ಸಂಗ್ರಹ ಹಾಗೂ ಬೇಕೆಂದಾಗ ಅವುಗಳ ಲಭ್ಯತೆಯೇ ದೊಡ್ಡ ತೊಡಕಾಗಿತ್ತು ಎಂದರು.

ಕೇಂದ್ರ ಸರ್ಕಾರಿ ನೌಕರರಿಗೆ ತುಟಿ ಭತ್ಯೆ ಶೇ.2 ಹೆಚ್ಚಳ

ಪುಟ ೧➡ಸರಕಾರದ ಈ ಮಹತ್ವದ ನಿರ್ಧಾರದಿಂದ ಬರೋಬ್ಬರಿ 50.46 ಲಕ್ಷ ಸರಕಾರಿ ಉದ್ಯೋಗಿಗಳು, 68.27ಲಕ್ಷ ಪಿಂಚಣಿದಾರರಿಗೆ ತುಂಬ ಪ್ರಯೋಜನವಾಗ ಲಿದೆ. ಈ ಪ್ರಮುಖ ನಿರ್ಧಾರ ದಿಂದ ಸರಕಾರದ ಬೊಕ್ಕಸಕ್ಕೆ ವಾರ್ಷಿಕ ರೂ.6,791ಕೋಟಿ ರೂ.ಗಳಷ್ಟು ಹೆಚ್ಚುವರಿ ವೆಚ್ಚವಾಗಲಿದೆ.

ರಿಮೋಟ್ ಕಾರಲ್ಲಿ ಸ್ಫೋಟ ಸಂಚು

ಪುಟ ೧➡ಜತೆಗೆ ಈ ನಾಲ್ವರು ಖಲೀಫತ್ ಸ್ಥಾಪನೆ ಎಂಬ ಅತಿರೇಕಿ ಚಿಂತನೆಗಳಿಂದ ಪ್ರೇರಿತರಾಗಿದ್ದು, 'ಘಜ್ವಾ-ಎ-ಹಿಂದ್' ಮುಂತಾದ ಅಭಿಯಾನಗಳನ್ನು ಪ್ರಚಾರ ಮಾಡುತ್ತಿದ್ದರೆಂದು ಪೊಲೀಸರು ತಿಳಿಸಿದ್ದಾರೆ. ಅವರ ಚಟುವಟಿಕೆಗಳು ಗುಪ್ತ ಹಾಗೂ ಎನ್‌ಕ್ರಿಪ್ಟೆಡ್ ಸೋಶಿಯಲ್ ಮೀಡಿಯಾ ಗುಂಪುಗಳ ಮೂಲಕ ನಡೆಯುತ್ತಿದ್ದು, ಅಲ್ಲಿ ಜಿಹಾದ್, ಅತಿರೇಕಿ ಸಿದ್ಧಾಂತ ಮತ್ತು ಶಸ್ತ್ರಾಸ್ತ್ರಗಳ ಕುರಿತು ವಿಷಯ ಹಂಚಿಕೊಳ್ಳಲಾಗುತ್ತಿತ್ತು. ಹೊಸ ಸದಸ್ಯರನ್ನು ಗುರುತಿಸಿ, ಅವರನ್ನು ಪ್ರಭಾವಿತಗೊಳಿಸಿ ನೇಮಕಾತಿ ಮಾಡುವುದೇ ಉದ್ದೇಶವಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ. ತನಿಖೆಯಲ್ಲಿ 2025 ಡಿಸೆಂಬರ್‌ನಲ್ಲಿ ಆರೋಪಿಗಳಲ್ಲಿ ಒಬ್ಬರು ದೆಹಲಿಗೆ ಭೇಟಿ ನೀಡಿ ರೆಡ್ ಫೋರ್ಟ್ ಹಾಗೂ ಇಂಡಿಯಾ ಗೇಟ್ ಸೇರಿದಂತೆ ಪ್ರಮುಖ ಸ್ಥಳಗಳ ಪರಿಶೀಲನೆ ನಡೆಸಿದ್ದುದೂ ಬೆಳಕಿಗೆ ಬಂದಿದೆ. ರಾಮಮಂದಿರ (ಅಯೋಧ್ಯೆ), ಸಂಸತ್ ಭವನ ಮತ್ತು ಕೆಲವು ಸೇನಾ ಸ್ಥಾಪನೆಗಳ ಮೇಲೆ ದಾಳಿ ನಡೆಸುವ ಕುರಿತು ಚರ್ಚೆಗಳು ನಡೆದಿದ್ದವು ಎನ್ನಲಾಗಿದೆ.

ಭಾರತದ ತೈಲ ಹಡಗಿನ ಮೇಲೆ ಇರಾನ್ ದಾಳಿ!

ಪುಟ ೧➡14 ಹಡಗುಗಳಲ್ಲಿ ಕೇವಲ 2 ಹಡಗುಗಳ ಮೇಲೆ ಇರಾನ್ ಗನ್‌ಬೋಟುಗಳು ದಾಳಿ ನಡೆಸಿದ್ದು, ಅವುಗಳಲ್ಲಿ ಒಂದು ಹಡಗಿಗೆ ಮಾತ್ರ ಗುಂಡು ತಗುಲಿದೆ. 14ರಲ್ಲಿ ಒಂದು ಹಡಗು ಹಾರ್ಮುಜ್ ಜಲಸಂಧಿಯನ್ನು ದಾಟುವಲ್ಲಿ ಯಶಸ್ವಿಯಾಗಿದ್ದು, ಉಳಿದ 13 ಹಡಗುಗಳು ಗುಂಡಿನ ದಾಳಿ ಕಾರಣ ಹಿಂದಿರುಗಿವೆ. ಒಮಾನ್‌ನಿಂದ 37 ಕಿ.ಮೀ. ಈಶಾನ್ಯದಲ್ಲಿ ಗನ್‌ಬೋಟುಗಳು ದಾಳಿ ನಡೆಸಿವೆ. ಟೆಶ್ಮ್ ಮತ್ತು ಲರಾಕ್ ದ್ವೀಪಗಳ ನಡುವೆ ಘಟನೆ ಸಂಭವಿಸಿದೆ ಎಂದು ವರದಿಯಾಗಿದೆ.

ಹಾರ್ಮುಜ್‌ನಲ್ಲಾದ ಅಘಾತಕಾರಿ ಬೆಳವಣಿಗೆಯ ಹಿನ್ನೆಲೆ ಭಾರತದತ್ತ ಪ್ರಯಾಣಿಸುತ್ತಿದ್ದ ಎರಡೂ ತೈಲ ಹಡಗುಗಳು ಬಲವಂತವಾಗಿ ಹಿಂದಿರುಗುವ ಪರಿಸ್ಥಿತಿ ಎದುರಾಗಿದೆ ಎಂದು ತಿಳಿದುಬಂದಿದೆ. ಘಟನೆಯ ವಿರುದ್ಧ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ದಿಲ್ಲಿಯಲ್ಲಿನ ಇರಾನ್ ರಾಯಭಾರಿ ಡಾ.ಮೊಹಮ್ಮದ್ ಫಥಾಲಿ ಅವರಿಗೆ ಸಮನ್ ಕಳುಹಿಸಿ ಕರೆಸಿಕೊಂಡಿದ್ದು, ತನ್ನ ಪ್ರತಿಭಟನೆಯನ್ನು ಸಲ್ಲಿಸಿದೆ. ಅಲ್ಲದೆ, ಆದಷ್ಟು ಬೇಗನೆ ಭಾರತೀಯ ಹಡಗುಗಳ ಸುರಕ್ಷಿತ ಸಂಚಾರ ಪ್ರಕ್ರಿಯೆಗೆ ಅನುವು ಮಾಡಿಕೊಡಬೇಕು ಎಂದು ರಕ್ಷಣಾ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಇರಾನ್ ರಾಯಭಾರಿಗೆ ತಾಕೀತು ಮಾಡಿದ್ದಾರೆ. ಜಗ್ ಅರ್ನಾವ್ ಮತ್ತು ಸನ್ಮಾರ್ ಹೆರಾಲ್ಡ್ ಎಂಬ ಹೆಸರಿನ ಎರಡು ತೈಲ ಹಡಗುಗಳು ಹಾರ್ಮುಜ್‌ನಿಂದ ಹೊರಟಿದ್ದು, ಜಗ್ ಅರ್ನಾವ್ ಹಡಗಿನ ಮೇಲೆ ಇರಾನ್ ಗನ್‌ಬೋಟುಗಳು ಗುಂಡಿನ ದಾಳಿ ನಡೆಸಿದ್ದವು. ಆದರೆ ಸನ್ಮಾರ್ ಹೆರಾಲ್ಡ್ ಅನ್ನು ಗುರಿಯಾಗಿಸಿ ದಾಳಿ ನಡೆದಿರಲಿಲ್ಲ. ಗುಂಡಿನ ದಾಳಿ ಹೊರತಾಗಿಯೂ ಜಗ್ ಅರ್ನಾವ್ ತೈಲ ಟ್ಯಾಂಕರ್‌ಗೆ ಹಾನಿಯಾಗಿಲ್ಲ.

ಪರಿಸ್ಥಿತಿ ಅವಲೋಕಿಸಿದ ಭಾರತೀಯ ನೌಕಾಪಡೆ: ಹಾರ್ಮುಜ್‌ನಲ್ಲಿ ಈ ಹಿಂದೆಯೇ ಭಾರತ ನಿಯೋಜಿಸಿದ್ದ ಭಾರತೀಯ ನೌಕಾಪಡೆಗೆ ಸೇರಿದ ಎರಡು ಯುದ್ಧನೌಕೆಗಳು ಪರಿಸ್ಥಿತಿಯ ಅವಲೋಕನ ನಡೆಸುತ್ತಿವೆ. ಘಟನೆಗೆ ಕಾರಣವೇನೆಂದು ಮಾಹಿತಿಯನ್ನು ಕಲೆಹಾಕುವಲ್ಲಿ ಭಾರತೀಯ ನೌಕಾಪಡೆ ಅಧಿಕಾರಿಗಳು ವ್ಯಸ್ತವಾಗಿದ್ದಾರೆಂಬ ಮಾಹಿತಿ ಲಭ್ಯವಾಗಿದೆ.

ಭಾರತೀಯ ತೈಲ ಹಡಗುಗಳು ಸುರಕ್ಷಿತ!: ಇರಾನ್ ಗನ್‌ಬೋಟುಗಳ ಗುಂಡಿನ ದಾಳಿ ಹೊರತಾಗಿಯೂ ಎರಡು ಹಡಗುಗಳಿಗೂ ಅದರಲ್ಲಿದ್ದ ಸಿಬ್ಬಂದಿಗೂ ಯಾವುದೇ ಹಾನಿಯಾಗಿಲ್ಲ ಎಂದು ತಿಳಿದುಬಂದಿದೆ. ಇವೆರಡರಲ್ಲಿ ಒಂದು ವಿಎಲ್‌ಸಿಸಿ (ಬೃಹತ್ ತೈಲ ಕ್ಯಾರಿಯರ್) ಸೂಪರ್ ಟ್ಯಾಂಕರ್ ಹಡಗು ಆಗಿದ್ದು, ಇವೆರಡರಲ್ಲಿ 2 ದಶಲಕ್ಷ ಬ್ಯಾರೆಲ್ ಇರಾಕಿ ಕಚ್ಚಾತೈಲವಿತ್ತೆಂದು ಟ್ಯಾಂಕರ್ ಟ್ರ್ಯಾಕರ್ ದೃಢೀಕರಿಸಿದೆ.

ಇರಾನ್ ರಾಯಭಾರಿಗೆ ಎಂಇಎ ಸಮನ್

ಭಾರತೀಯ ತೈಲ ಹಡಗುಗಳ ಮೇಲೆ ಇರಾನ್ ಗನ್‌ಬೋಟುಗಳು ಗುಂಡಿನ ದಾಳಿ ನಡೆಸಿದ ಬಳಿಕ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ದಿಲ್ಲಿಯಲ್ಲಿನ ಇರಾನ್ ರಾಯಭಾರಿ ಡಾ.ಮೊಹಮ್ಮದ್ ಫಥಾಲಿ ಅವರಿಗೆ ಸಮನ್ ಕಳುಹಿಸಿದೆ.



ಭಾರತದ ವ್ಯಾಪಾರಿ ಹಡಗುಗಳ ಮೇಲೆ ನಡೆಸಿದ ದಾಳಿಯನ್ನು ಸಭೆಯಲ್ಲಿ ರಕ್ಷಣಾ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ವಿರೋಧಿಸಿದ್ದಾರೆ. ಭಾರತದ ದೃಷ್ಟಿಕೋನವನ್ನು ಇರಾನ್ ಆಡಳಿತಕ್ಕೆ ತಿಳಿಸುವಂತೆ ಮಿಸ್ರಿ ಇರಾನ್ ರಾಯಭಾರಿಗೆ ಸ್ಪಷ್ಟಪಡಿಸಿದ್ದಾರೆ. ಭಾರತದತ್ತ ಪ್ರಯಾಣಿಸುವ ಎಲ್ಲಾ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಮಿಸ್ರಿ ಇರಾನ್‌ಗೆ ತಾಕೀತು ಮಾಡಿದ್ದಾರೆ. ಈ ಸಂಬಂಧ ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ಅಧಿಕೃತ ಹೇಳಿಕೆಯನ್ನು ಎಕ್ಸ್ ಪೋಸ್ಟ್‌ನಲ್ಲಿ ಹಂಚಿಕೊಂಡಿದ್ದಾರೆ. ಇರಾನ್ ರಾಯಭಾರಿಯನ್ನು ಕರೆಸಿಕೊಂಡು ಘಟನೆ ವಿರುದ್ಧ ಕೇಂದ್ರ ಸರ್ಕಾರ ತನ್ನ ಪ್ರತಿಭಟನೆಯನ್ನು ಸಲ್ಲಿಸಿದೆ. ಈ ಮೂಲಕ ಇರಾನ್ ಆಡಳಿತದ ಮೇಲೆ ಭಾರತ ಒತ್ತಡ ಹೇರಿದೆ. ಯಾವ ಕಾರಣಕ್ಕಾಗಿ ಭಾರತೀಯ ತೈಲ ಹಡಗುಗಳ ಮೇಲೆ ಗುಂಡಿನ ದಾಳಿ ನಡೆಸಿದ್ದೀರಿ? ಸ್ನೇಹ ರಾಷ್ಟ್ರವಾದ ಭಾರತದ ತೈಲ ಹಡಗುಗಳ ಮೇಲೆ ಯಾಕೆ ದಾಳಿ ಮಾಡಲಾಗಿದೆ? ಎಂದು ಇರಾನ್ ರಾಯಭಾರಿಯನ್ನು ಪ್ರಶ್ನಿಸಲಾಗಿದೆ ಎಂದು ವರದಿಯಾಗಿದೆ.

ಹಾರ್ಮುಜ್ ಸುರಕ್ಷಿತವೇ?

ಇತ್ತೀಚೆಗೆ ಘಟನೆಯಿಂದಾಗಿ ಇಂತಹದ್ದೊಂದು ಪ್ರಶ್ನೆ ಎದುರಾಗಿದೆ. ಭಾರತೀಯ ಹಡಗುಗಳ ಮೇಲೆ ಗುಂಡಿನ ದಾಳಿ ಆಗಿರುವುದರ ಹಿಂದಿನ ಕಾರಣವೇನೆಂಬ ಬಗ್ಗೆ ಇರಾನ್ ತನ್ನ ಸ್ಪಷ್ಟನೆ ನೀಡುವುದು ಬಾಕಿಯಿದೆ. ಇರಾನ್ ಮತ್ತು ಒಮಾನ್ ನಡುವಿನ ಈ ಜಲಸಂಧಿಯ ಮೂಲಕ ಜಾಗತಿಕ ಕಚ್ಚಾತೈಲ ಸಾಗಾಟದ ಶೇ.20ರಷ್ಟು ಪಾಲು ದಾಟುತ್ತದೆ. ಆದರೆ ಈ ಘಟನೆಯಿಂದ ಹಾರ್ಮುಜ್‌ನಲ್ಲಿ ಸಾಗರೋತ್ತರ ಸುರಕ್ಷತೆ ವಿಚಾರದಲ್ಲಿ ಹೊಸ ಆತಂಕ ಸೃಷ್ಟಿಸಿದೆ.



ಬನ್ನೇರುಘಟ್ಟಕ್ಕೆ ಬಂದ ದಕ್ಷಿಣ ಆಫ್ರಿಕಾದ ಚೀತಾಗಳು



4
ಚೀತಾಗಳ ಆಗಮನ



• **ಬೆಂಗಳೂರು/ಆನೇಕಲ್:** ಬನ್ನೇರುಘಟ್ಟ ಮೃಗಾಲಯಕ್ಕೆ ದಕ್ಷಿಣ ಆಫ್ರಿಕಾದಿಂದ ತರಿಸಿಕೊಂಡ 4 ಶಿವಂಗಿ (ಚೀತಾ)ಗಳನ್ನು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಶುಕ್ರವಾರ ಮಧ್ಯರಾತ್ರಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು.

ಶುಕ್ರವಾರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸರಕು ಸಾಗಣೆ ವಿಭಾಗಕ್ಕೆ ತೆರಳಿ ಬನ್ನೇರುಘಟ್ಟ ಮೃಗಾಲಯಕ್ಕೆ ಆಗಮಿಸಿರುವ ಈ ವಿದೇಶೀ ಅತಿಥಿಗಳನ್ನು ಬರಮಾಡಿ ಕೊಂಡರು. ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಆಗಮಿಸಿರುವ ಈ ಚೀತಾಗಳಿಗೆ ವಾತಾವರಣ, ಹವಾಮಾನ ಬದಲಾವಣೆಯಾಗುವ ಕಾರಣ ಅವುಗಳಿಗೆ ಯಾವುದೇ ತೊಂದರೆ ಆಗದಂತೆ, ಆರೋಗ್ಯ ಸಮಸ್ಯೆ ಎದುರಾಗದ ರೀತಿಯಲ್ಲಿ ಸೂಕ್ತ ನಿಗಾ ಇಡಬೇಕು. ವನ್ಯಜೀವಿಗಳನ್ನು ಕ್ವಾರಂಟೈನ್‌ನಲ್ಲಿಡಬೇಕು. 30 ದಿನಗಳ ಕಾಲ ಗೊತ್ತುಪಡಿಸಿದ ಆಹಾರ ನೀಡಬೇಕು, ಈ ವಿದೇಶಿ ವನ್ಯಜೀವಿಗಳಿಗೆ ಸೋಂಕು ಏನಾದರೂ ಇದೆಯೇ ಎಂದು ಪರಿಶೀಲಿಸಬೇಕು. ಪ್ರಾಣಿಗಳನ್ನು ಸುರಕ್ಷಿತವಾಗಿ ಬನ್ನೇರುಘಟ್ಟಕ್ಕೆ ಸಾಗಿಸಬೇಕು ಎಂದು ಅಧಿಕಾರಿಗಳಿಗೆ ಮತ್ತು ಪಶು ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು. ಒಂದು ಕಾಲದಲ್ಲಿ ಕರ್ನಾಟಕದ ಕಾಡುಗಳಲ್ಲಿಯೇ ಶಿವಂಗಿ ಎಂದು ಕರೆಸಿಕೊಳ್ಳುವ ಚೀತಾಗಳಿದ್ದವು. ಆದರೆ ರಾಜ್ಯದ ಕಾಡಿನಲ್ಲಿ ಇವು ನಾಮಾವಶೇಷ ಆಗಿವೆ. ಹೀಗಾಗಿ ಮೃಗಾಲಯಗಳಲ್ಲಾದರೂ ಇವುಗಳನ್ನು ನೋಡಲು ಅವಕಾಶ ಆಗಬೇಕು. ಈ ನಿಟ್ಟಿನಲ್ಲಿ ಅವುಗಳ ಸುರಕ್ಷತೆಗೆ ಆದ್ಯ ಗಮನ ನೀಡುವಂತೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ್ ಪನ್ವಾರ್ ಅವರಿಗೆ ಸೂಚಿಸಿದರು.



ಕಾಡು ಪ್ರಾಣಿಗಳ ದಾಳಿ ತಡೆಗೆ ಕ್ರಮ: ಸಚಿವ ಈಶ್ವರ ಖಂಡ್ರೆ

• **ಚಿಕ್ಕಮಗಳೂರು:** ಕಾಡು ಪ್ರಾಣಿಗಳ ದಾಳಿಯಿಂದ ಸಂಭವಿಸುತ್ತಿರುವ ಸಾವುಗಳ ನಿಯಂತ್ರಣಕ್ಕೆ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಲಾಗುವುದು, ಈ ಸಂಬಂಧ ಹಿರಿಯ ಅಧಿಕಾರಿಗಳ ಜತೆ ಚರ್ಚಿಸಲಾಗುವುದು ಎಂದು ಅರಣ್ಯ ಸಚಿವ ಖಂಡ್ರೆ ತಿಳಿಸಿದರು.

ಕಳಸದ ಯಮಗೊಂಡ ಎಸ್ಟೇಟ್‌ನಲ್ಲಿ ಶನಿವಾರ ಕಾಡುಕೋಣ ದಾಳಿ ಯಿಂದ ತೋಟ ಕಾರ್ಮಿಕರೊಬ್ಬರು ಮೃತಪಟ್ಟ ಕುರಿತು ಚಿಕ್ಕಮಗಳೂರು ನಗರದಲ್ಲಿ ಸಂತಾಪ ವ್ಯಕ್ತಪಡಿಸಿ ಪ್ರತಿಕ್ರಿಯಿಸಿದ ಸಚಿವರು, ಕಾಡು ಪ್ರಾಣಿಗಳಿಂದ ಯಾವುದೇ ಸಾವು ಸಂಭವಿಸಬಾರದು ಎನ್ನುವುದು ನಮ್ಮ ಗುರಿ. ನಮ್ಮ ಅಧಿಕಾರಿಗಳು ಇಂತಹ ಘಟನೆ ತಪ್ಪಿಸಲು ಹಗಲಿರುಳೂ ಶ್ರಮಿಸುತ್ತಿದ್ದಾರೆ. ನಿದ್ರೆಯಿಲ್ಲದೆ ಓಡಾಡುತ್ತಿದ್ದಾರೆ. ಸರ್ಕಾರ ಸಹ ಬಹಳಷ್ಟು ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದೆ ಎಂದರು.

ಬ್ಯಾರಿಕೇಡ್ ಅಳವಡಿಸುವುದು, ಟೆಂಟಿಕಲ್ ಫೆನ್ಸಿಂಗ್, ಕಂದಕ ನಿರ್ಮಾಣ, ಆಧುನಿಕ ಉಪಕರಣಗಳ ಬಳಕೆ, ಎಲ್‌ಟಿಎಫ್, ಇಕೆಎಫ್‌ರಚನೆ, ಟಾಸ್ಕ್‌ಫೋರ್ಸ್, ಆ್ಯಂಟಿ ಪೋಚಿಂಗ್ ಕ್ಯಾಂಪ್‌ಗಳನ್ನು ಬಲಪಡಿಸುವ ಕೆಲಸ ಮಾಡಿದ್ದೇವೆ. ಇಷ್ಟೆಲ್ಲಾ ಆದರೂ ಈ ದಾಳಿ ನಡೆದಿದೆ ಎಂದು ವಿಷಾದಿಸಿದರು. ಟ್ರೆಕ್ಕಿಂಗ್ ತೆರಳುವವರಿಗೆ ನಿನ್ನೆ ಇಲಾಖೆಯಿಂದ ಎಸ್‌ಒಪಿ ಬಿಡುಗಡೆ ಮಾಡಲಾಗಿದೆ. ಯಾರ್‍ಯಾರು ಚಾರಣಿಗರಿದ್ದಾರೋ ಅವರೆಲ್ಲರೂ ಈ ಎಸ್‌ಒಪಿಗಳನ್ನು ಪಾಲನೆ ಮಾಡಬೇಕು. ಇಲ್ಲವಾದಲ್ಲಿ ಚಾರಣಿಗರು ಮತ್ತು ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ವಿದ್ಯುತ್ ದರ ಏರಿಕೆ ಕುರಿತು ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಏರಿಕೆಯಾಗಿದೆ. ಈ ಬಗ್ಗೆ ಬಿಜೆಪಿ ಮೊದಲು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದರು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಕಡಿಮೆ ಇದ್ದರೂ ಭಾರತದಲ್ಲಿದರ ಹೆಚ್ಚಿದೆ. ಕೇಂದ್ರದಿಂದ ಬಡವರ ಹಣ ಲೂಟಿಯಾಗುತ್ತಿದೆ. ತೆರಿಗೆ ಪಾಲು ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದರು.

ಸಿಮೆಂಟ್ ನಾಮಫಲಕ ಕುಸಿದು 2 ಮಕ್ಕಳು ಸಾವು

• **ರಾಯಚೂರು (ಮಾನ್ವಿ):** ಜಿಲ್ಲೆಯ ಮಾನ್ವಿ ತಾಲೂಕಿನ ರಾಯಚೂರು ಗ್ರಾಮೀಣ ಕ್ಷೇತ್ರದ ವ್ಯಾಪ್ತಿಯ





ಬೈಲ್ ಮಾರ್ಚೆಡ್ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಬಯಲು ನಾಟಕದ ಪ್ರದರ್ಶನ ವೀಕ್ಷಿಸುತ್ತಿದ್ದ ಸಮಯದಲ್ಲಿ ಸಮುದಾಯ ಭವನದ ಸಿಮೆಂಟಿನ ನಾಮಫಲಕ ಕುಸಿದು ಬಿದ್ದು ಸ್ಥಳದಲ್ಲೇ ಇಬ್ಬರು ಮಕ್ಕಳು ಮೃತಪಟ್ಟಿದ್ದು, ಓರ್ವ ಮಹಿಳೆ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರನ್ನು ಕುರ್ಡಿ ಗ್ರಾಮದ ವಿಶ್ವನಾಥ ನಾಯಕ(9) ಹಾಗೂ ವಡವಟ್ಟಿ ಗ್ರಾಮ ಸಾನ್ವಿತಾ ನಾಯಕ(2) ಎಂದು ಗುರುತಿಸಲಾಗಿದೆ. ಮೃತ ಸಾನ್ವಿತ್ ನಾಯಕನ ತಾಯಿ ವಿಶಾಲಾಕ್ಷಿ ಅವರ 2 ಕಾಲುಗಳು ಮುರಿದು ಗಂಭಿರವಾಗಿ ಗಾಯಗೊಂಡಿದ್ದಾರೆ. ತಂಗಿ ಯಲ್ಲಮ್ಮ ಹಾಗೂ ಗ್ರಾಮದ ಇನ್ನೋರ್ವ ನಿವಾಸಿ ಬಸಮ್ಮ, ಮಗಳು ಲಕ್ಷ್ಮೀ ಗಂಭಿರವಾಗಿ ಗಾಯಗೊಂಡಿದ್ದಾರೆ. ಇವರನ್ನು ರಾಯಚೂರಿನ ಓಪೆಕ್ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಅಂಗವಾಗಿ ರಾತ್ರಿ ಸಮಯದಲ್ಲಿ ಮನರಂಜನೆಗಾಗಿ ನಡೆದ ಬಯಲು ನಾಟಕದ ಪ್ರದರ್ಶನ ಸಂದರ್ಭದಲ್ಲಿ, ರಾತ್ರಿ 11.40ರ ಸಮಯದಲ್ಲಿ ಈ ಘಟನೆ ಸಂಭವಿಸಿದೆ.

ಕಿರುಸುದ್ದಿ

ಕಾಂಗ್ರೆಸ್ ಸರ್ಕಾರದಿಂದ ಬೆಲೆ ಏರಿಕೆ: ಸಿ.ಟಿ.ರವಿ

• **ಚಿಕ್ಕಮಗಳೂರು:** ರಾಜ್ಯದ ಕಾಂಗ್ರೆಸ್ ಸರ್ಕಾರ ಎಲ್ಲದರ ದರವನ್ನೂ ಏರಿಸಿದೆ. ಬಾಕಿ ಉಳಿದಿರುವುದು ಗಾಳಿಯೊಂದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆರೋಪಿಸಿದರು. ವಿದ್ಯುತ್‌ದರವನ್ನು ಮತ್ತೆ ಏರಿಕೆ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿದ ಅವರು, ಮುಖ್ಯಮಂತ್ರಿಗಳೇ ದರ ಏರಿಸಲು ಯಾವುದನ್ನಾದರೂ ಉಳಿಸಿದ್ದೀರ ಎಂದು ಪ್ರಶ್ನಿಸಿದರಲ್ಲದೆ, ನೀವ್ಯಾರಾದರೂ ಗಾಳಿಯೊಂದು ಉಳಿದಿದೆ ಎಂದು ನೆನಪು ಮಾಡಿದರೆ ಅದಕ್ಕೂ ತೆರಿಗೆ ಹಾಕಿಬಿಡುತ್ತಾರೆ ಎಂದು ಟೀಕಿಸಿದರು.



ಅದು ಮುಟ್ಟಿದ ಸೊಪ್ಪಿಲ್ಲ ಎನ್ನುವಂತೆ ಗಾಳಿಯನ್ನೂ ಬಿಡದ ಕಾಂಗ್ರೆಸಿಗರು ಎನ್ನುವ ಜಾಗತಿಕ ದಾಖಲೆ ಆಗಲಿದೆ. ಜಗತ್ತಿನಲ್ಲಿ ಸರ್ವಾಧಿಕಾರಿಗಳೂ ಗಾಳಿ ಮೇಲೆ ತೆರಿಗೆ ಹಾಕಿಲ್ಲ, ಕಾಂಗ್ರೆಸಿಗರಿಗೆ ಅದಕ್ಕೂ ಒಂದು ಅವಕಾಶ ಇದೆ ಅದನ್ನೂ ಮಾಡಿಬಿಡಿ ಎಂದರು. ಕಸದ ಮೇಲೆ ತೆರಿಗೆ ಹೆಚ್ಚಿಸಿ ಆಯಿತು. ನೀರು, ಸ್ಟಾಂಪ್ ಪೇಪರ್, ಜನನ-ಮರಣ ಪತ್ರಗಳು, ಅಡಿಗೆ ಎಣ್ಣೆ, ಕುಡಿಯುವ ಎಣ್ಣೆ, ರೈತರ ಪಹಣಿ ಎಲ್ಲದರ ದರ, ತೆರಿಗೆಯನ್ನು ಏರಿಸಿ ಆಗಿದೆ. ಇನ್ಯಾವುದಾದರೂ ಉಳಿದಿದ್ದರೆ ಅದು ಗಾಳಿ ಮಾತ್ರ ಎಂದರು. ನಿಮ್ಮ ಚಿನ್ನ ನೀವು ಒತ್ತೆಯಿಟ್ಟು ಸಾಲ ಪಡೆಯಲು ಶೇ.0.5 ಸ್ಟಾಂಪ್ ಡ್ಯೂಟಿ ಕಟ್ಟಬೇಕು. ಪೆಟ್ರೋಲ್, ಡೀಸೆಲ್ ಮೇಲೆ ಎರಡು ಬಾರಿ ಸೆಸ್ ಹಾಕಿದರು. ಬಸ್ ದರ ಏರಿಸಿದರು. ಪಂಪ್‌ಸೆಟ್‌ಗೆ ಟಿಸಿ ಕೂರಿಸುವ ದರ ಏರಿಸಿದರು. ಗಾಳಿ ಮೇಲೆ ತೆರಿಗೆ ಹಾಕಿಬಿಟ್ಟರೆ ದಾಖಲೆ ಆಗುತ್ತದೆ ಎಂದರು.

ಪ್ಯಾರಚೂಟ್ ತರಬೇತಿ: ಸೈನಿಕರಿಬ್ಬರಿಗೆ ಗಾಯ

• **ಬಳ್ಳಾರಿ:** ನಗರದ ಹೊರವಲಯದ ಪಿ.ಡಿ ಹಳ್ಳಿ ಪ್ರದೇಶದಲ್ಲಿ ನಡೆದ ಪ್ಯಾರಚೂಟ್ ತರಬೇತಿ ವೇಳೆ ಇಬ್ಬರು ಸೈನಿಕರು ಗಾಯಗೊಂಡ ಘಟನೆ ಶನಿವಾರ ನಡೆದಿದೆ. ಚಿನ್ನರಾಜ್ (25) ಹಾಗೂ ಇನ್ನೊಬ್ಬ ಯೋಧರು ಗಾಯಗೊಂಡವರು. ತರಬೇತಿ ವೇಳೆ ಜಿಗಿಯುವ ಸಂದರ್ಭದಲ್ಲಿ ಸುಮಾರು 50 ಅಡಿ ಎತ್ತರದಿಂದ ಕೆಳಗೆ ಬಿದ್ದ ಹಿನ್ನೆಲೆ ಚಿನ್ನರಾಜ್ (25) ಸೇರಿದಂತೆ ಮತ್ತೊಬ್ಬ ಸೇನಾ ಸಿಬ್ಬಂದಿಗೆ ಗಂಭೀರ ಗಾಯಗಳಾಗಿದ್ದು, ಇವರಲ್ಲಿ ಒಬ್ಬರ ಕಾಲಿನ ಮೂಳೆ ಮುರಿದಿದ್ದು, ಸ್ಥಿತಿ ಗಂಭೀರವಾಗಿದೆ ಎಂದು ತಿಳಿದು ಬಂದಿದೆ. ಈ ತರಬೇತಿಯಲ್ಲಿ ಒಟ್ಟು 417 ಸೈನಿಕರು ಭಾಗವಹಿಸಿದ್ದರು. ಅಪಘಾತ ಸಂಭವಿಸಿದ ಕೂಡಲೇ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕಲ್ಪಿಸಲಾಯಿತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಇಬ್ಬರನ್ನೂ ಹೆಲಿಕಾಪ್ಟರ್ ಮೂಲಕ ಬೆಂಗಳೂರಿಗೆ ಏರ್‌ಲಿಫ್ಟ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪರಾಧಿ ಸ್ಥಾನದಲ್ಲಿ ಕಾಂಗ್ರೆಸ್: ಜೋಶಿ

• **ಹೊಸದಿಲ್ಲಿ:** ಕಾಂಗ್ರೆಸ್ ಶೇ.33 ಮಹಿಳಾ ಮೀಸಲಾತಿಗೆ ವಿರೋಧಿಸುತ್ತ ಅಪರಾಧಿ ಸ್ಥಾನದಲ್ಲಿ ನಿಂತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು. ಶನಿವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ OBC, SC/ST ಮತ್ತು ಮಹಿಳಾ ವಿರೋಧಿಯಾಗಿಯೇ ನಡೆದುಕೊಂಡಿದೆ ಎಂದು ವಾಗ್ದಾಳಿ ನಡೆಸಿದರು. ನೆಹರೂ ಅವರು SC/ST, ರಾಜೀವ್ ಗಾಂಧಿ ಒಬಿಸಿಯನ್ನು, ಮಂಡಲ ಕಮಿಷನ್ ಅನ್ನು ವಿರೋಧಿಸಿದರು. ಇದೀಗ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಮಹಿಳಾ ಮೀಸಲಾತಿಯನ್ನು ಧಿಕ್ಕರಿಸುತ್ತಿದ್ದಾರೆ. ಕಾಂಗ್ರೆಸ್, ಇಂಡಿ ಒಕ್ಕೂಟ ದೇಶದಲ್ಲಿ ಜನರ ವಿಶ್ವಾಸ ಕಳೆದುಕೊಂಡಿದೆ ಎಂದರು.

ಸುಪ್ರೀಂ ಮುಖ್ಯ ನ್ಯಾಯಾಧೀಶ ಸೂರ್ಯಕಾಂತ್ ಇಂಗಿತ

ನ್ಯಾಯಾಂಗದಲ್ಲಿ ಎಐ ಅಸಾಧ್ಯ



• **ಬೆಂಗಳೂರು:** ಕೃತಕಬುದ್ಧಿಮತ್ತೆ ಸೇರಿದಂತೆ ಯಾವುದೇ ಆಧುನಿಕ ತಂತ್ರಜ್ಞಾನದ ಅಳವಡಿಕೆಗೆ ನ್ಯಾಯಾಂಗವ್ಯವಸ್ಥೆಯುಹೊರತಾಗಿರಲುಸಾಧ್ಯವಿಲ್ಲ. ಆದರೆ, ಈ ತಾಂತ್ರಿಕತೆಗಳು ನ್ಯಾಯನಿರ್ಣಯ ಪ್ರಕ್ರಿಯೆಯನ್ನು ಯಾಂತ್ರಿಕವಾಗಿಸಲು ಆಸ್ಪದ ನೀಡಬಾರದು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶ ಸೂರ್ಯಕಾಂತ್ ಹೇಳಿದರು.

ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದಿಂದ ಶನಿವಾರ ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾದ ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ತಂತ್ರಜ್ಞಾನವು ಪರ್ಯಾಯವಾಗಿ ಅಲ್ಲ, ಸಹಾಯಕವಾಗಿ ಉಳಿಯಬೇಕು, ನ್ಯಾಯಾಂಗ ಪ್ರಕ್ರಿಯೆಯಲ್ಲಿ ಎಐ ಏಕೀಕರಣವು ಸಮತೋಲನ ತತ್ವದಿಂದ ಮಾರ್ಗದರ್ಶಿಸಲ್ಪಡಬೇಕು, ದಕ್ಷತೆ ಹೆಚ್ಚಿಸಲು ಅದರ ಪ್ರಯೋಜನ ಬಳಸಿಕೊಳ್ಳಬೇಕು ಎಂದು ಹೇಳಿದರು.

ನ್ಯಾಯನಿರ್ಣಯದಲ್ಲಿ ಸಹಾನುಭೂತಿ, ಅನುಭವಗಳ ಆಧಾರದಲ್ಲಿ ವಿಶ್ಲೇಷಣೆ, ಮೌಲ್ಯ ಪ್ರಜ್ಞೆ, ಸಾಂವಿಧಾನಿಕ ಆಶಯಗಳು ಪ್ರಧಾನ ಅಂಶಗಳಾಗಿದ್ದು, ಇವುಗಳ ಜಾಗವನ್ನು ಯಾವುದೇ ತಾಂತ್ರಿಕತೆಯು ತುಂಬಲಾರದು. ಹೀಗಾಗಿ, ನ್ಯಾಯಾಧೀಶರ ಗ್ರಹಿಕೆ, ವಿಶ್ಲೇಷಣೆ, ತರ್ಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶಗಳ ಅವಲೋಕನ ಇವುಗಳು ನ್ಯಾಯ ನಿರ್ಣಯದ ಬೆನ್ನೆಲುಬಾಗಿರಬೇಕು ಎಂದರು.

ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ಅರವಿಂದ್ ಕುಮಾರ್ ಮಾತನಾಡಿ, ನ್ಯಾಯಾಂಗ ಕಟ್ಟಡ ಹಾಗೂ ನ್ಯಾಯಾಧೀಶರ ನಿವಾಸವನ್ನು ವಿವಿಧ ಜಿಲ್ಲೆಗಳಲ್ಲಿ ನಿರ್ಮಾಣ ಮಾಡುವುದು ಅತ್ಯವಶ್ಯಕವಾಗಿದ್ದು, ಈ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದಾಗ ಅಧಿಕಾರಿಗಳು ಮುಂದಗತಿಯಲ್ಲಿ ಗಮನಹರಿಸಿದ್ದಾರೆ. ಪ್ರತಿವರ್ಷ ವ್ಯಾಜ್ಯ ದಾಖಲಾಗುತ್ತಿರುವುದು ಅಧಿಕವಾಗುತ್ತಿದೆ. 2023ರಲ್ಲಿ 17 ಲಕ್ಷವಾಗಿತ್ತು, 2025ರಲ್ಲಿ 22 ಲಕ್ಷವಾಗಿದೆ. ಹೊಸ ಕಾನೂನು ಮಂಡನೆಯಾಗುತ್ತಿದೆ, ಆ ಕಾನೂನಿನ ಅಡಿಯಲ್ಲಿ ನ್ಯಾಯ ವಿತರಣೆ ಮಾಡಬೇಕಾಗುತ್ತದೆ. ಆದರೆ ಮೂಲಸೌಕರ್ಯ ನ್ಯಾಯಾಧೀಶರ ನೇಮಕಾತಿ, ಸರ್ಕಾರಿ ವಕೀಲರ ನೇಮಕ ಬಗ್ಗೆ ನ್ಯಾಯಾಲವು ಪ್ರಸ್ತಾವನೆಯನ್ನು ಸಲ್ಲಿಸಿದಾಗ ಅಧಿಕಾರಿಗಳು ಅದರ ಬಗ್ಗೆ ಗಮನ ಹರಿಸದೇ, ಬೇಡಿಕೆ ಕಡಿತಗೊಳಿಸಿ ಅನುಮೋದಿಸಿರುವ ಉದಾಹರಣೆ ಸಾಕಷ್ಟಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕಳೆದ ಮೂರು ವರ್ಷದಲ್ಲಿ ಉಚ್ಚನ್ಯಾಯಾಲಯ ಹಾಗೂ ಜಿಲ್ಲಾ ನ್ಯಾಯಾಲಯದಿಂದ ನ್ಯಾಯಾಂಗ ಶುಲ್ಕ, ದಂಡ ಹಾಗೂ ಮುದ್ರಾಂಕ ಶುಲ್ಕವನ್ನು ಹೊರತುಪಡಿಸಿ ವಸೂಲಿ ಮಾಡಿದ ಮೊತ್ತ ರಾಜ್ಯ ಸರ್ಕಾರಕ್ಕೆ ನೀಡಲಾದ ಮೊತ್ತ 2023-24ರಲ್ಲಿ 376 ಕೋಟಿ ರೂ., 2024-2025 439 ಕೋಟಿ ರೂ. 2025-2025ರಲ್ಲಿ 470 ಕೋಟಿ ರೂ. ನೀಡಲಾಗಿದೆ. ಸಿಬ್ಬಂದಿ ವರ್ಗದ ಸಂಬಳ ಅಲ್ಲದೇ ಬೇರೆ ಖರ್ಚಿನ ವೆಚ್ಚವನ್ನು ಸರ್ಕಾರ ನೀಡಿರುವುದು ಕಳೆದ ಮುರು ವರ್ಷದಲ್ಲಿ ಕ್ರಮವಾಗಿ 1.3 ಕೋಟಿ ರೂ., 40 ಲಕ್ಷ, 137 ಲಕ್ಷ ಹಾಗೂ 141 ಲಕ್ಷ ರೂ.ನೀಡಿದೆ. ಹಾಗಾಗಿ ನ್ಯಾಯಾಂಗದಿಂದ ವಸೂಲಿ ಮಾಡಿದ ಮೊತ್ತದಲ್ಲಿ ಕನಿಷ್ಠ ಶೇ.75 ರಿಂದ 80ರಷ್ಟು ಮೊತ್ತವನ್ನು ನೀಡುವಂತೆ ಮನವಿ ಮಾಡಿದರು.

ನ್ಯಾಯಾಲಯವು ನೀಡಿದ ಪ್ರಸ್ತಾವನೆಯನ್ನು ಕಡಿತಗೊಳಿಸದೆ ತ್ವರಿತಗತಿಯಲ್ಲಿ ಅನುಮೋದನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಹಾಗಾದರೆ ನ್ಯಾಯಾಧೀಶರು ಕರ್ನಾಟಕ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿಸುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದರು. ಸಂಘದ ಅಧ್ಯಕ್ಷೆ ಎಸ್.ನಾಗಶ್ರೀ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಶೆಟ್ಟಿಗಾರ್ ಇದ್ದರು.

ನಕಲಿ ಪ್ರಕರಣಗಳ ಉಲ್ಲೇಖ

ನ್ಯಾಯಾಂಗ ವ್ಯವಸ್ಥೆಗೆ ಎಐ ಅಳವಡಿಸುವಾಗ ಹೆಚ್ಚಿನ ಜವಾಬ್ದಾರಿಯೂ ಅತ್ಯಗತ್ಯ. ಎಐನಿಂದಾಗಿ, ಸುಪ್ರೀಂ ಕೋರ್ಟ್‌ನಲ್ಲೂ ನಕಲಿ ಪ್ರಕರಣಗಳ ಉಲ್ಲೇಖಗಳು ಕಂಡುಬರುತ್ತಿವೆ. ಇದಕ್ಕೆ ಕಡಿವಾಣ ಹಾಕುವಲ್ಲಿ ವಕೀಲರ ಪಾತ್ರ ಮುಖ್ಯವಾಗುತ್ತದೆ. ಹಾಗೆಯೇ, ವೈಯಕ್ತಿಕ ಮಾಹಿತಿಗಳ ಗೋಪ್ಯತೆ ಮತ್ತು ದತ್ತಾಂಶಗಳ ರಕ್ಷಣೆಯೂ ಪ್ರಮುಖವಾಗುತ್ತದೆ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಡಾ. ಬಿ.ವಿ.ನಾಗರತ್ನ ತಿಳಿಸಿದರು.

ಕೈನಿಂದ ಮಹಿಳಾ ಶಕ್ತಿಗೆ ಅಪಮಾನ

• **ಬೆಂಗಳೂರು:** ಮಹಿಳಾ ಮೀಸಲಾತಿ ವಿಧೇಯಕವನ್ನು ವಿರೋಧ ಮಾಡಿದ ಕಾಂಗ್ರೆಸ್ ಸಮಗ್ರ ಭಾರತದ ಮಹಿಳಾಶಕ್ತಿಗೆ ಅಪಮಾನ ಮಾಡಿದೆ. ಕಾಂಗ್ರೆಸ್ ನಿಯತ್ತು ಯಾವತ್ತೂ ಮಹಿಳೆಯರಿಗೆ ಮೀಸಲಾತಿ ಕೊಡಲು ಇರಲಿಲ್ಲ, ಕಾಂಗ್ರೆಸ್‌ಗೆ ಮಹಿಳೆಯರ ಶಾಪ ತಟ್ಟೇ ತಟ್ಟುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.



ಈ ಕುರಿತು ಎಕ್ಸ್ ಮಾಡಿರುವ ಅವರು, ಒಂದು ಪ್ರಗತಿಪರವಾದ ಚಿಂತನೆ ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರು ಪಾಲ್ಗೊಳ್ಳಬೇಕು ಎನ್ನುವ ಅಭಿವೃದ್ಧಿ ಪರ ಚಿಂತನೆಗೆ ವಿರೋಧವಾಗಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ನಡೆದುಕೊಂಡಿವೆ. ಮಹಿಳಾ ಮೀಸಲಾತಿ ಬಿಲ್ ಪಾಸ್ ಆಗದಿರುವುದನ್ನು ಇಡೀ ದೇಶ ಗಮನಿಸುತ್ತಿದೆ ಎಂದಿದ್ದಾರೆ.

ಕಾಂಗ್ರೆಸ್ ಈಗ ಸುಳ್ಳು ಸಮರ್ಥನೆ ಮಾಡಲು ಹೊರಟಿದೆ. ಯಾಕೆಂದರೆ 2023ರಲ್ಲಿ ಶೇ 50% ರಷ್ಟು ಕ್ಷೇತ್ರಗಳ ಹೆಚ್ಚಳ ಮಾಡಬೇಕು. ಮುಂದಿನ ಜನಸಂಖ್ಯೆ ಆಧಾರದ ಮೇಲೆ ಮಾಡಬೇಕು ಅಂತ ಆಗಿತ್ತು. 2034 ಕ್ಕೆ ಜಾರಿ ಮಾಡಬೇಕೆಂದು ತೀರ್ಮಾನ ಆಗಿತ್ತು. ಅದನ್ನು 2029ಕ್ಕೆ ಮಾಡಬೇಕು ಎನ್ನುವ ಕಾರಣದಿಂದ ಶೇ 50% ರಷ್ಟು ಸ್ಥಾನಗಳನ್ನು ಹೆಚ್ಚಿಗೆ ಮಾಡಬೇಕು. ಮಹಿಳೆಯರಿಗೆ ಶೇ 33% ರಷ್ಟು ಸ್ಥಾನ ಮೀಸಲಿಡಬೇಕು ಎಂದು ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಶೇ 50% ರಷ್ಟು ಸ್ಥಾನಗಳನ್ನು ಹೆಚ್ಚಳ ಮಾಡಬೇಕೆನ್ನುವ ಉದ್ದೇಶದಿಂದ ತಂದರೆ ಇವರು ಅದರಲ್ಲಿ ರಾಜಕಾರಣ ಮಾಡಲು ಹೊರಟಿದ್ದಾರೆ. ಈ ರಾಜಕೀಯ ಡೊಂಬರಾಟಕ್ಕೆ ಕಾಂಗ್ರೆಸ್ ಪಕ್ಷ ಮುಂದಿನ ದಿನಗಳಲ್ಲಿ ದೊಡ್ಡ ಬೆಲೆ ತೆರಬೇಕಾಗುತ್ತದೆ. ಈ ಕಟು ಸತ್ಯ ನಮಗೆಲ್ಲರಿಗೂ ಗೊತ್ತಾಗುತ್ತಿದೆ ಎಂದು ತಿಳಿಸಿದ್ದಾರೆ.

ಮಹಿಳಾ ಮೀಸಲಾತಿಗೆ ಕೈನಿಂದ ವಿರೋಧವಿಲ್ಲ

• **ಬೆಂಗಳೂರು:** ಮಹಿಳಾ ಮೀಸಲಾತಿಗೆ ಕಾಂಗ್ರೆಸ್‌ನಿಂದ ವಿರೋಧವಿಲ್ಲ, 2023ರಲ್ಲಿಯೇ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಅಂಗೀಕಾರವಾಗಿದೆ. ಸಾಂವಿಧಾನಿಕ ತಿದ್ದುಪಡಿ ತಂದಿದ್ದರಿಂದ ಅದು ವಿಫಲವಾಯಿತು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಶಾಂಗ್ರಿಲಾ ಹೋಟೆಲ್‌ನಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ರಾಜಕೀಯಕ್ಕಾಗಿ ಕ್ಷೇತ್ರ ಮರು ವಿಂಗಡನೆ ಮತ್ತು ಮಹಿಳಾ ಮೀಸಲಾತಿಯನ್ನು ಒಟ್ಟಿಗೆ ತಂದಿದ್ದರಿಂದ ಮಹಿಳಾ ಮೀಸಲಾತಿ ಮಸೂದೆ ವಿಫಲವಾಗಿದೆ ಎಂದರು. ಕ್ಷೇತ್ರ ಮರುವಿಂಗಡನೆ ಮಾಡದೆಯೇ ಮಹಿಳಾ ಮೀಸಲಾತಿ ಒಂದೇ ಮಂಡನೆಯಾಗಿದ್ದರೆ ಅಂಗೀಕಾರವಾಗುತ್ತಿತು ಎಂದರು.

ಕಾಂಗ್ರೆಸ್ಸಿಗೆ ಮುಖಭಂಗ ಕಾದಿದೆ: ಛಲವಾದಿ



• **ಬೆಂಗಳೂರು:** ಕಾಂಗ್ರೆಸ್ಸಿನ ಮಹಿಳಾ ವಿರೋಧಿ ಕ್ರಮದಿಂದ ಮುಂದಿನ ದಿನಗಳಲ್ಲಿ ಆ ಪಕ್ಷಕ್ಕೆ ಮುಖಭಂಗ ಆಗಲಿದೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶನಿವಾರ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಂಡಿ ಒಕ್ಕೂಟದ ಬ್ರದರ್‌ಗಳಿಗೆ ಸಿಸ್ಟರ್‌ಗಳ ಬಗ್ಗೆ ಗೌರವ ಇಲ್ಲ, ಕುತಂತ್ರದಿಂದ ಮಹಿಳಾ ಮೀಸಲಾತಿ ಮಸೂದೆಗೆ ಸೋಲಾಗಿದೆ. ದಲಿತರು, ಹಿಂದುಳಿದವರನ್ನು, ಮುಸ್ಲಿಂ ಹೆಣ್ಣು ಮಕ್ಕಳನ್ನು ಕಾಂಗ್ರೆಸ್ ಶೋಷಣೆ ಮಾಡುತ್ತಾ ಬಂದಿದೆ. ಕಾಂಗ್ರೆಸ್ ಪಕ್ಷ ಇರುವುದೇ ದೇಶವನ್ನು ಪೋಷಣೆ ಮಾಡಲಿಕ್ಕಲ್ಲ, ಶೋಷಣೆ ಮಾಡಲಿಕ್ಕೆ ಎಂಬುದು ಸ್ಪಷ್ಟವಾಗಿ ಗೊತ್ತಾಗಿದೆ ಎಂದರು.

ಮಹಿಳಾ ಮೀಸಲಾತಿಯ ವಿಧೇಯಕದ ಸೋಲು ಕಾಂಗ್ರೆಸ್ಸಿನ ಗೆಲುವು ಎಂದು ಸಂಭ್ರಮಿಸುತ್ತಿದ್ದಾರೆ. ಬಿಜೆಪಿ, ಎನ್‌ಡಿಎಗೆ ಮುಖಭಂಗ ಎನ್ನುತ್ತಿದ್ದಾರೆ. ಇದು ಬಿಜೆಪಿಯ ಮುಖಭಂಗವೂ ಅಲ್ಲ; ಬಿಜೆಪಿಯ ಸೋಲೂ ಅಲ್ಲ, ಕಾಂಗ್ರೆಸ್ ವ್ಯವಸ್ಥಿತವಾಗಿ ಮಾಡಿಕೊಂಡು ಬಂದ ಮಹಿಳಾ ಮುಖಭಂಗವನ್ನು ಇವತ್ತೂ ಮಾಡಿದ್ದೀರಿ ಎಂದು ಟೀಕಿಸಿದರು.

ಮಹಿಳಾ ವಿರೋಧಿ ಕಾಂಗ್ರೆಸ್ ವಿರುದ್ಧ ಹೋರಾಟ

• **ಬೆಂಗಳೂರು:** ಮಹಿಳಾ ವಿರೋಧಿ ಕಾಂಗ್ರೆಸ್ ವಿರುದ್ಧ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾದಿಂದ ಹೋರಾಟ ಸಂಘಟಿಸಲಿದೆ ಎಂದು ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ತಿಳಿಸಿದ್ದಾರೆ. ಶನಿವಾರ ಮಾಧ್ಯಮಗಳ ಜೊತೆ ಅವರು ಮಾತನಾಡಿದರು. ರಾಜಕೀಯ ಮೀಸಲಾತಿ ಲಭಿಸುವ ಹಿನ್ನೆಲೆಯಲ್ಲಿ ನಾವು ಸಂಭ್ರಮಾಚರಣೆಗೆ ಸಿದ್ಧತೆ ಮಾಡಿಕೊಂಡಿದ್ದೆವು, ಅದು ಈಗ ಆಕ್ರೋಶವಾಗಿ ಪರಿವರ್ತನೆಗೊಂಡಿದೆ ಎಂದರು. ಶನಿವಾರ ಮೈಸೂರು, ಗದಗ, ನೆಲಮಂಗಲ, ಕೋಲಾರ ಮೊದಲಾದ ಕಡೆ ಪ್ರತಿಭಟನೆ ಆರಂಭವಾಗಲಿದೆ. ಈ ಪ್ರತಿಭಟನೆ ನಿರಂತರವಾಗಿ ಇರಲಿದೆ. ಈ ಆಕ್ರೋಶವು ಕಾಂಗ್ರೆಸ್ಸನ್ನು ಅಧಿಕಾರದಿಂದ ಕೆಳಗಿಳಿಸುವವರೆಗೂ ಮುಂದುವರೆಯಲಿದೆ ಎಂದು ತಿಳಿಸಿದರು. ನಾಳೆ ಬೆಂಗಳೂರು ಮಹಾನಗರದ 3 ಜಿಲ್ಲೆಗಳಿಂದ ಹೋರಾಟ ಹಮ್ಮಿಕೊಂಡಿದ್ದೇವೆ. ಮಹಿಳಾ ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ಸಿನಲ್ಲೇ ವೈರುಧ್ಯವಿದೆ ಎಂದು ಟೀಕಿಸಿದರು. ಕಾಂಗ್ರೆಸ್, ಟಿಎಂಸಿ ಮೊದಲಾದ ಪಕ್ಷಗಳ ಮಹಿಳಾ ವಿರೋಧಿ ನೀತಿಯನ್ನು ಬಯಲಿಗೆ ಎಳೆಯಲಿದ್ದೇವೆ ಎಂದು ಹೇಳಿದರು.

ನ್ಯಾಯಕ್ಕಾಗಿ ನಡೆದ ಹೋರಾಟದ ಪಯಣ: ನ್ಯಾ.ಅರವಿಂದ್ ಕುಮಾರ್

ಲೋಕಾಯುಕ್ತದಿಂದ ಜನರಿಗೆ ನ್ಯಾಯ

• **ಬೆಂಗಳೂರು:** ಲೋಕಾಯುಕ್ತ ಸಂಸ್ಥೆಯು ತನ್ನ ಅಸ್ತಿತ್ವದ ನಾಲ್ಕು ದಶಕಗಳನ್ನು ಪೂರೈಸಿದೆ. ಇದು ನ್ಯಾಯಕ್ಕಾಗಿ ನಡೆದ ಸತತ ಹೋರಾಟದ ಪಯಣವಾಗಿದೆ ಎಂದು ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ಅರವಿಂದ ಕುಮಾರ್ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಲೋಕಾಯುಕ್ತ ಸಂಸ್ಥೆಗೆ ನಲವತ್ತರ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿ, ಲೋಕಾಯುಕ್ತವು ಕಾರ್ಯಾಂಗದಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ವಿನ್ಯಾಸಗೊಳಿಸಲಾಗಿದೆ, ಸಾರ್ವಜನಿಕ ಹಿತಾಸಕ್ತಿಯನ್ನು ಕಾಯುವ ಸಂಸ್ಥೆಯಾಗಿದೆ ಎಂದರು. ಲೋಕಾಯುಕ್ತ ಸಂಸ್ಥೆಯು ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ, ಸಾಮಾನ್ಯ ನಾಗರಿಕರು ತಮ್ಮ ಸ್ವಾಭಿಮಾನವನ್ನು ಲೆಕ್ಕಿಸದೆ ದೂರು ಸಲ್ಲಿಸಲು ಅವಕಾಶ ನೀಡಿದೆ. ಯಾವುದೇ ದೂರು ಇಲ್ಲದಿದ್ದರೂ ತಾನೇ ಸ್ವತಃ ಸ್ವಯಂ ಪ್ರೇರಿತ ತನಿಖೆಯನ್ನು ಪ್ರಾರಂಭಿಸುವ ಅಧಿಕಾರ ಹೊಂದಿದೆ ಎಂದು ಹೇಳಿದರು.

ಹೆಗಡೆ ಸ್ಮರಣೆ: ಲೋಕಾಯುಕ್ತ ರಚನೆಯ ಶ್ರೇಯಸ್ಸು ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆ ಅವರಿಗೆ ಸಲ್ಲುತ್ತದೆ. ಅವರು ಸಾರ್ವಜನಿಕ ಕುಂದುಕೊರತೆ ಮತ್ತು ಭ್ರಷ್ಟಾಚಾರವನ್ನು ಹೋಗಲಾಡಿಸಲು ರೂಪಿಸಿದರು. ನ್ಯಾ.ಸಂತೋಷ್ ಹೆಗಡೆ ಅವಧಿಯಲ್ಲಿ ಲೋಕಾ ಸಂಸ್ಥೆ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿದ, ಸಾರ್ವಜನಿಕ ವಿಶ್ವಾಸಗಳಿಸಿದೆ ಎಂದರು.

ಸ್ಥಿರತೆ, ಬದ್ಧತೆಗೆ ಸಾಕ್ಷಿ: ಪ್ರಾಸ್ತವಿಕವಾಗಿ ಮಾತನಾಡಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು, ಕರ್ನಾಟಕ ಲೋಕಾಯುಕ್ತ ಸಂಸ್ಥೆಯು 1984ರಲ್ಲಿ ಸ್ಥಾಪನೆಯಾದಾಗಿನಿಂದಲೂ ಭ್ರಷ್ಟಾಚಾರದ ವಿರುದ್ಧ ರಾಜಿ ಇಲ್ಲದ ಹೋರಾಟ ನಡೆಸುತ್ತಾ ಬಂದಿದೆ ಎಂದರು.

40,648 ಪ್ರಕರಣ ಬಾಕಿ

ಲೋಕಾಯುಕ್ತ ಸ್ಥಾಪನೆಯಾದ 1986 ರಿಂದ ಈವರೆಗೆ ಈ ಸಂಸ್ಥೆಯಲ್ಲಿ ದಾಖಲಾದ ಒಟ್ಟು 1,75,126 ಪ್ರಕರಣಗಳಲ್ಲಿ 1,51,233 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ಪ್ರಸ್ತುತ ಲೋಕಾಯುಕ್ತದಲ್ಲಿ ಒಟ್ಟು 40,648 ಪ್ರಕರಣಗಳು ಬಾಕಿ ಇವೆ. ಪ್ರಸ್ತುತ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ಸೇರಿ ಇತ್ತೀಚಿನ ಅವಧಿಯಲ್ಲಿ 24,085 ಪ್ರಕರಣಗಳನ್ನು ವಿಲೇವಾರಿ ಮಾಡುವ ಮೂಲಕ ಹೆಚ್ಚಿನ ವೇಗ ನೀಡಲಾಗುತ್ತಿದೆ ಎಂದು ಉಪ ಲೋಕಾಯುಕ್ತ ಬಿ.ಎಸ್. ಪಾಟೀಲ್ ವಿವರಿಸಿದರು.



74 ಕ್ಯೂಸೆಕ್ ಒಳ ಹರಿವು ಇದ್ದರೆ, 4,033 ಕ್ಯೂಸೆಕ್ ನೀರನ್ನು ಜಲಾಶಯದಿಂದ ಹೊರಗೆ

ಕೆಆರ್‌ಎಸ್ ನೀರಿನ ಮಟ್ಟ 99 ಅಡಿಗೆ ಕುಸಿತ

► ಕೆ. ಶ್ರೀನಿವಾಸ್ ಬೆಳ್ಳೂರು

ದಿಗಂತ ವಿಶೇಷ

• **ಮಂಡ್ಯ:** ಬೇಸಿಗೆಯ ತೀವ್ರ ಬಿಸಿಲಿನ ಪರಿಣಾಮ ಜೀವನಾಡಿ ಕೃಷ್ಣರಾಜಸಾಗರ ಜಲಾಶಯದ ನೀರಿನ ಮಟ್ಟದ 99 ಅಡಿಗೆ ಕುಸಿದಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ.

ಈ ವರ್ಷ ಅವಧಿಗೂ ಮುನ್ನವೇ ಕೆ.ಆರ್.ಎಸ್. ಅಣೆಕಟ್ಟೆ ಭರ್ತಿಯಾಗುವ ಮೂಲಕ ದಾಖಲೆ ಬರೆದಿತ್ತು. 124.80 ಅಡಿ ಗರಿಷ್ಠ ಮಟ್ಟವಿದ್ದರೂ, ಪ್ರಸ್ತುತ ಅಣೆಕಟ್ಟೆಯಲ್ಲಿ ನೀರಿನ ಮಟ್ಟ 99.98 ಅಡಿಗೆ ಕುಸಿದಿದೆ. ಕೇವಲ 74 ಕ್ಯೂಸೆಕ್ ಒಳ ಹರಿವು ಇದ್ದರೆ, 4,033 ಕ್ಯೂಸೆಕ್ ನೀರನ್ನು ಜಲಾಶಯದಿಂದ ಹೊರಗೆ ಬಿಡಲಾಗುತ್ತಿದೆ. ಅಣೆಕಟ್ಟೆಯಲ್ಲಿ ನೀರಿನ ಮಟ್ಟ ಕಡಿಮೆಯಾಗಿದ್ದರೂ ಸಹ ಬೆಳೆದು ನಿಂತ ಬೆಳೆಗಳಿಗೆ ಕಟ್ಟು ನೀರು ಪದ್ಧತಿಯಂತೆ ನೀರು ಬಿಡಲಾಗುತ್ತಿದೆ.

ಜಲಾಶಯದಲ್ಲಿ ನೀರಿನ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಬೆಳೆದು ನಿಂತ ಬೆಳೆಗೆ ನೀರಿನ ಅವಶ್ಯಕತೆಯೂ ಹೆಚ್ಚುವುದು. ಕಟ್ಟು ನೀರು ಪದ್ಧತಿ ಅನುಸಾರ ಏಪ್ರಿಲ್ ಅಂತ್ಯದವರೆಗೆ ನಾಲೆಗಳಲ್ಲಿ ನೀರು ಹರಿಸುವ ಬಗ್ಗೆ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಆದರೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರಿನ ಅವಶ್ಯಕತೆ ಬೆಳೆಗಳಿಗೆ ಇರುವ ಕಾರಣ



ಮತ್ತೊಂದು ಕಟ್ಟು ನೀರು ಹರಿಸಲು ನಿರ್ಧರಿಸಲಾಗಿದೆ.

ಆದರೂ ಬಿಸಿಲಿನ ತಾಪಕ್ಕೆ ನೀರು ಆವಿಯಾಗುವ ಕಾರಣ ಮತ್ತು ಬಿಸಿಯಾದ ವಾತಾವರಣದ ಹಿನ್ನೆಲೆಯಲ್ಲಿ ಜಮೀನಿನಲ್ಲಿ ಬೇಗನೇ ನೀರು ಇಂಗಿ ಒಣಗಿ ಹೋಗುತ್ತದೆ. ಇದರಿಂದಾಗಿ ಬೆಳೆಯ ಇಳುವರಿ ಪ್ರಮಾಣವೂ ಕುಸಿತವಾಗುವ ಆತಂಕ ಎದುರಾಗಿದ್ದು, ಮತ್ತೊಂದು ಕಟ್ಟು ನೀರಿನ ಅವಶ್ಯಕತೆ ಬೆಳೆಗಳಿಗೆ ಅಗತ್ಯವಾಗಿದೆ ಎಂಬ ಒತ್ತಾಯವೂ ರೈತರದ್ದಾಗಿದೆ. ಜತೆಗೆ ಇತರೆ ಬೆಳೆಗಳ ರಕ್ಷಣೆಯನ್ನೂ ಮಾಡಬೇಕಿರುವುದರಿಂದ ನಾಲೆಗಳಲ್ಲಿ ನಿರಂತರವಾಗಿ ನೀರು ಹರಿಸುವಂತೆ ಆಗ್ರಹಿಸಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಕಾವೇರಿ ನದಿ ನೀರನ್ನು ಕುಡಿಯಲು ಅವಲಂಬಿಸಿರುವ ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಜಿಲ್ಲೆಯ ಜನರಿಗೆ ಮುಂಗಾರುವರೆಗೂ ಕುಡಿಯುವ ನೀರಿನ ಸಮಸ್ಯೆ ಇಲ್ಲ, ಡ್ಯಾಂನಲ್ಲಿ 60 ಅಡಿ ಬರುವವರೆಗೂ ನೀರು ಬಳಸಲು ಸಾಧ್ಯವಿದೆ. ಅಂದರೆ ಇನ್ನೂ 15 ಟಿ.ಎಂ.ಸಿ ನೀರು ಬಳಸಲು ಲಭ್ಯವಿದೆ. 2003ರಲ್ಲಿ ಕೆ.ಆರ್.ಸಾಗರ ಅಣೆಕಟ್ಟೆಯಲ್ಲಿ ಏಪ್ರಿಲ್ ತಿಂಗಳಲ್ಲಿ ನೀರಿನ ಮಟ್ಟ 65.90 ಅಡಿ ತಲುಪಿದ್ದು ಈವರೆಗಿನ ಕನಿಷ್ಠ ಮಟ್ಟದ ದಾಖಲೆಯಾಗಿತ್ತು. ಎಲ್ ನಿನೋ ಪ್ರಭಾವದಿಂದಾಗಿ ಈ ಬಾರಿ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಆಗುವುದಿಲ್ಲ ಎನ್ನುವ ಹವಾಮಾನ ತಜ್ಞರ ವರದಿ ಆತಂಕಕ್ಕೆ ಕಾರಣವಾಗಿದೆ. ಮುಂಗಾರಿನ ಅವಧಿಯಲ್ಲಿ ರಾಜ್ಯದ ಬಹುತೇಕ ಕಡೆ ಮಳೆ ಕ್ಷೀಣಿಸುವ ಸಾಧ್ಯತೆ ಇದೆ.

ಮುಂಗಾರು ಕ್ಷೀಣಿಸುವ ಸೂಚನೆ

ಈ ಬಾರಿ ಕೆಆರ್‌ಎಸ್ ಅಣೆಕಟ್ಟೆ ಜೂನ್ ತಿಂಗಳಲ್ಲೇ ಭರ್ತಿಯಾಗುವ ಮೂಲಕ ಹೊಸ ದಾಖಲೆ ಬರೆದು ರೈತರ ಮುಖದಲ್ಲಿ ಮಂದಹಾಸ ಮೂಡಿತ್ತು. ಆದರೆ ಈ ಬಾರಿ ಮುಂಗಾರು ಕ್ಷೀಣಿಸುವ ಸೂಚನೆಯಿಂದ ಭಯದ ವಾತಾವರಣವೂ ನಿರ್ಮಾಣವಾಗಿದೆ. ಭವಿಷ್ಯದಲ್ಲಿ ಕುಡಿಯುವ ನೀರಿನ ತೊಂದರೆಯ ಆತಂಕವನ್ನು ಹೆಚ್ಚಿಸಿದೆ.



10 ವರ್ಷದಲ್ಲಿ ನೀರಿನ ಸಂಗ್ರಹ
(ಏ.18ಕ್ಕೆ)

ವರ್ಷ	ನೀರಿನ ಮಟ್ಟ (ಅಡಿಗಳಲ್ಲಿ)
2017	74.32
2018	73.94
2019	92.37
2020	103.39
2021	97.72
2022	103.26
2023	93.46
2024	83.22
2025	101.35
2026	99

ಕುಕ್ಕರ್ ಬಾಂಬ್: ಏ.25ಕ್ಕೆ ತೀರ್ಪು

• **ಬೆಂಗಳೂರು:** ಕಳೆದ ನಾಲ್ಕು ವರ್ಷಗಳ ಹಿಂದೆ ಮಂಗಳೂರು ಬಳಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ನ್ಯಾಯಾಲಯ ಬಂಧನದಲ್ಲಿರುವ ಶಂಕಿತ ಉಗ್ರ ಮೊಹಮ್ಮದ್ ಶಾರೀಕ್ ತಪ್ಪೊಪ್ಪಿಕೊಂಡಿದ್ದು, ಈ ಸಂಬಂಧ ಎನ್‌ಐಎ (ರಾಷ್ಟ್ರೀಯ ತನಿಖಾ ಸಂಸ್ಥೆ) ವಿಶೇಷ ನ್ಯಾಯಾಲಯ ಅಂತಿಮ ತೀರ್ಪನ್ನು ಏ.25 ಕ್ಕೆ ಕಾಯ್ದಿರಿಸಿದೆ.

ಬಾಂಬ್ ಸ್ಫೋಟ ಎಸಗಿರುವುದಾಗಿ ಶಿವಮೊಗ್ಗದ ತೀರ್ಥಹಳ್ಳಿ ಮೂಲದ ಶಾರೀಕ್, ಕಳೆದ ಡಿಸೆಂಬರ್ ತಿಂಗಳಿನಲ್ಲಿ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದು, ಮೂರು ತಿಂಗಳ ಬಳಿಕ ನ್ಯಾಯಾಲಯ ಆರೋಪಿಯ ಅರ್ಜಿ ಪುರಸ್ಕರಿಸಿತ್ತು. ಬಳಿಕ ವಾದ-ಪ್ರತಿವಾದ ನಡೆದು, ನಂತರ ತಾಂತ್ರಿಕ ಕಾರಣಗಳಿಂದಾಗಿ ಅಂತಿಮ ತೀರ್ಪನ್ನು ಏ.25ಕ್ಕೆ ಮುಂದೂಡಿದೆ.

ಪ್ರಕರಣ ಸಂಬಂಧ 2024ರಲ್ಲಿ ಶಾರೀಕ್, ಸೈಯದ್ ಯಾಸೀನ್ ವಿರುದ್ಧ ನ್ಯಾಯಾಲಯಕ್ಕೆ ಎನ್‌ಐಎ ಅಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ವೇಳೆ ಶಾರೀಕ್ ತಾನು ನಿರಪರಾಧಿ ಎಂದು ಹೇಳಿಕೆ ನೀಡಿ, ತನ್ನ ಮೇಲಿನ ಆರೋಪವನ್ನು ತಳ್ಳಿಹಾಕಿದ್ದ. ಈ ಮಧ್ಯೆ, 2025ರ ಡಿಸೆಂಬರ್‌ನಲ್ಲಿ ನ್ಯಾಯಾಲಯಕ್ಕೆ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದ. ನನ್ನ ವಿರುದ್ಧ ಎನ್‌ಐಎ ತನಿಖಾಧಿಕಾರಿಗಳು ದೋಷಾರೋಪ ಪಟ್ಟಿಯಲ್ಲಿ ನಮೂದಿಸಿರುವ ಆರೋಪಗಳು ಸತ್ಯವಾಗಿದ್ದು, 2022ರ ನ.19ರಂದು ಸಂಜೆ 4.40 ರ ಸುಮಾರಿಗೆ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಆಟೋ ರಿಕ್ಷಾದೊಳಗೆ ಕುಕ್ಕರ್ ಬಾಂಬ್ (ಐಇಡಿ) ಇಟ್ಟು ಸ್ಫೋಟಿಸಲು ಯತ್ನಿಸಿರುವೆ.

ನನಗೆ ಈಗ ಪಶ್ಚಾತಾಪವಾಗಿದೆ. ಕಾನೂನು ಪ್ರಕಾರ ನನ್ನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದ. ಮೂರು ತಿಂಗಳ ವಿಚಾರಣೆ ನಂತರ ನ್ಯಾಯಾಲಯವು ಶಂಕಿತನ ಅರ್ಜಿಯನ್ನು ಮಾನ್ಯ ಮಾಡಿತ್ತು. ಇದೀಗ ನ್ಯಾಯಾಲಯ ಅಂತಿಮ ತೀರ್ಪನ್ನು ಕಾಯ್ದಿರಿಸಿದ್ದು, ಈ ತೀರ್ಪಿನಲ್ಲಿ ಆರೋಪಿಗೆ ವಿಧಿಸುವ ಶಿಕ್ಷೆಯ ಬಗ್ಗೆ ನಿರ್ಧಾರ ಮಾಡಲಿದೆ. ಹಾಗೂ ಉಗ್ರ ಚಟುವಟಿಕೆಗಳ ವಿರುದ್ಧ ಕಠಿಣ ಸಂದೇಶ ನೀಡುವ ಸಾಧ್ಯತೆ ಇದೆ.

[illegible]

IN THE COURT OF THE 3rd ADDITIONAL CIVIL JUDGE AND JMFC AT ANEKAL

C.Misc. No.587/2026

PETITIONERS: 1. Sri Surendra .R. S/o late Rudrappa and Late Rudramma, Aged about 58 years, **2. Smt Uma R.** D/o late Rudrappa and Late Rudramma, Aged about 54 years, **3. Sri Naveen Kumar R.** S/o late Rudrappa and Late Rudramma, Aged about 46 years, Petitioners 1 to 3 are R/at No.262, 2nd Cross, J.P.Layout, Near Milk Dairy, Ward No.13 Anekal Town, Bengaluru Urban District. **4. Smt Drakshayani S.** W/o late Manjunatha, Aged about 44 years, **5.Smt Tejashwini R.M.** D/o late Manjunatha, Aged about 21 years, **6. Sri Yashwanth R.M.** S/o late Manjunatha, Aged about 17 years, Since Minor represented By his mother Smt S.Drakshayani (P4) Petitioners 4 to 6 are R/at Rajapura Village, Jigani Hobli, Anekal Taluk, Bangalore Urban District -V/s-

RESPONDENT: The Tahasildhar, Anekal Taluk, Bangalore Urban District.

NOTICE

Whereas the petitioners have filed the above petition for seeking the death certificate of Maternal Grand mother of the petitioners namely Smt.Gowramma W/o late Rudrappa @ Buddappa who was died on 27/01/2006 at her house at Rajapura Village, Jigani Hobli, Anekal Taluk, Bengaluru Urban District, before the 3rd Additional Civil Judge and JMFC at Anekal, whereas the above petition is fixed for hearing date on **22-05-2026** at 11:00 AM if anybody interest in this matter regard to appear in this court in person or by a pleader to file objections the same of you failing which the petition will be disposed on enquiry.

Given under my hand and seal of the Court on 10-04-2026

By order of the court, Sheristadar, Civil Judge Jr Dvn and JMFC Court at Anekal.

Sri. C. SURESHA, Advocate
Office at C. Muniyappa Building, 1st Floor, Near Dr. Mohan Clinic, Attibele Main Road, Anekal Town, Bengaluru Urban District

[illegible]

IN THE COURT OF XXVI ADDL JUDGE AND MOTOR ACCIDENT CLAIMS TRIBUNAL, COURT OF SMALL CAUSES, (SCCH-26) AT BENGALURU

M.V.C. No.3766/2025

Between: Rakesh.C, S/o H. R. Chandrashekhar ...Petitioner

AND: Aporba Ray, S/o Titil Ray & Anr ...Respondent

NOTICE/SUMMONS TO THE RESPONDENT NO.2

AJIT, S/o Saylin Mojumther, Age: Major, Occ: Owner of cantor, Lorry No.KA-42-3861, R/o No.248, 1st Cross, Balagere Vrature, Bengaluru City, Karnataka-560087.

WHEREAS, the petitioner are instituted the above case against the respondents claiming compensation of Rs. 1,65,00,000/- (Rupees One Crore Sixty Five Lakhs only) for the injuries in a road traffic accident, which took place on 13.12.2024 at about 03.45am, in ITPL Main Road, Medicover Hospital, Bangalore City, Karnataka, within the jurisdiction of Whitefiled Traffic Police Station involved Cantor Bearing No. KA-42-3861.

You are hereby summoned to appear before this court in 22/04/2026 at 11.00 AM, by person or by pleader failing on which the case will be disposed off as ex-party. Given under my hand & seal of the court, this 07.04.2026.

By the order of Court Assistant Registrar
Court of Small Causes Bengaluru-560 009

ADDRESS OF ADVOCATE SOWMYA. S, No.244, 1st Main, Ramasandra Main Road, Near Chikkabasti Circle, Ullal Upanagara Post, Bengaluru-560110.

BEFORE THE MOTOR ACCIDENT CLAIMS TRIBUNAL AT BANGALORE (SCCH-11)

MVC No.5841/2025

PETITIONERS: Smt. Chandramma.R & others
-V/s-
RESPONDENTS: Sri. Surya Teja & another

NOTICE TO RESPONDENT No.1.

Sri. Surya Teja, Major in age, S/o. Jagannadha Sharma, Residing at Jayaram Building, Near Green City Super market, Nagondanahalli Main Road, Bengaluru

Whereas, the petitioners has filed above case for grant of compensation on account of death Munichewdappa H.A in a Road Traffic Accident occurred on 19.02.2025 at about 05.00 P.M near D-Hosahalli Cross, Devanagundi Road, Hosakote Taluk, Bengaluru District, for a compensation amount a sum of Rs.25,00,000/- (Rupees Twenty Five Lakhs only) involving Motor Cycle bearing Reg. No. AP-16-FF-2207 belongs to you and your hereby directed (Respondent) to appear before this Hon'ble Authority in person or through an advocate to answer all the materials relating to the case on **07/05/2026 at 11.00 AM** failing which matter will be determined placing you ex-parte.

Given under my hand and seal of this Authority on 15/04/2026

By order of the Court, Assistant Registrar, Court of Small Causes, Bengaluru

Advocate for Petitioners: **Reeyazulla Sharief**
No. 20-B, 2nd Floor, H.M.S. Complex, Cubbonpet Main Road, Bangalore

BEFORE THE MOTOR ACCIDENT CLAIM TRIBUNAL AT BANGALORE

M.V.C. 5993/2025 (SCCH-13)

Between: Mrs. Hemalatha B.S ...Petitioner

And: Mr. Manoranjan. S Meghavath and others ...Respondent

NOTICE UNDER ORDER V RULE 20 OF THE CODE OF CIVIL PROCEDURE TO THE RESPONDENT No.1

Mr. Manoranjan. S Meghavath, S/o Shivaji. R, No.186, 4th Cross, Teachers colony, Nagarabhavi, Bangalore- 560 072. (RC Owner of Scooter No KA-02-KU-7131)

Whereas, the Petitioner has filed above petition claiming compensation against you and another for compensation of Rs. 10,00,000/- due to the injuries sustained by the petitioner in the RTA, on 08-07-2025 at about 03-45 pm on Upkar Layout Main Road, Near Soda Factory restaurant, Mallathahalli, Bangalore met with an accident due to rash and negligent driving of the rider of Scooter No KA-02-KU-7131.

You are notified to appear before this court in person or by a pleader's duly instructed and able to answer all the material questions relating to the above petition on **01/06/2026 at 11.00 A.M.** If you fail to appear either in person or through an advocate, the above petition will be heard and determined in your absence.

Given under my hand and seal of the court on this 02/04/2026

By order of the Court, Assistant Registrar, Court of Small Causes, Bengaluru

Advocate for Petitioner: **Mrs. Veenashree. S**
No.13, Guru Krupa, 1st Main, Opp. Vidyavahini School, S.G. Kaval, Bengaluru- 560 091.

BEFORE THE MOTOR ACCIDENT CLAIM TRIBUNAL AT BANGALORE

M.V.C. 5994/2025 (SCCH-13)

Between: Ms. Yashaswini. N ...Petitioner

And: Mr. Manoranjan. S Meghavath and others ...Respondent

NOTICE UNDER ORDER V RULE 20 OF THE CODE OF CIVIL PROCEDURE TO THE RESPONDENT No.1

Mr. Manoranjan. S Meghavath, S/o Shivaji. R, No.186, 4th Cross, Teachers colony, Nagarabhavi, Bangalore- 560 072. (RC Owner of Scooter No KA-02-KU-7131)

Whereas, the Petitioner has filed above petition claiming compensation against you and another for compensation of Rs. 10,00,000/- due to the injuries sustained by the petitioner in the RTA, on 08-07-2025 at about 03-45 pm on Upkar Layout Main Road, Near Soda Factory restaurant, Mallathahalli, Bangalore met with an accident due to rash and negligent driving of the rider of Scooter No KA-02-KU-7131.

You are notified to appear before this court in person or by a pleader's duly instructed and able to answer all the material questions relating to the above petition on **01/06/2026 at 11.00 A.M.** If you fail to appear either in person or through an advocate, the above petition will be heard and determined in your absence.

Given under my hand and seal of the court on this 02/04/2026

By order of the Court, Assistant Registrar, Court of Small Causes, Bengaluru

Advocate for Petitioner: **Mrs. Veenashree. S**
No.13, Guru Krupa, 1st Main, Opp. Vidyavahini School, S.G. Kaval, Bengaluru- 560 091.

[illegible]

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹ ವಾದವು. ಆದರೆ ಅದರಲ್ಲಿ ಪ್ರತಿಪಾದಿತ ವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ

ಆಡಳಿತ ವೈದ್ಯಾಧಿಕಾರಿಗಳ ಕಛೇರಿ,
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹೊನ್ನಾಳಿ- 577217
Email:ghhonnali@gmail.com

ಸಂಖ್ಯೆ:ಸಾಆಹೊ/45/2026-27 ದಿನಾಂಕ: 18.04.2026

ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಹೊನ್ನಾಳಿ ಇಲ್ಲಿಗೆ 2026-27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮಾನವ ಸಂಪನ್ಮೂಲ ಗ್ರೂಪ್ ಡಿ ಹಾಗೂ ನಾನ್ ಕ್ಲಿನಿಕಲ್ ಸೇವೆಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 17/04/2026 ರಿಂದ ದಿನಾಂಕ: 04/05/2026 ರ ಸಂಜೆ 5.00 ವರೆಗೆ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳು www.kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ವಾಸಾಇ/ಡಿಪಿಜೆ/00/ಕೆಎಸ್‌ಎಂಸಿಎ/2026-27 — ಸಹಿ/- ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಹೊನ್ನಾಳಿ.

ಕರ್ನಾಟಕ ಸರ್ಕಾರ

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಂಡ್ಯ
ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮಂಡ್ಯ ಮನೆ ಸಂ.1153, 2ನೇ ಕ್ರಾಸ್, ಚಾಮುಂಡೇಶ್ವರಿನಗರ ಬನ್ನೂರು ರಸ್ತೆ, ಮಂಡ್ಯ-571401, ದೂ:08232-220340
ಟೆಂಡರ್ ಸಂಖ್ಯೆ: ADTCPM/01/TENDER/2026-27
ದಿ:17.04.2026

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸುವ ಸೂಚನ ಪತ್ರ

ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಮಂಡ್ಯ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಬೆರಳಚ್ಚುಗಾರರು-01 ಮತ್ತು ಗ್ರೂಪ್ 'ಡಿ'-01 ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಅನುಭವ ಹೊಂದಿರುವ, ಅರ್ಹ ವ್ಯಕ್ತಿ/ ಸ್ವಯಂ ಸೇವಾ ಸಂಸ್ಥೆಗಳು/ ಏಜೆನ್ಸಿಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಸಂಗ್ರಹಣಾ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ದಿನಾಂಕ : 17.04.2026ರಂದು ಇ-ಸಂಗ್ರಹಾ ಕೋಶದಲ್ಲಿ ಟೆಂಡರನ್ನು ಪ್ರಕಟಿಸಲಾಗಿದೆ. ದಿನಾಂಕ : 24.04.2026 ರ ಸಂಜೆ 5.30 ಗಂಟೆಯೊಳಗೆ ಬಿಡ್ ಸಲ್ಲಿಸುವುದು. ದಿನಾಂಕ : 27.04.2026ರ ಬೆಳಿಗ್ಗೆ 11.30 ಗಂಟೆಗೆ ತಾಂತ್ರಿಕ ಬಿಡ್ ತೆರೆಯಲಾಗುವುದು. ಆರ್ಥಿಕ ಬಿಡ್ ತೆರೆಯಲು ದಿನಾಂಕವನ್ನು ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು. ನಿಗಧಿತ ಟೆಂಡರ್ ನಮೂನೆ ಹಾಗೂ ಟೆಂಡರ್ ಆಹ್ವಾನಿಸುವ ಸೂಚನ ಪತ್ರ ನಿಯಮ ಮತ್ತು ಷರತ್ತುಗಳು, ಇತ್ಯಾದಿ ಇವುಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಕೋಶದ ವೆಬ್‌ಪೋರ್ಟಲ್ https://kppp.karnataka.gov.in ಇದರಲ್ಲಿ ಪಡೆದುಕೊಂಡು ಸಲ್ಲಿಸಬಹುದಾಗಿದೆ.

ಸಹಿ/-ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಂಡ್ಯ.

[illegible]/057/2026-27

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಹಾಸನ ವಿಭಾಗ, ಅರಣ್ಯ ಭವನ, ಡೈರಿ ಸರ್ಕಲ್, ಬಿ.ಎಂ. ರಸ್ತೆ, ಹಾಸನ-573 201.

ಸಂಖ್ಯೆ : ಎ5/ವಜೇ/ಹೊರಗುತ್ತಿಗೆ/ಸಿ.ಆರ್-05/2025-26
ದಿನಾಂಕ: 16.04.2026.

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)

2026-27 ಮತ್ತು 2027-28ನೇ ಸಾಲಿನಲ್ಲಿ, ಹಾಸನ ವೃತ್ತ ಕಛೇರಿ, ಅರಣ್ಯ ಸಂಚಾರಿ ದಳ, ಹಾಸನ ಪ್ರಾದೇಶಿಕ ಅರಣ್ಯ ವಿಭಾಗ ಕಛೇರಿ ಮತ್ತು ಹಾಸನ ವಿಭಾಗದ ವ್ಯಾಪ್ತಿಯಲ್ಲಿ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಪ್ರದೇಶದಲ್ಲಿ ಅಗತ್ಯವಿರುವ ವಾಹನ ಚಾಲಕರು, ಗಣಕಯಂತ್ರ ನಿರ್ವಾಹಕರು, ಗ್ರೂಪ್ ಡಿ ನೌಕರರು, ಅರಣ್ಯ ರಕ್ಷಕ, ಅರಣ್ಯ ವೀಕ್ಷಕ ಮತ್ತು ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಣ ತಂಡಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು 2026-27 ಮತ್ತು 2027-28 ನೇ ಸಾಲಿನಲ್ಲಿ ಪಡೆಯಲು ಅರ್ಹ ಆಸಕ್ತ ಅಧಿಕೃತ ಹೊರ ಸಂಪನ್ಮೂಲ ಏಜೆನ್ಸಿಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಸಂಕ್ಷಿಪ್ತ ಟೆಂಡರ್ ಕರೆಯಲಾಗಿದೆ. ದಿನಾಂಕ: 27.04.2026 ರಂದು 16.00 (ಸಂಜೆ 4.00 ಗಂಟೆ) ಗಂಟೆಯವರೆವಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಅಥವಾ ಅಂತರ್ಜಾಲದಲ್ಲಿ http://KPPP.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿದೆ.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಹಾಸನ ವಿಭಾಗ, ಹಾಸನ.

ವಾಸಾಸಂಇ/ಡಿಪಿಐ/ಹಾಸನ/47/ಕೆಎಸ್‌ಎಂಸಿಎ/206-27

[illegible]

ಪುರಸಭೆ ಕಾರ್ಯಾಲಯ, ಗಜೇಂದ್ರಗಡ
ತಾ: ಗಜೇಂದ್ರಗಡ, ಜಿ: ಗದಗ
Tel: 08381-262222 Email- itstaff_ulb_gajendragad@yahoo.in

ಕ್ರಸಂ:ಪುಸಗ/ಕಾವಿ/ಸಿಎಂಐಡಿಪಿ/ಮಹಿ/2026-27 ದಿನಾಂಕ: 17-04-2026

(ಅಲ್ಪಾವಧಿ ಟೆಂಡರ್ ಪ್ರಕಟಣೆ-ಕೆಪಿಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ಪಾರದರ್ಶಕತೆ ಅಧಿನಿಯಮ-2000ರ ಪ್ರಕಾರ "ಇ-ಪ್ರೊಕ್ಯೂರ್‌ಮೆಂಟ್" ಪದ್ಧತಿಯಲ್ಲಿ ಸರ್ಕಾರದಿಂದ ಗಜೇಂದ್ರಗಡ ಪಟ್ಟಣಕ್ಕೆ ಸನ್ 2025-26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ (ಸಿ.ಎಂ.ಐ.ಡಿ.ಪಿ) ಅಡಿಯಲ್ಲಿ ಬಿಡುಗಡೆಯಾದ ಅನುದಾನಕ್ಕೆ ಕೈಕೊಳ್ಳುವ ಕಾಮಗಾರಿ **ಇಂಡೆಂಟ್ ಸಂಖ್ಯೆ:DMA/2025-26/OW/WORK_INDENT56587 ರೂ. 304.00 ಲಕ್ಷಗಳ** ಕಾಮಗಾರಿ ಅನುಷ್ಠಾನಕ್ಕಾಗಿ ಕೆ.ಡಬ್ಲ್ಯು-4, ಹಾಗೂ ಸನ್ **2024-25ನೇ** ಸಾಲಿನ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಉಳಿಕೆ ಅನುದಾನಕ್ಕೆ ಕೈಕೊಳ್ಳುವ ಕಾಮಗಾರಿ **ಇಂಡೆಂಟ್ ಸಂಖ್ಯೆ: DMA/2026-27/OW/WORK_INDENT57499 ರೂ. 2.08 ಲಕ್ಷಗಳ** ಕಾಮಗಾರಿ ಅನುಷ್ಠಾನಕ್ಕಾಗಿ ಕೆ.ಡಬ್ಲ್ಯು-1, ದಸ್ತಾವೇಜ್‌ನಲ್ಲಿ **https://kppp.karnataka.gov.in/** ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕೆಪಿಪಿಪಿ ಪೋರ್ಟಲ್ ದಾಖಲೆಗಳಿಗಾಗಿ **https://kppp.karnataka.gov.in/** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

ಕೆಪಿಪಿಪಿ ಪೋರ್ಟಲ್ ಪದ್ಧತಿಯಲ್ಲಿ ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 30-04-2026** ಸಾಯಂಕಾಲ **4.00 ಗಂಟೆಯ ವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 02-05-2026,** ಸಾಯಂಕಾಲ **4.00 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04-05-2026** ಮುಂಜಾನೆ **11:30 ಗಂಟೆಗೆ.** ನಿಗಧಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ **https://kppp.karnataka.gov.in/** ಹಾಗೂ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ-ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ.

ಸಹಿ/- ಮುಖ್ಯಾಧಿಕಾರಿ ಪುರಸಭೆ ಗಜೇಂದ್ರಗಡ — ವಾ.ಸಾ.ಸಂ.ಇ/ಗದಗ/29/ದೀಕಪಾಂಡಪ್ಪ/ಜಿ/2026-27 — ಸಹಿ/- ಆಡಳಿತಾಧಿಕಾರಿಗಳು ಪುರಸಭೆ ಗಜೇಂದ್ರಗಡ

ನಗರಸಭಾ ಕಾರ್ಯಾಲಯ, ಹೊಸಕೋಟೆ
ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562114,
ದೂರವಾಣಿ:-27931221, ಸಹಾಯವಾಣಿ: 27931759
Email:-itstaff_ulb_hosakote@yahoo.com Website: www.hosakotecity.mrc.gov.in

ನಂ.ನಸಹೊ/ತಾಂತ್ರಿಕ ಶಾಖೆ/ಮ.ಟೆಂಡರ್/ಆರ್/03/2026-27 ದಿನಾಂಕ: 18.04.2026

"ಮರು ಟೆಂಡರ್ ಪ್ರಕಟಣೆ" (ಇ-ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2025-26ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ (CMIDP) ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ 01/02/03 ರ ಪ್ರಕಾರ ಮರು ಟೆಂಡರ್‌ನ್ನು ಏಕ/ದ್ವಿ-ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	ಸಾಮಾನ್ಯ ವರ್ಗದವರಿಗೆ ಕಾಯ್ದಿರಿಸಲಾದ ಕಾಮಗಾರಿಗಳು	
01	DMA/2025-26/RD/WORK_INDENT53607/CALL-2	32.00
02	DMA/2025-26/OW/WORK_INDENT53590/CALL-2	27.00
03	DMA/2025-26/OW/WORK_INDENT53606/CALL-2	36.00

1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **02.05.2026** ರ ಸಂಜೆ **5.30** ಗಂಟೆಯವರೆಗೆ ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **04.05.2026** ರ ಬೆಳಗ್ಗೆ **11.00** ಗಂಟೆಗೆ ನಿಗಧಿ ಪಡಿಸಲಾಗಿರುತ್ತದೆ.
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in/#/portal/portal-home** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

ಸಹಿ/- ಪೌರಾಯುಕ್ತರು, ನಗರಸಭೆ, ಹೊಸಕೋಟೆ.
ವಾಸಾಸಂಇ/ವಾ.ಪ್ರ/ಶಿರಡಿಸಾಯಿ/244/2026-27

ಕರ್ನಾಟಕ ಸರ್ಕಾರ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್.
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಬೆಂಗಳೂರು ರವರಿಗೆ ಸಂಯೋಜನೆಗೊಂಡಿದ್ದು, ಭಾರತ ಸರ್ಕಾರ ನವದೆಹಲಿ ರವರಿಂದ ಅಂಗೀಕೃತಗೊಂಡಿರುತ್ತದೆ.
ದೂರವಾಣಿ ಸಂಖ್ಯೆ : 08482-228366 & ಫ್ಯಾಕ್ಸ್ : 08482-240322
Website : www.bimsbidar.karnataka.gov.in & E-mail Id : directorbrimsbidar2007@gmail.com

ಸಂಖ್ಯೆ : ಬೀವೈವಿಸಂ/ಟೆಂಡರ್/ವಾರ್ತಾ ಪತ್ರಿಕೆ/ಸಿಆರ್- /2026-27 ದಿನಾಂಕ : 18-04-2026

ಟೆಂಡರ್ ಪ್ರಕಟಣೆ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ ಬೀದರ್ 2026-27 ನೇ ಸಾಲಿಗೆ ಬೇಕಾಗಿರುವ Supply of Tablets, Injections, Disposables and Liquid ointments and powders, IV Fluids & Sutures and Chemicals & Reagents to Brims Bidar ಗಳ ಸರಬರಾಜುವಿಗಾಗಿ ಇ-ಟೆಂಡರ್ ಕರೆಯಲಾಗಿದೆ. ಇಚ್ಛೆಯುಳ್ಳ ಏಜೆನ್ಸಿಯವರು ದಿನಾಂಕ: 15-05-2026 ರ ವರೆಗೆ ಇ-ಟೆಂಡರ್ ನಲ್ಲಿ ನಮೂದಿಸಿದ ಸಮಯದ ಅನುಗುಣವಾಗಿ ಟೆಂಡರ್ ಭರಿಸಲು ಅವಕಾಶವಿರುತ್ತದೆ. ಹಾಗೂ ಇ-ಸಂಗ್ರಹಣೆಯ ಪೋರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವೀಕ್ಷಿಸಬಹುದು/ಡೌನಲೋಡ್ ಮಾಡಿಕೊಂಡು ಇ-ಪ್ರೋಕ್ಯೂಮೆಂಟ್ ಮೂಲಕ ಸಲ್ಲಿಸಬಹುದು www.kppp.karnataka.gov.in ಮತ್ತು ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಸಂಸ್ಥೆಯ ಅಂತರ್ಜಾಲತಾಣವಾದ www.bimsbidar.karnataka.gov.in ನಲ್ಲಿ ಸಹ ನೋಡಬಹುದಾಗಿದೆ.

1) **ಟೆಂಡರ್ ವಿವರ:** SUPPLY OF TABLETS TO BRIMS BIDAR FOR THE YEAR 2026-27, **ಇಂಡೆಂಟ್ ಸಂಖ್ಯೆ:** DME/2026-27/IND2249, ಇ.ಎಂ.ಡಿ: 2,00,000.00, 2) **ಟೆಂಡರ್ ವಿವರ:** SUPPLY OF INJECTIONS TO BRIMS BIDAR FOR THE YEAR 2026-27, **ಇಂಡೆಂಟ್ ಸಂಖ್ಯೆ:** DME/2026-27/IND2252, ಇ.ಎಂ.ಡಿ: 2,00,000.00, 3)**ಟೆಂಡರ್ ವಿವರ:** SUPPLY OF DISPOSABLES TO BRIMS BIDAR FOR THE YEAR 2026-27,**ಇಂಡೆಂಟ್ ಸಂಖ್ಯೆ:** DME/2026-27/IND2254, ಇ.ಎಂ.ಡಿ: 2,00,000.00, 4)**ಟೆಂಡರ್ ವಿವರ:** SUPPLY OF LIQUID OINTMENTS & POWDERS TO BRIMS BIDAR FOR THE YEAR 2026-27,**ಇಂಡೆಂಟ್ ಸಂಖ್ಯೆ:** DME/2026-27/IND2259, ಇ.ಎಂ.ಡಿ: 2,00,000.00, 5)**ಟೆಂಡರ್ ವಿವರ:** SUPPLY OF IV FLUIDS & SUTURES TO BRIMS BIDAR FOR THE YEAR 2026-27,**ಇಂಡೆಂಟ್ ಸಂಖ್ಯೆ:** DME/2026-27/IND2264,ಇ.ಎಂ.ಡಿ: 2,00,000.00, 6)**ಟೆಂಡರ್ ವಿವರ:**SUPPLY OF CHEMICALS & REAGENTS TO BRIMS BIDAR FOR THE YEAR 2026-27,**ಇಂಡೆಂಟ್ ಸಂಖ್ಯೆ:** DME/2026-27/IND2260,ಇ.ಎಂ.ಡಿ:2,00,000.00

ಗಮನಿಸಿ:- 1) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸ : ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ www.kppp.karnataka.gov. ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ನಿರ್ದೇಶಕರು
ವಾ.ಸಾ.ಸಂ.ಇ/ಬೀದರ/15/ಕೆ.ಎಸ್.ಎಂ.ಸಿ.&ಎ/2026-27 — ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಬೀದರ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ತಿದ್ದುಪಡಿ

ಈ ದಿನಪತ್ರಿಕೆಯಲ್ಲಿ ದಿನಾಂಕ 18.04.2026 ರಂದು ಪ್ರಕಟವಾದ ಇ-ಹರಾಜು ಅಧಿಸೂಚನೆ ಸಂಖ್ಯೆ ಬೆಂಅಪ್ರಾ/ಅಸ/ಇ-ಹರಾಜು/ಜಿ-01/2026-27 ದಿನಾಂಕ: 04.04.2026ಕ್ಕೆ ಸಂಬಂಧಿಸಿದಂತೆ, ಕೆಳಗೆ ತಿಳಿಸಲಾದ ನಿವೇಶನಗಳನ್ನು ಇ-ಹರಾಜಿನಿಂದ ಹಿಂಪಡೆಯಲಾಗಿದೆ.

ಕ್ರ. ಸಂ.	ಅಧಿಸೂಚನೆ ಕ್ರ.ಸಂ.	ಬಡಾವಣೆಗಳು	ನಿವೇಶನ ಸಂಖ್ಯೆ
1	3	ಮುಂದುವರೆದ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ 7ನೇ ಬ್ಲಾಕ್, ಗಿಡದಕೋನೇನಹಳ್ಳಿ	1781/2
2	4		1804/2
3	6		1814
4	7		1189/1
5	11		880
6	8	ಮುಂದುವರೆದ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ 9ನೇ ಬ್ಲಾಕ್, ಗಿಡದಕೋನೇನಹಳ್ಳಿ	1831/1
7	10		1832/1
8	16	ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ 1ನೇ ಬ್ಲಾಕ್	159/13
9	24	ಜ್ಞಾನಭಾರತಿ 2ನೇ ಬ್ಲಾಕ್, ನಾಗದೇವನಹಳ್ಳಿ	1027
10	25		1026
11	27	ಜ್ಞಾನಭಾರತಿ 3ನೇ ಬ್ಲಾಕ್, ನಾಗದೇವನಹಳ್ಳಿ	46
12	28		84
13	30		28
14	31	ನಾಗರಭಾವಿ, 1ನೇ ಫೇಸ್, ನಾಗರಭಾವಿ	1023
15	32		1029A
16	57	ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ, 3ನೇ ಬ್ಲಾಕ್, ಸೊಣ್ಣೇನಹಳ್ಳಿ	2603
17	59		1172
18	83	ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ, 6ನೇ ಬ್ಲಾಕ್, ಉಲ್ಲಾಳು ಮತ್ತು ಮಂಗನಹಳ್ಳಿ	2597
19	88	ಜ್ಞಾನಭಾರತಿ, 3ನೇ ಬ್ಲಾಕ್, ವಲಗೇರಹಳ್ಳಿ	393
20	89		394
21	90		390
22	91		418
23	117	ಅರ್ಕಾವತಿ ಬಡಾವಣೆ, 1ನೇ ಬ್ಲಾಕ್, ಜಕ್ಕೂರು	JK 59
24	118		384/A
25	134	ಹೆಚ್‌ಬಿಆರ್ 2ನೇ ಬ್ಲಾಕ್, ರಾಚೇನಹಳ್ಳಿ	508
26	138	ಅರ್ಕಾವತಿ ಬಡಾವಣೆ, 11ನೇ ಬ್ಲಾಕ್, ಕಾಚರಕನಹಳ್ಳಿ	1122
27	139		RH 266
28	141	ಅರ್ಕಾವತಿ ಬಡಾವಣೆ 2ನೇ ಬ್ಲಾಕ್, ಸಂಪಿಗೇಹಳ್ಳಿ	SH 257
29	143	ಅರ್ಕಾವತಿ ಬಡಾವಣೆ 3ನೇ ಬ್ಲಾಕ್, ಸಂಪಿಗೇಹಳ್ಳಿ	SH75
30	148	ಅರ್ಕಾವತಿ ಬಡಾವಣೆ 15ನೇ ಬ್ಲಾಕ್, ಥಣಿಸಂದ್ರ	TS1061
31	151		316
32	153		TS384
33	154		TS401
34	155	ಅರ್ಕಾವತಿ ಬಡಾವಣೆ, 20ನೇ ಬ್ಲಾಕ್, ಥಣಿಸಂದ್ರ	TS856A
35	156		TS854A
36	157		TS932
37	158		TS939A
38	159		1088
39	163	ಅರ್ಕಾವತಿ ಬಡಾವಣೆ 3ನೇ ಬ್ಲಾಕ್, ವೆಂಕಟೇಶಪುರ	467/B
40	166		TS940A
41	169	ಅರ್ಕಾವತಿ ಬಡಾವಣೆ 20ನೇ ಬ್ಲಾಕ್, ಥಣಿಸಂದ್ರ	TS822
42	171	ಅರ್ಕಾವತಿ ಬಡಾವಣೆ 15ನೇ & 20ನೇ ಬ್ಲಾಕ್, ಥಣಿಸಂದ್ರ	TS540
43	172	ಅರ್ಕಾವತಿ ಬಡಾವಣೆ 15ನೇ ಬ್ಲಾಕ್, ಥಣಿಸಂದ್ರ	TS801
44	175	ಅರ್ಕಾವತಿ ಬಡಾವಣೆ 8ನೇ ಬ್ಲಾಕ್, ಶ್ರೀರಾಂಪುರ	917
45	181	ಅಂಜನಾಪುರ ಟೌನ್‌ಶಿಪ್, 8ನೇ ಬ್ಲಾಕ್, ಅಂಜನಾಪುರ	743/A
46	182		755/A
47	205	ಬನಶಂಕರಿ, 6ನೇ ಫೇಸ್, 11ನೇ ಬ್ಲಾಕ್, ಗಣಕಲ್ಲು	275
48	222	ಬನಶಂಕರಿ, 6ನೇ ಫೇಸ್, 4ನೇ ಬ್ಲಾಕ್, ಹೆಮ್ಮಿಗೇಪುರ	647
49	228	ಬನಶಂಕರಿ, 6ನೇ ಫೇಸ್, 4ನೇ ಬ್ಲಾಕ್, ಲಿಂಗಧೀರನಹಳ್ಳಿ	2520
50	252	ಬನಶಂಕರಿ, 6ನೇ ಹಂತ, 1ನೇ ಬ್ಲಾಕ್, ತುರಹಳ್ಳಿ	393
51	267	ಬನಶಂಕರಿ, 5ನೇ ಬ್ಲಾಕ್, ವಡ್ಡರಪಾಳ್ಯ	31
52	268	ಮುಂದುವರೆದ ಬನಶಂಕರಿ 5ನೇ ಹಂತ, 4ನೇ 'ಹೆಚ್' ಬ್ಲಾಕ್, ವಡ್ಡರಪಾಳ್ಯ	141
53	17	ನಾಗರಭಾವಿ, 2ನೇ ಹಂತ, 7ನೇ ಬ್ಲಾಕ್, ಮಾಲಗಾಳ	389/7
54	63	ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ 6ನೇ ಹಂತ, ಉಲ್ಲಾಳು	1449
55	125	ಅರ್ಕಾವತಿ, 7ನೇ ಬ್ಲಾಕ್, ಜಕ್ಕೂರು	32
56	178	ಅಂಜನಾಪುರ ಟೌನ್‌ಶಿಪ್, 1ನೇ ಬ್ಲಾಕ್, ಅಂಜನಾಪುರ	400/A

ಇ-ಹರಾಜಿನಲ್ಲಿ ಕೆಳಗೆ ತಿಳಿಸಲಾದ ನಿವೇಶನಗಳನ್ನು ಸೇರಿಸಲಾಗಿದೆ
ಬಿಡ್ ಮುಕ್ತಾಯದ ಕೊನೆಯ ದಿನಾಂಕ: 30.04.2026 ಸಂಜೆ 5.00 ಗಂಟೆಯವರೆಗೆ (ಹೆಚ್ಚುವರಿ ಸಮಯ 5.00 ನಿಮಿಷಗಳು)

ಕ್ರ.ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ - ಪಶ್ಚಿಮ	ಅಳತೆ (ಮೀ.ಗಳಲ್ಲಿ) ಉತ್ತರ - ದಕ್ಷಿಣ	ವಿಸ್ತೀರ್ಣ (ಚ.ಮೀ.ಗಳಲ್ಲಿ)
		ಅರ್ಕಾವತಿ 1ನೇ ಬ್ಲಾಕ್, ಜಕ್ಕೂರು		
1	397	18.00	14.00	252.00
		ಆರಂಭಿಕ ಬಿಡ್ ದರ: ಚ.ಮೀ.ಗೆ ರೂ.73,500/-, ಸಂಪರ್ಕ: 8494933686		
		ಅರ್ಕಾವತಿ, 3ನೇ ಬ್ಲಾಕ್, ಸಂಪಿಗೆಹಳ್ಳಿ		
2	SH43	18.00	(13.90+13.60)/2	247.50
		ಆರಂಭಿಕ ಬಿಡ್ ದರ: ಚ.ಮೀ.ಗೆ ರೂ.87,500/-, ಸಂಪರ್ಕ: 8494933686		

ಇತರೆ ನಿಯಮ ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಅನಾನುಕೂಲತೆಗಾಗಿ ಬಿಡಿಎ ವಿಷಾದ ವ್ಯಕ್ತಪಡಿಸುತ್ತದೆ.
ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/- ಅಭಿಯಂತರ ಸದಸ್ಯರು

ಇರಾನ್-ಅಮೆರಿಕ ಉದ್ವಿಗ್ನತೆ ತೀವ್ರ | ಜಾಗತಿಕ ತೈಲ ಸರಬರಾಜಿಗೆ ಭೀತಿ | ನಿರ್ಬಂಧಕ್ಕೆ ಪ್ರತಿಯಾಗಿ ಇರಾನ್ ಕಠಿಣ ನಿಯಂತ್ರಣ

ಹಾರ್ಮುಜ್‌ನಲ್ಲಿ ಇರಾನ್ ಗುಂಡಿನ ದಾಳಿ

• **ಕೈರೋ:** ಜಾಗತಿಕ ತೈಲ ಸಾಗಾಟದ ಪ್ರಮುಖ ದ್ವಾರವಾದ ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆ ಮತ್ತಷ್ಟು ತೀವ್ರಗೊಂಡಿದ್ದು, ಜಾಗತಿಕ ಆರ್ಥಿಕತೆಗೆ ಹೊಸ ಆತಂಕವನ್ನುಂಟುಮಾಡಿದೆ. ಅಮೆರಿಕ ಇರಾನ್ ಬಂದರುಗಳ ಮೇಲೆ ಹೇರಿರುವ ನಿರ್ಬಂಧಕ್ಕೆ ಪ್ರತಿಯಾಗಿ ಇರಾನ್ ತನ್ನ ನಿಯಂತ್ರಣವನ್ನು ಮರುಸ್ಥಾಪಿಸಿ, ಜಲಸಂಧಿಯಲ್ಲಿ ಸಾಗಾಟಕ್ಕೆ ಕಟ್ಟುನಿಟ್ಟಿನ ನಿಯಂತ್ರಣ ಹೇರಿದೆ.

ಶನಿವಾರ ಈ ಉದ್ವಿಗ್ನತೆ ಹೊಸ ತಿರುವು ಪಡೆದುಕೊಂಡಿದ್ದು, ಜಲಸಂಧಿ ದಾಟುತ್ತಿದ್ದ ಒಂದು ತೈಲ ಟ್ಯಾಂಕರ್ ಮೇಲೆ ಇರಾನ್ ರೆವಲ್ಯೂಷನರಿ ಗಾರ್ಡ್‌ಗೆ ಸೇರಿದ ಎರಡು ಗನ್‌ಬೋಟ್‌ಗಳು ಗುಂಡಿನ ದಾಳಿ ನಡೆಸಿವೆ. ಬ್ರಿಟನ್ ಸೇನೆಯ ಯುನೈಟೆಡ್ ಕಿಂಗ್‌ಡಮ್ ಮೆರಿಟೈಮ್ ಟ್ರೇಡ್ ಆಪರೇಷನ್ಸ್ ಕೇಂದ್ರ ಈ ಘಟನೆಯನ್ನು ದೃಢಪಡಿಸಿದ್ದು, ಹಡಗು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ ಎಂದು ತಿಳಿಸಿದೆ. ಹಡಗಿನ ಹೆಸರು ಅಥವಾ ಗಮ್ಯಸ್ಥಾನವನ್ನು ಬಹಿರಂಗಪಡಿಸಲಿಲ್ಲ.




ಇದರ ನಡುವೆ, ಇರಾನ್ ಸಂಯುಕ್ತ ಸೇನಾ ಕಮಾಂಡ್ 'ಹಾರ್ಮುಜ್ ಜಲಸಂಧಿಯ ಮೇಲಿನ ನಿಯಂತ್ರಣ ಮತ್ತೆ ನಮ್ಮ ಹಸ್ತದಲ್ಲಿದ್ದು, ಕಠಿಣ ಮೇಲ್ವಿಚಾರಣೆಯಲ್ಲಿದೆ' ಎಂದು ಘೋಷಿಸಿದೆ. ಅಮೆರಿಕ ನಿರ್ಬಂಧ ಮುಂದುವರಿದಿರುವವರೆಗೆ ಜಲಸಂಧಿಯಲ್ಲಿ ಸಾಗಾಟವನ್ನು ತಡೆಯಲಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.

ಇದಕ್ಕೂ ಮೊದಲು, ಇರಾನ್ ಜಲಸಂಧಿಯನ್ನು ಮರುತೆರೆಯುವ ಸೂಚನೆ ನೀಡಿತ್ತು. ಆದರೆ ಅಮೆರಿಕದ ನಿರ್ಬಂಧಕ್ಕೆ ಪ್ರತಿಯಾಗಿ ತನ್ನ ನಿಲುವು ಬದಲಿಸಿ, ಮತ್ತೆ ನಿರ್ಬಂಧ ಹೇರಿದೆ. ಕಳೆದ ಏಳು ವಾರಗಳ ಯುದ್ಧದ ಅವಧಿಯಲ್ಲಿ, ಇರಾನ್ ತನ್ನ ಅನುಮತಿ ಪಡೆದ ಹಡಗುಗಳಿಗೆ ಮಾತ್ರ ಸಾಗಾಟಕ್ಕೆ ಅವಕಾಶ ನೀಡುತ್ತಿದ್ದು, ಇತರ ಹಡಗುಗಳನ್ನು ತಡೆಯುತ್ತಿದೆ. ಇರಾನ್ ಸಂಸತ್ತಿನ ರಾಷ್ಟ್ರೀಯ ಭದ್ರತಾ ಆಯೋಗದ ಮುಖ್ಯಸ್ಥ ಎಬ್ರಾಹಿಂ ಅಜೀಜಿ, 'ಜಲಸಂಧಿ ಹಿಂದಿನ ಸ್ಥಿತಿಗೆ ಮರಳುತ್ತಿದೆ' ಎಂದು ಹೇಳಿದ್ದು, ಹಡಗುಗಳು ಇರಾನ್ ನೌಕಾಪಡೆಯ ಅನುಮತಿ ಪಡೆದು, ಶುಲ್ಕ ಪಾವತಿಸಿದ ಬಳಿಕವೇ ಸಾಗಲು ಅವಕಾಶ ದೊರೆಯುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಈ ಬದಲಾವಣೆ ಒಂದು ದಿನದ ಹಿಂದಷ್ಟೇ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಜಲಸಂಧಿಯನ್ನು ತೆರೆದಿರುವುದಾಗಿ ಘೋಷಿಸಿದ್ದ ಹಿನ್ನೆಲೆ ನಡೆದಿದೆ. ಅದೇ ವೇಳೆ, ಲೆಬನಾನ್‌ನಲ್ಲಿ ಇಸ್ರೇಲ್ ಮತ್ತು ಇರಾನ್ ಬೆಂಬಲಿತ ಹೆಜ್ಬೊಲ್ಲಾ ಸಂಘಟನೆ ನಡುವಿನ 10 ದಿನಗಳ ಯುದ್ಧ ವಿರಾಮ ಘೋಷಿಸಲಾಗಿತ್ತು. ಇಸ್ರೇಲ್-ಹೆಜ್ಬೊಲ್ಲಾ ಸಂಘರ್ಷದ ಅಂತ್ಯ ಇರಾನ್ ಮಾತುಕತೆಗಳ ಪ್ರಮುಖ ಬೇಡಿಕೆಯಾಗಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಾರಂಭದಲ್ಲಿ ಜಲಸಂಧಿ ಮರುತೆರೆಯುವ ವಿಚಾರದಲ್ಲಿ ಸಮಾನ ನಿಲುವು ತೋರಿದರೂ, ನಂತರ ಇರಾನ್ ಜೊತೆಗೆ ಪರಮಾಣು ಕಾರ್ಯಕ್ರಮ ಸೇರಿದಂತೆ ಒಪ್ಪಂದವಾಗುವವರೆಗೆ ಅಮೆರಿಕದ ನಿರ್ಬಂಧ ಸಂಪೂರ್ಣವಾಗಿ ಮುಂದುವರಿಯುತ್ತದೆ ಎಂದು ಹೇಳಿದ್ದಾರೆ.

ಹಾರ್ಮುಜ್ ಜಲಸಂಧಿ ವಿಶ್ವದ ಒಟ್ಟು ತೈಲ ಸಾಗಾಟದ ಸುಮಾರು ಐದನೇ ಭಾಗವನ್ನು ಹೊತ್ತೊಯ್ಯುವ ಪ್ರಮುಖ ಮಾರ್ಗವಾಗಿದ್ದು, ಇಲ್ಲಿ ಉಂಟಾಗುವ ಯಾವುದೇ ಅಡ್ಡಿ ಜಾಗತಿಕ ಆರ್ಥಿಕತೆಗೆ ದೊಡ್ಡ ಹೊಡೆತ ನೀಡುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಗೊಂದಲ ತೈಲ ಸಂಕಷ್ಟವನ್ನು ಮತ್ತಷ್ಟು ಗಂಭೀರಗೊಳಿಸುವ ಆತಂಕವಿದೆ. ಇರಾನ್ ಈ ಜಲಸಂಧಿಯನ್ನು ತನ್ನ ಪ್ರಮುಖ ಒತ್ತಡ ಸಾಧನವಾಗಿ ಬಳಸಿಕೊಂಡಿದ್ದು, ಅಮೆರಿಕ ತನ್ನ ಪಡೆಗಳನ್ನು ನಿಯೋಜಿಸಿ, ಇರಾನ್ ಬಂದರುಗಳ ಮೇಲೆ ನಿರ್ಬಂಧ ಹೇರಿದೆ. ಈ ಕ್ರಮಗಳ ಉದ್ದೇಶ, ಇಸ್ರೇಲ್-ಅಮೆರಿಕ-ಇರಾನ್ ನಡುವೆ ಸುಮಾರು ಏಳು ವಾರಗಳಿಂದ ನಡೆಯುತ್ತಿರುವ ಯುದ್ಧಕ್ಕೆ ಅಂತ್ಯ ತರಲು ಪಾಕಿಸ್ತಾನದ ಮಧ್ಯವರ್ತಿತ್ವದಲ್ಲಿ ನಡೆಯುತ್ತಿರುವ ಯುದ್ಧ ವಿರಾಮ ಒಪ್ಪಂದವನ್ನು ಇರಾನ್ ಒಪ್ಪಿಕೊಳ್ಳುವಂತೆ ಒತ್ತಾಯಿಸುವುದು ಎಂದು ಹೇಳಲಾಗಿದೆ.

ಡೇಟಾ ಸಂಸ್ಥೆ ಕಪ್ಲರ್ ಪ್ರಕಾರ, ಪ್ರಸ್ತುತ ಜಲಸಂಧಿಯಲ್ಲಿ ಸಾಗಾಟವು ಇರಾನ್ ಅನುಮತಿ ಅಗತ್ಯವಿರುವ ನಿರ್ದಿಷ್ಟ ಮಾರ್ಗಗಳಿಗೆ ಮಾತ್ರ ಸೀಮಿತವಾಗಿದೆ. ಅಮೆರಿಕ ಕೇಂದ್ರ ಕಮಾಂಡ್ ಮಾಹಿತಿ ಪ್ರಕಾರ, ಸೋಮವಾರದಿಂದ ಆರಂಭವಾದ ನಿರ್ಬಂಧದ ಬಳಿಕ 21 ಹಡಗುಗಳನ್ನು ಹಿಂದಿರುಗಿಸಲಾಗಿದೆ.



ಜಾಗತಿಕ ತೈಲ ಮಾರುಕಟ್ಟೆಗೆ 50 ಬಿಲಿಯನ್ ಡಾಲರ್ ನಷ್ಟ

• **ದುಬೈ:** ಸುಮಾರು 50 ದಿನಗಳ ಹಿಂದೆ ಇರಾನ್ ಯುದ್ಧ ಪ್ರಾರಂಭವಾದಾಗಿನಿಂದ ವಿಶ್ವವು 50 ಬಿಲಿಯನ್ ಡಾಲರ್‌ಗಿಂತಲೂ ಹೆಚ್ಚು ಮೌಲ್ಯದ ಕಚ್ಚಾ ತೈಲ ಉತ್ಪಾದನೆಯನ್ನು ಕಳೆದುಕೊಂಡಿದೆ. ಇದು ಆಧುನಿಕ ಇತಿಹಾಸದಲ್ಲೇ ಅತಿದೊಡ್ಡ ಇಂಧನ ಪೂರೈಕೆ ವ್ಯತ್ಯಯ ಎಂದು ಗುರುತಿಸಲ್ಪಟ್ಟಿದೆ. ಕೆಪ್ಲರ್ ಅಂಕಿಅಂಶಗಳ ಪ್ರಕಾರ, ಫೆಬ್ರವರಿ ಅಂತ್ಯದಿಂದ ಜಾಗತಿಕ ಮಾರುಕಟ್ಟೆಯಿಂದ 500 ಮಿಲಿಯನ್ ಬ್ಯಾರೆಲ್‌ಗಿಂತಲೂ ಹೆಚ್ಚು ಕಚ್ಚಾ ತೈಲ ಮತ್ತು ಕಂಡೆನ್ಸೇಟ್ ಹೊರಬಿದ್ದಿದೆ. ಮಾರ್ಚ್ ತಿಂಗಳಿನಲ್ಲಿ ಗಲ್ಫ್ ಅರಬ್ ರಾಷ್ಟ್ರಗಳು ದಿನಕ್ಕೆ ಸುಮಾರು 8 ಮಿಲಿಯನ್ ಬ್ಯಾರೆಲ್ ಉತ್ಪಾದನೆ ಕಳೆದುಕೊಂಡಿವೆ. ಫೆಬ್ರವರಿಯಲ್ಲಿ 19.6 ಮಿಲಿಯನ್ ಬ್ಯಾರೆಲ್ ಇದ್ದ, ಸೌದಿ ಅರೇಬಿಯಾ, ಕತಾರ್ ಮತ್ತು ಇತರ ಪ್ರಾದೇಶಿಕ ರಾಷ್ಟ್ರಗಳ ಜೆಟ್ ಇಂಧನ ರಫ್ತು, ಮಾರ್ಚ್- ಏಪ್ರಿಲ್ ಅವಧಿಯಲ್ಲಿ 4.1 ಮಿಲಿಯನ್ ಬ್ಯಾರೆಲ್‌ಗಳಿಗೆ ಕುಸಿದಿದೆ. ಲೆಬನಾನ್ ಕದನ ವಿರಾಮ ಒಪ್ಪಂದದ ನಂತರ ಹಾರ್ಮುಜ್ ಜಲಸಂಧಿ ಮುಕ್ತವಾಗಿದ್ದರೂ, ಮೂಲಸೌಕರ್ಯ ಹಾಗೂ ಉತ್ಪಾದನಾ ಮಟ್ಟ ಸಹಜ ಸ್ಥಿತಿಗೆ ಮರಳಲು ತಿಂಗಳುಗಳು ಅಥವಾ ವರ್ಷಗಳೇ ಬೇಕಾಗಬಹುದು ಎನ್ನಲಾಗಿದೆ.

ಮುಖ್ಯಾಂಶಗಳು

- ಜಲಸಂಧಿಯಲ್ಲಿ ಸಾಗುತ್ತಿದ್ದ ಟ್ಯಾಂಕರ್ ಮೇಲೆ ಇರಾನ್ ಗನ್‌ಬೋಟ್‌ಗಳಿಂದ ಗುಂಡಿನ ದಾಳಿ
- ಅಮೆರಿಕ ನಿರ್ಬಂಧ ಮುಂದುವರಿದರೆ ಸಾಗಾಟ ತಡೆಯುವ ಇರಾನ್ ಎಚ್ಚರಿಕೆ
- ಜಾಗತಿಕ ತೈಲ ಸರಬರಾಜಿನ ಪ್ರಮುಖ ಮಾರ್ಗದಲ್ಲಿ ಗೊಂದಲ
- ಪಾಕಿಸ್ತಾನ ಮಧ್ಯವರ್ತಿತ್ವದಲ್ಲಿ ಒಪ್ಪಂದದತ್ತ ಪ್ರಗತಿ
- ಲೆಬನಾನ್‌ನಲ್ಲಿ ಯುದ್ಧ ವಿರಾಮದ ನಡುವೆಯೂ ಅನುಮಾನಗಳು

ಯಶಸ್ಸಿನ ಶ್ರೇಯಕ್ಕಾಗಿ ಒಪ್ಪಂದ ತಡಮಾಡಿದ್ರಾ ಅಧ್ಯಕ್ಷ ಟ್ರಂಪ್?

• **ವಾಷಿಂಗ್ಟನ್:** ಅಮೆರಿಕ-ಇರಾನ್ ನಡುವಿನ ಐತಿಹಾಸಿಕ ಕದನ ವಿರಾಮ ಒಪ್ಪಂದ ಬಹುತೇಕ ಅಂತಿಮ ಗೊಂಡಿದ್ದರೂ, ಕೊನೆಯ ಕ್ಷಣದಲ್ಲಿ ಯಶಸ್ಸಿನ ಶ್ರೇಯಕ್ಕಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಪ್ಪಂದ ಘೋಷಿಸಲು ತಡಮಾಡ್ತಿರುವ ಸಾಧ್ಯತೆಯಿದೆ ಎಂಬ ಸಂಶಯ ವ್ಯಕ್ತವಾಗಿದೆ.



- ಕೊನೆಯ ಕ್ಷಣದಲ್ಲಿ ಇಸ್ಲಾಮಾಬಾದ್‌ನಿಂದ ಉಪಾಧ್ಯಕ್ಷ ವ್ಯಾನ್ಸ್ ಕರೆ
- ಬಹುತೇಕ ಅಂತಿಮ ಗೊಂಡಿದ್ದ ಅಮೆರಿಕ-ಇರಾನ್ ಐತಿಹಾಸಿಕ ಒಪ್ಪಂದ

ಪಾಕಿಸ್ತಾನದಲ್ಲಿ ನಡೆದಿದ್ದ ಅಮೆರಿಕ-ಇರಾನ್ ನಡುವಿನ ಮೊದಲ ಹಂತದ ಕದನ ವಿರಾಮ ಚರ್ಚೆ ಬಹುತೇಕ ಯಶಸ್ವಿಯಾಗಿದ್ದು, ಕೊನೆಯ ಕ್ಷಣದಲ್ಲಿ ಅಧ್ಯಕ್ಷ ಟ್ರಂಪ್ ಮಧ್ಯಪ್ರವೇಶದಿಂದ ತಡವಾಗಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮತ್ತು ಇರಾನ್ ನಿಯೋಗದ ನಡುವಿನ ನಿರಂತರ ಮಾತುಕತೆಗಳ ಪರಿಣಾಮ ಕದನ ವಿರಾಮ ಒಪ್ಪಂದವು ಬಹುತೇಕ ಅಂತಿಮ ಘಟ್ಟವನ್ನು ತಲುಪಿತ್ತು. ಇದೇ ಕಾರಣದಿಂದ ಒಂದು ಒಡಂಬಡಿಕೆ (ಎಂಒಯು) ಅಂತಿಮಗೊಳಿಸಲಾಗಿತ್ತು. ಇನ್ನೇನು ಸಹಿ ಮಾಡುವುದೊಂದೇ ಬಾಕಿಯಿತ್ತು. ಆದರೆ ಈ ಸಂದರ್ಭ ಒಪ್ಪಂದ ಸಹಿ ಮಾಡುವುದಕ್ಕೆ ತಯಾರಿದೆ ಎಂಬ ಮಾಹಿತಿಯನ್ನು ಅಧ್ಯಕ್ಷ ಟ್ರಂಪ್‌ಗೆ ನೀಡಲು ಉಪಾಧ್ಯಕ್ಷ ವ್ಯಾನ್ಸ್ ಕರೆ ಮಾಡಿದ್ದರು. ಈ ಸಂದರ್ಭ ಅಮೆರಿಕ-ಇರಾನ್ ನಡುವಿನ ಶಾಂತಿ ಸಭೆಯ ಯಶಸ್ಸಿನ ಶ್ರೇಯ ತಮ್ಮದಾಗಿಸಲು ಅಧ್ಯಕ್ಷ ಟ್ರಂಪ್ ಒಪ್ಪಂದ ಘೋಷಿಸಲು ತಡ ಮಾಡುತ್ತಿದ್ದಾರೆಂದು ಮೂಲಗಳಿಂದ ತಿಳಿದುಬಂದಿದೆ.

ಪಾಕ್‌ಗೆ ಭದ್ರತಾ ಆತಂಕ, ಪ್ರಾದೇಶಿಕ ಒತ್ತಡ: ಮೂಲಗಳ ಪ್ರಕಾರ, ಇರಾನ್‌ನೊಂದಿಗೆ ಸುಮಾರು 900 ಕಿ.ಮೀ. ಗಡಿ ಹಂಚಿಕೊಳ್ಳುವ ಪಾಕಿಸ್ತಾನಕ್ಕೆ ಭದ್ರತಾ ಆತಂಕ ಹೆಚ್ಚಾಗಿದ್ದರಿಂದ ಎಚ್ಚರಿಕೆಯ ನಿಲುವು ತೆಗೆದುಕೊಳ್ಳಲು ಕಾರಣವಾಗಿದೆ. ಇರಾನ್ ಮತ್ತು ಸೌದಿ ಅರೇಬಿಯಾ ನಡುವಿನ ಭಿನ್ನಾಭಿಪ್ರಾಯ, ಪಾಕ್ ಮತ್ತು ಸೌದಿ ನಡುವಿನ ಸ್ನೇಹಕ್ಕೂ ಆತಂಕ ಸೃಷ್ಟಿಸಿದೆ. ಈ ಪ್ರಾದೇಶಿಕ ಒತ್ತಡವನ್ನು ಚೀನಾ ಸಹಾಯ ಪಡೆದು ಪಾಕ್ ಪ್ರಾದೇಶಿಕ ಉದ್ವಿಗ್ನತೆ ಕಡಿಮೆಗೊಳಿಸಲು ಪ್ರಯತ್ನಿಸುತ್ತಿದೆ. ಉದ್ವಿಗ್ನತೆ ಹೆಚ್ಚಾದರೆ, ಪಾಕ್ ಭದ್ರತೆಗೂ ಸಮಸ್ಯೆಯಾಗಲಿದ್ದು, ಚೀನಾ ಹೂಡಿಕೆಗಳಲ್ಲಿನ ಕಳವೆ ಬಹಿರಂಗವಾಗುವ ಸಾಧ್ಯತೆ ಇರಲಿದೆ.

ಸಭೆ ತೊರೆಯಲು ನಿರಾಕರಿಸಿದ್ದ ಇರಾನ್: ತಾವು ಮೊದಲಿಗೆ ಸಭೆ ತೊರೆಯಲು ಸಿದ್ಧರಿಲ್ಲ ಎಂದು ಇರಾನ್ ನಿಯೋಗವು ಪಾಕಿಸ್ತಾನಿ ಮಧ್ಯವರ್ತಿಗಳಿಗೆ ಸ್ಪಷ್ಟವಾಗಿ ಹೇಳಿತ್ತೆಂದು ತಿಳಿದುಬಂದಿದೆ. ಪಾಕ್ ಮತ್ತು ಚೀನಾ ಭರವಸೆಗಳ ಮೇರೆಗೆ ತಾವು ಅಮೆರಿಕದೊಂದಿಗೆ ಮಾತುಕತೆ ನಡೆಸುವುದಕ್ಕೆ ಒಪ್ಪಿಕೊಂಡು ಇಸ್ಲಾಮಾಬಾದ್‌ಗೆ ಬಂದಿದ್ದಾಗಿ ಇರಾನ್ ನಿಯೋಗ ಹೇಳಿತ್ತೆಂದು ಮೂಲಗಳು ತಿಳಿಸಿವೆ.

ಲೆಬನಾನ್ ಕದನ ವಿರಾಮದ ಮೇಲೆ ಅನುಮಾನಗಳು



ಇಸ್ರೇಲ್ ಮತ್ತು ಲೆಬನಾನ್ ನಡುವೆ ಕದನ ವಿರಾಮ ಏರ್ಪಡುವ ಬಗ್ಗೆ ಮಧ್ಯವರ್ತಿಗಳು ವಿಶ್ವಾಸ ವ್ಯಕ್ತಪಡಿಸಿದರೂ, ಹೆಜ್ಬೊಲ್ಲಾ ಈ ಯುದ್ಧ ವಿರಾಮವನ್ನು ಸಂಪೂರ್ಣವಾಗಿ ಪಾಲಿಸಬಹುದೇ ಎಂಬುದರ ಬಗ್ಗೆ ಅನುಮಾನಗಳಿವೆ. ಈ ಒಪ್ಪಂದದಲ್ಲಿ ಹೆಜ್ಬೊಲ್ಲಾ ನೇರವಾಗಿ ಭಾಗಿಯಾಗಿರಲಿಲ್ಲ ಮತ್ತು ದಕ್ಷಿಣ ಲೆಬನಾನ್‌ನ ಕೆಲವು ಭಾಗಗಳಲ್ಲಿ ಇಸ್ರೇಲ್ ಪಡೆಗಳು ಉಳಿದಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಸ್ರೇಲ್‌ಗೆ ಲೆಬನಾನ್ ಮೇಲೆ ಮುಂದಿನ ದಾಳಿಗಳನ್ನು ನಿಲ್ಲಿಸುವಂತೆ ಸೂಚಿಸಿದ್ದಾರೆ. ಆದರೆ, ಅಮೆರಿಕ ವಿದೇಶಾಂಗ ಇಲಾಖೆ ಈ ನಿರ್ಬಂಧವು ಕೇವಲ ದಾಳಿ ಕ್ರಮಗಳಿಗೆ ಮಾತ್ರ ಅನ್ವಯಿಸುತ್ತದೆ, ಆತ್ಮರಕ್ಷಣಾ ಕ್ರಮಗಳಿಗೆ ಅಲ್ಲ ಎಂದು ಸ್ಪಷ್ಟಪಡಿಸಿದೆ. ಇದಕ್ಕೂ ಮೊದಲು, ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೆತನ್ಯಾಹು, 'ಟ್ರಂಪ್ ವಿನಂತಿಯ ಮೇರೆಗೆ ಯುದ್ಧ ವಿರಾಮ ಒಪ್ಪಿಕೊಂಡಿದ್ದೇವೆ, ಆದರೆ ಹೆಜ್ಬೊಲ್ಲಾ ವಿರುದ್ಧದ ಕಾರ್ಯಾಚರಣೆ ಇನ್ನೂ ಪೂರ್ಣಗೊಂಡಿಲ್ಲ' ಎಂದು ಹೇಳಿದ್ದಾರೆ. ಅವರು ಹೆಜ್ಬೊಲ್ಲಾ ಬಳಿ ಇದ್ದ ಸುಮಾರು ಶೇ.90 ಕ್ಷಿಪಣಿ ಶಸ್ತ್ರಾಗಾರವನ್ನು ನಾಶಪಡಿಸಿದ್ದೇವೆ ಎಂದು ಹೇಳಿದ್ದಾರೆ. ಬೇರುತ್‌ನಲ್ಲಿ ಸ್ಥಳಾಂತರಗೊಂಡ ಜನರು ಮನೆಗಳಿಗೆ ಮರಳಲು ಆರಂಭಿಸಿದರೂ, ಅಧಿಕಾರಿಗಳು ಎಚ್ಚರಿಕೆ ನೀಡಿರುವ ಹಿನ್ನೆಲೆಯಲ್ಲಿ ಅನಿಶ್ಚಿತತೆ ಮುಂದುವರಿದಿದೆ. ಯುದ್ಧ ವಿರಾಮ ಜಾರಿಗೆ ಬಂದ ಕೆಲವೇ ಗಂಟೆಗಳಲ್ಲೇ ದಕ್ಷಿಣ ಲೆಬನಾನ್‌ನ ಕೆಲವು ಭಾಗಗಳಲ್ಲಿ ಗುಂಡಿನ ದಾಳಿಗಳು ವರದಿಯಾಗಿವೆ.

ಒಪ್ಪಂದದತ್ತ ಪ್ರಗತಿ: ಪಾಕಿಸ್ತಾನ

ಹಾರ್ಮುಜ್ ಜಲಸಂಧಿಯಲ್ಲಿ ಉದ್ವಿಗ್ನತೆ ಹೆಚ್ಚಾದರೂ, ಅಮೆರಿಕ ಮತ್ತು ಇರಾನ್ ನಡುವಿನ ಒಪ್ಪಂದದತ್ತ ಪ್ರಗತಿ ಕಂಡುಬರುತ್ತಿದೆ ಎಂದು ಪಾಕಿಸ್ತಾನ ಅಧಿಕಾರಿಗಳು ತಿಳಿಸಿದ್ದಾರೆ. ಏಪ್ರಿಲ್ 22ರ ಯುದ್ಧ ವಿರಾಮ ಗಡುವಿನೊಳಗೆ ಒಪ್ಪಂದ ಸಾಧ್ಯತೆ ಇದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಟರ್ಕಿಯ ಅಂಟಾಲ್ಯಾದಲ್ಲಿ ನಡೆದ ರಾಜತಾಂತ್ರಿಕ ವೇದಿಕೆಯಲ್ಲಿ ಮಾತನಾಡಿದ ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದರ್, ಲೆಬನಾನ್ ಯುದ್ಧ ವಿರಾಮವನ್ನು ಸಕಾರಾತ್ಮಕ ಬೆಳವಣಿಗೆ ಎಂದು ಹೇಳಿದ್ದಾರೆ. ಇಸ್ಲಾಮಾಬಾದ್‌ನಲ್ಲಿ ನಡೆದ ಮಾತುಕತೆಗಳು 'ಒಪ್ಪಂದದ ಬಹಳ ಸಮೀಪಕ್ಕೆ' ಬಂದಿದ್ದವು ಎಂದು ಅವರು ತಿಳಿಸಿದ್ದಾರೆ. ಪಾಕಿಸ್ತಾನ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಂ ಮುನೀರ್ ಟೆಹ್ರಾನ್‌ಗೆ ಭೇಟಿ ನೀಡಿದರೆ, ಪ್ರಧಾನಮಂತ್ರಿ ಶೆಹಬಾಜ್ ಶರೀಫ್ ಟರ್ಕಿ ಅಧ್ಯಕ್ಷ ರೆಸೆಪ್ ತಯಿಪ್ ಎರ್ದೋಗಾನ್ ಮತ್ತು ಕತಾರ್ ಅಮೀರ್ ತಮೀಮ್ ಬಿನ್ ಹಮದ್ ಅಲ್ ಥಾನಿ ಅವರನ್ನು ಭೇಟಿಯಾಗಿದ್ದಾರೆ. ಮುಂದಿನ ವಾರ ಅಮೆರಿಕ-ಇರಾನ್ ಮಾತುಕತೆಗಳ ಎರಡನೇ ಹಂತ ಪಾಕಿಸ್ತಾನದಲ್ಲಿ ನಡೆಯುವ ನಿರೀಕ್ಷೆಯಿದೆ.

ಪಾಕ್ ಸೀಮಿತ ಪಾತ್ರ, ಚೀನಾ ಭರವಸೆದಾರ?

ಅಮೆರಿಕ-ಇರಾನ್ ಐತಿಹಾಸಿಕ ಒಪ್ಪಂದ ಮಾತುಕತೆಯಲ್ಲಿ, ಪಾಕಿಸ್ತಾನದ ಪಾತ್ರವು ಸೀಮಿತವಾಗಿದ್ದು, ಇದರಲ್ಲಿ ಎರಡೂ ಬದಿಗೂ ಪ್ರಮುಖ ಬರವಸೆದಾರ ರಾಷ್ಟ್ರವಾಗಿ ಚೀನಾ ಹೊರಹೊಮ್ಮಿದೆ. ಮಾರ್ಚ್‌ನಲ್ಲಿ ಚೀನಾ ಅಧಿಕಾರಿಗಳು ಮತ್ತು ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ನಡುವೆ ಚರ್ಚೆ ನಡೆದಿತ್ತು. ಇಸ್ಲಾಮಾಬಾದ್ ಸ್ವತಂತ್ರ ಮಧ್ಯವರ್ತಿಯಲ್ಲ, ಚೀನಾ ಹಿತಾಸಕ್ತಿಗಳಿಗೆ ಮಧ್ಯಸ್ಥಿಕೆಯ ಮಾರ್ಗವಾಗಿ ಕಾರ್ಯ ನಿರ್ವಹಿಸಿದೆ. ಪಾಕ್ ಆರ್ಥಿಕ ಸವಾಲು ಎದುರಿಸುವ ಸಮಯದಲ್ಲೇ ಇದು ನಡೆದಿದ್ದರಿಂದ ಇದನ್ನು ಯಶಸ್ಸಿನ ರೀತಿ ಪಾಕ್ ಪ್ರದರ್ಶಿಸುತ್ತಿದೆ.

ಕೊನೆಯ ಕ್ಷಣ ಸಹಿ ಮಾಡದಂತೆ ಸಲಹೆ?

ಅಧ್ಯಕ್ಷರ ಸಲಹೆ ಕೇಳಲೆಂದು ಉಪಾಧ್ಯಕ್ಷ ವ್ಯಾನ್ಸ್ ಇಸ್ಲಾಮಾಬಾದ್‌ನಿಂದ ದೂರವಾಣಿ ಕರೆ ಮಾಡಿದ್ದಾಗ, ಇರಾನ್ ಜತೆಗಿನ ಒಪ್ಪಂದ ತಕ್ಷಣವೇ ಅಂತಿಮಗೊಳಿಸದಂತೆ ಮತ್ತು ಸಹಿ ಮಾಡದಂತೆ ಟ್ರಂಪ್ ಸಲಹೆ ನೀಡಿದ್ದರು. ಸಹಿ ಮಾಡುವುದಕ್ಕೂ ಮುನ್ನ ವೈಯಕ್ತಿಕವಾಗಿ ಒಪ್ಪಂದವನ್ನು ಪರಾಮರ್ಶೆ ಮಾಡಲು ಟ್ರಂಪ್ ಬಯಸಿದ್ದು, ಅದರೊಂದಿಗೆ 45 ವರ್ಷಗಳ ನಂತರ ಅಮೆರಿಕ-ಇರಾನ್ ನಡುವಿನ ಐತಿಹಾಸಿಕ ಒಪ್ಪಂದದ ಯಶಸ್ಸಿನ ಶ್ರೇಯ ಪಡೆದುಕೊಳ್ಳಲು ಅಧ್ಯಕ್ಷ ಟ್ರಂಪ್ ಒಪ್ಪಂದ ಘೋಷಿಸಲು ತಡ ಮಾಡಿರುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ. ದೂರವಾಣಿ ಕರೆಯಲ್ಲಿ ಟ್ರಂಪ್ ಸಲಹೆ ಪಡೆದ ಬಳಿಕ ಅಮೆರಿಕ-ಇರಾನ್ ಕದನ ವಿರಾಮ ಮಾತುಕತೆ ಕೊಠಡಿಗೆ ಮರಳಿದ ಉಪಾಧ್ಯಕ್ಷ ವ್ಯಾನ್ಸ್, ನಮ್ಮ ಅಧ್ಯಕ್ಷರು ವೈಯಕ್ತಿಕವಾಗಿ ಒಪ್ಪಂದವನ್ನು ಪರಾಮರ್ಶೆ ಮಾಡಬೇಕೆಂದಿದ್ದಾರೆ. ಹೀಗಾಗಿ ಒಪ್ಪಂದ ಈಗಲೇ ಅಂತಿಮಗೊಳಿಸಲು ಅಥವಾ ಸಹಿ ಮಾಡುವುದು ಸಾಧ್ಯವಿಲ್ಲ. ಯಾವುದೇ ಅಧಿಕೃತ ಬದ್ಧತೆ ನೀಡುವ ಮುನ್ನ ಅಧ್ಯಕ್ಷರು ಚರ್ಚೆ ನಡೆಸಲು ಬಯಸಿದ್ದಾಗಿ ವ್ಯಾನ್ಸ್ ಇರಾನ್ ನಿಯೋಗಕ್ಕೆ ತಿಳಿಸಿದ್ದಾರೆ ಎಂದು ಅಮೆರಿಕ ಮೂಲಗಳು ಹೇಳಿವೆ.

ಕಿರುಸುದ್ದಿ

ಭಾರತ ಸಿದ್ಧತೆ ಸಮರ್ಪಕ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಅಸ್ಥಿರ ಪರಿಸ್ಥಿತಿಯ ನಡುವೆ ಭಾರತ ಯಾವುದೇ ಪರಿಸ್ಥಿತಿಗೂ ಸಜ್ಜಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು. ಸಚಿವರ ಅನೌಪಚಾರಿಕ ಗುಂಪು ಸಭೆಯಲ್ಲಿ ಸಿದ್ಧತೆ ಪರಿಶೀಲನೆ ನಡೆಯಿತು. ದೇಶದಲ್ಲಿ 60 ದಿನಗಳಿಗೆ ಸಾಕಷ್ಟು ಇಂಧನ ಸಂಗ್ರಹವಿದ್ದು, ಹೋರ್ಮುಜ್ ಅವಲಂಬನೆ ಕಡಿಮೆಗೊಳಿಸಲು ಆಮದು ಮೂಲಗಳನ್ನು ವೈವಿಧ್ಯಗೊಳಿಸಲಾಗಿದೆ. ಮೆರಿಟೈಮ್ ಇನ್ಶುರೆನ್ಸ್ ಪೂಲ್ ರಚನೆಗೆ ಅನುಮೋದನೆ ನೀಡಲಾಗಿದೆ.

ರಷ್ಯಾ ತೈಲ ಖರೀದಿ ನಿರ್ಬಂಧ ಸಡಿಲಿಸಿದ ಅಮೆರಿಕ

• **ವಾಷಿಂಗ್ಟನ್:** ಭಾರತ ಸೇರಿದಂತೆ ವಿವಿಧ ದೇಶಗಳು ವಾಷಿಂಗ್ಟನ್ ವಿಧಿಸಿರುವ ನಿರ್ಬಂಧಗಳಿಗೆ ಒಳಗಾಗದೆ ರಷ್ಯಾದಿಂದ ಇಂಧನ ಖರೀದಿಸಲು ಅನುವು ಮಾಡಿಕೊಡುವ ಹೊಸ 30 ದಿನಗಳ ಸಾಮಾನ್ಯ ಪರವಾನಿಗೆಯನ್ನು ಅಮೆರಿಕ ಶುಕ್ರವಾರ ನೀಡಿದೆ. ಅಮೆರಿಕದ ಖಜಾನೆ ಇಲಾಖೆಯ ಈ ವಿಸ್ತರಣೆ, ಏಪ್ರಿಲ್ 17 ರಿಂದ ಮೇ 16 ರ ನಡುವೆ ಹಡಗುಗಳಿಗೆ ತುಂಬಲಾದ ತೈಲವನ್ನು ಖರೀದಿಸಲು ಅನುಮತಿ ನೀಡುತ್ತದೆ.

ಡಿಎಂಕೆ ಭ್ರಷ್ಟಾಚಾರ ತನಿಖೆ, ಮೋದಿ ಭರವಸೆ

• **ಕೊಯಮತ್ತೂರು:** ತಮಿಳುನಾಡಿನಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದ ನಂತರ ಡಿಎಂಕೆ ಪಕ್ಷದ ಕ್ಯಾಶ್-ಫಾರ್-ಪೋಸ್ಟಿಂಗ್ ಸೇರಿದಂತೆ ಎಲ್ಲಾ ಭ್ರಷ್ಟಾಚಾರ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಭರವಸೆ ನೀಡಿದರು. ಏಪ್ರಿಲ್ 23ರ ವಿಧಾನಸಭೆ ಚುನಾವಣೆಯ ನಂತರ ಸರ್ಕಾರ ರಚನೆಯಾಗುತ್ತಿದ್ದಂತೆ ಕ್ರಮ ಆರಂಭವಾಗಲಿದೆ ಎಂದು ಹೇಳಿದರು.

ಇಲ್ಲಿ ಎನ್‌ಡಿಎ ಅಭ್ಯರ್ಥಿಗಳ ಪರ ಪ್ರಚಾರ ಸಭೆ ನಡೆಸಿದ ಅವರು, ರಾಜ್ಯದ ಕಾನೂನು-ಸುವ್ಯವಸ್ಥೆಯನ್ನು ಸಂಪೂರ್ಣವಾಗಿ ಸರಿಪಡಿಸಲಾಗುವುದು ಹಾಗೂ ಮಹಿಳೆಯರ ಭದ್ರತೆಗೆ ಪ್ರಾಥಮ್ಯ ನೀಡಲಾಗುವುದು ಎಂದು ಅವರು ಹೇಳಿದರು. ಭೂಮಿ, ಮರಳು ಮತ್ತು ಮದ್ಯ ಮಾಫಿಯಾಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಜೊತೆಗೆ, ಮಾದಕ ವಸ್ತುಗಳಿಂದ ಮುಕ್ತ ತಮಿಳುನಾಡು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಡಿಎಂಕೆ ಸರ್ಕಾರದಲ್ಲಿ ನಡೆದಿದೆ ಎನ್ನಲಾದ ಉದ್ಯೋಗ ಹಗರಣವನ್ನು ಉಲ್ಲೇಖಿಸಿದ ಮೋದಿ, ನೇಮಕಾತಿಗಳಲ್ಲಿ ಪಾರದರ್ಶಕತೆ ತರಲಾಗುವುದು ಎಂದರು. ಮದ್ಯ ಮತ್ತು ಮಾದಕ ವಸ್ತುಗಳ ವಿರುದ್ಧದ ಕ್ರಮ ಸಾವಿರಾರು ಜನರ ಜೀವ ಉಳಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಭಾರೀ ಜನಸ್ತೋಮವನ್ನು ಉಲ್ಲೇಖಿಸಿದ ಅವರು, 'ಜನರು ಈಗಾಗಲೇ ಸಂದೇಶ ನೀಡಿದ್ದು ಎನ್‌ಡಿಎ ಒಳಗೆ, ಡಿಎಂಕೆ ಹೊರಗೆ' ಎಂದು ಹೇಳಿದರು. ಕೊಂಗು ನಾಡು ಮತ್ತು ಕೊಯಮತ್ತೂರಿನ ಜನರ ಪರಿಶ್ರಮ ಹಾಗೂ ಬೆಂಬಲವನ್ನು ಅವರು ಪ್ರಶಂಸಿಸಿದರು.

ಪ್ರಜಾಪ್ರಭುತ್ವದ ಗೆಲುವು ಎಂದ ಪ್ರಿಯಾಂಕಾ ವಾದ್ರಾ

• **ಹೊಸದಿಲ್ಲಿ:** ಸಂಸತ್ತಿನಲ್ಲಿ ಕ್ಷೇತ್ರ ಮರುವಿಂಗಡಣೆ (ಡಿಲಿಮಿಟೇಶನ್) ಮಸೂದೆ ಸೋಲನ್ನು ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಸಂದ ಜಯ ಎಂದು ವಯನಾಡು ಸಂಸದೆ ಪ್ರಿಯಾಂಕಾ ವಾದ್ರಾ ಬಣ್ಣಿಸಿದ್ದಾರೆ.

ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯೊಂದಿಗೆ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಉದ್ದೇಶಿಸಿದ್ದ ಈ ಮಸೂದೆ ಲೋಕಸಭೆಯಲ್ಲಿ ಅಗತ್ಯವಿದ್ದ ಮೂರನೇ ಎರಡರಷ್ಟು ಬಹುಮತವನ್ನು ಪಡೆಯುವಲ್ಲಿ ವಿಫಲವಾಯಿತು. ಅಂತಿಮ ಮತ ಎಣಿಕೆಯಲ್ಲಿ 298 ಸದಸ್ಯರು ಮಸೂದೆಯ ಪರವಾಗಿ ಮತ್ತು 230 ಸದಸ್ಯರು ವಿರುದ್ಧವಾಗಿ ಮತ ಚಲಾಯಿಸಿದ್ದರು.

ವಿರೋಧ ಪಕ್ಷದ ನಿಲುವು: ಅಧಿಕಾರದಲ್ಲಿ ಮುಂದುವರಿಯಲು ದೇಶದ ಒಕ್ಕೂಟ ವ್ಯವಸ್ಥೆಯನ್ನು ಬದಲಿಸಲು ಸರ್ಕಾರ ಸಂಚು ರೂಪಿಸುತ್ತಿದೆ ಎಂದು ಪ್ರಿಯಾಂಕಾ ಗಾಂಧಿ ಆರೋಪಿಸಿದರು. ಈ ಫಲಿತಾಂಶ, ವಿರೋಧ ಪಕ್ಷಗಳ ಒಗ್ಗಟ್ಟಿಗೆ ಸಂದ ಗೆಲುವು ಎಂದು ಅವರು ತಿಳಿಸಿದರು. ವಿರೋಧ ಪಕ್ಷಗಳು ಮಹಿಳಾ ಮೀಸಲಾತಿಯನ್ನು ತಾತ್ವಿಕವಾಗಿ ಬೆಂಬಲಿಸಿದರೂ, ಮಸೂದೆಯಲ್ಲಿ ಜನಗಣತಿ ಮತ್ತು ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಗಳನ್ನು ಸೇರಿಸಿರುವುದನ್ನು ಆಕ್ಷೇಪಿಸಿವೆ.

ಸರ್ಕಾರದ ಪ್ರತಿಕ್ರಿಯೆ: ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಐತಿಹಾಸಿಕ ಸುಧಾರಣೆಯನ್ನು ವಿರೋಧ ಪಕ್ಷಗಳು ತಡೆಹಿಡಿದಿವೆ ಎಂದು ಬಿಜೆಪಿ ಟೀಕಿಸಿದೆ. ಮಸೂದೆ ವಿಫಲವಾದ ಹಿನ್ನೆಲೆಯಲ್ಲಿ, ಇದಕ್ಕೆ ಸಂಬಂಧಿಸಿದ ಉಳಿದ ಎರಡು ಮಸೂದೆಗಳೊಂದಿಗೆ ಸರ್ಕಾರ ಮುಂದೆ ಹೋಗುವುದಿಲ್ಲ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಖಚಿತಪಡಿಸಿದ್ದಾರೆ.

ಸಿಪಿಎಂ ಕಾರ್ಯಕರ್ತನಿಗೆ 25 ವರ್ಷಗಳ ಜೈಲು ಶಿಕ್ಷೆ

• **ಕಣ್ಣೂರು(ಕೇರಳ):** 2011ರಲ್ಲಿ ಆರ್‌ಎಸ್‌ಎಸ್‌ಬಿಜೆಪಿ ಕಾರ್ಯಕರ್ತರ ಮೇಲೆ ನಡೆದ ಬಾಂಬ್ ದಾಳಿ ಪ್ರಕರಣದಲ್ಲಿ ಸಿಪಿಐ(ಎಂ)ಗೆ ಸೇರಿದ 10 ಕಾರ್ಯಕರ್ತರಿಗೆ ಕೇರಳದ ನ್ಯಾಯಾಲಯವು 10 ವರ್ಷದಿಂದ 25 ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ವಿಧಿಸಿದೆ.

ತಾಲಿಪರಂಬ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶ ಪ್ರಶಾಂತ್ ಕೆ.ಎನ್. ಅವರು ಭಾರತೀಯ ದಂಡ ಸಂಹಿತೆ (ಬಿಎನ್‌ಎಸ್) ಹಾಗೂ ಸ್ಫೋಟಕ ವಸ್ತುಗಳ ಕಾಯ್ದೆಯ ವಿವಿಧ ವಿಧಿಗಳಡಿ ಆರೋಪಿಗಳಿಗೆ ವಿಭಿನ್ನ ಅವಧಿಯ ಶಿಕ್ಷೆಗಳನ್ನು ವಿಧಿಸಿದ್ದಾರೆ.

ಈ ಪ್ರಕರಣದ ಎರಡನೇ ಆರೋಪಿ ಟಿ.ವಿ. ಬಿನು ಅಲಿಯಾಸ್ ಉರುಂಬನ್ ಬಿನು ಬಾಂಬ್ ಎಸೆದ ಮುಖ್ಯ ವ್ಯಕ್ತಿಯಾಗಿದ್ದರಿಂದ, ಅವನಿಗೆ ವಿಧಿಸಲಾದ ಶಿಕ್ಷೆಗಳು ಕ್ರಮವಾಗಿ ಅನುಸರಿಸಬೇಕಾಗಿ ಬರುತ್ತವೆ. ಇದರ ಪರಿಣಾಮವಾಗಿ ಅವನು ಒಟ್ಟು 25 ವರ್ಷ ಜೈಲಿನಲ್ಲಿ ಕಳೆದಿರಬೇಕು ಎಂದು ನ್ಯಾಯಾಲಯ ಸೂಚಿಸಿದೆ.

ಇನ್ನುಳಿದ ಒಂಬತ್ತು ಆರೋಪಿಗಳಾದ ಎಂ.ಕೆ. ಪ್ರದೀಪ್ ಕುಮಾರ್, ಪಿ.ಪಿ. ಸತ್ಯನ್, ಸಿಪಿಐ(ಎಂ) ಪಂಚಾಯತ್ ಸದಸ್ಯ ಪಿ.ವಿ. ಬಾಬುರಾಜ್, ಇ.ವಿ. ವಿನೋದ್ ಕುಮಾರ್, ವಿಜಯನ್, ಕೆ.ಪಿ. ಸುರೇಶ್, ಟೋಬಿ, ಜನಾರ್ಧನನ್ ಕೆ.ವಿ. ಹಾಗೂ ಶಿವಪ್ರಕಾಶ್ ಇವರಿಗೆ ವಿಧಿಸಲಾದ ಶಿಕ್ಷೆಗಳು ಒಂದೇ ಸಮಯದಲ್ಲಿ ಅನುಷ್ಠಾನಗೊಳ್ಳುವ ಕಾರಣ, ಅವರಿಗೆ ಗರಿಷ್ಠ 10 ವರ್ಷಗಳ ಜೈಲು ಶಿಕ್ಷೆ ಅನ್ವಯವಾಗುತ್ತದೆ.

ನ್ಯಾಯಾಲಯವು ಪ್ರತಿಯೊಬ್ಬ ಆರೋಪಿಗೂ 2.6 ಲಕ್ಷ ರೂ. ದಂಡವನ್ನು ವಿಧಿಸಿದೆ.

ಕಲಾಪ ಅನಿರ್ದಿಷ್ಟಾವಧಿ ಮುಂದೂಡಿಕೆ

• **ಹೊಸದಿಲ್ಲಿ:** ಕೇಂದ್ರ ಸರ್ಕಾರದ ಮಹಿಳಾ ಮೀಸಲಾತಿ ಕಾಯ್ದೆ ಮಂಡನೆಯೊಂದಿಗೆ ಬಜೆಟ್ ಅಧಿವೇಶನವು ಮುಕ್ತಾಯಗೊಂಡಿದ್ದು, ಲೋಕಸಭೆ ಮತ್ತು ರಾಜ್ಯಸಭೆ ಕಲಾಪಗಳನ್ನು ಅನಿರ್ದಿಷ್ಟಾವಧಿ ಸಮಯದವರೆಗೆ ಮುಂದೂಡಲಾಗಿದೆ. ಜ.28ರಿಂದ ಆರಂಭವಾಗಿದ್ದ ಬಜೆಟ್ ಅಧಿವೇಶನದ ಮೊದಲ ಹಂತದಲ್ಲಿ ಒಟ್ಟು 13, ಎರಡನೇ ಹಂತದಲ್ಲಿ 15 ಮತ್ತು ಮೂರನೇ ಹಂತದಲ್ಲಿ 3 ಕಲಾಪಗಳು ನಡೆದಿದ್ದವು. ಒಟ್ಟು 81 ದಿನಗಳಲ್ಲಿ 31 ಕಲಾಪಗಳು ನಡೆದಿವೆ. 31 ಕಲಾಪಗಳಲ್ಲಿ ಕೇಂದ್ರ ಸರ್ಕಾರವು 9 ಕಾಯ್ದೆಗಳನ್ನು ಅಂಗೀಕರಿಸಿದೆ. ಲೋಕಸಭೆಯ ಕಲಾಪಗಳು ಶೇ.93ರಷ್ಟು ಉತ್ಪಾದಕತೆ ಮತ್ತು ರಾಜ್ಯಸಭೆ ಕಲಾಪಗಳು ಶೇ.100ಕ್ಕೂ ಅಧಿಕ (ಬಹುತೇಕ ಶೇ.110) ಉತ್ಪಾದಕತೆಯನ್ನು ಸಾಧಿಸಿವೆ. ಮೋದಿ ಸರ್ಕಾರ ಮಂಡಿಸಿದ 12 ಕಾಯ್ದೆಗಳಲ್ಲಿ, 9 ಕಾಯ್ದೆಗಳು ಎರಡೂ ಮನೆಗಳಲ್ಲಿ ಅಂಗೀಕಾರವಾಗಿವೆ.

ದೌರ್ಜನ್ಯ ಎಸಗಿದಾತ ಟಿಸಿಎಸ್ ಸಹೋದ್ಯೋಗಿ | ಸಂತ್ರಸ್ತೆಯ ಆರೋಪ

ಹಿಂದಿನ ವಿವಾಹ ಬಚ್ಚಿಟ್ಟು ಸುಳ್ಳು ಭರವಸೆ

• **ಮುಂಬೈ:** ನಾಸಿಕ್ ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮತಾಂತರ ಪ್ರಕರಣದ ಸಂತ್ರಸ್ತೆಯೊಬ್ಬರು ಗಂಭೀರ ಆರೋಪಗಳನ್ನು ಮಾಡಿದ್ದು, ತನ್ನ ಹಿಂದಿನ ವಿವಾಹವನ್ನು ಮರೆಮಾಚಿದ ಆರೋಪಿಯೊಬ್ಬ ಆಕೆಗೆ ವಿವಾಹ ಆಗುವುದಾಗಿ ಸುಳ್ಳು ಭರವಸೆ ನೀಡಿದ್ದನೆಂದು ಆರೋಪಿಸಿದ್ದಾರೆ.

ಸಂತ್ರಸ್ತ ಮಹಿಳೆ ಪೊಲೀಸರಿಗೆ ನೀಡಿದ ದೂರಿನಲ್ಲಿ, 2022ರ ಜುಲೈನಲ್ಲಿ ಡಿಯೋಲಾಳಿ ಕ್ಯಾಂಪ್ ಪ್ರದೇಶದಲ್ಲಿ ಭೇಟಿಯಾದಾಗ ಆರೋಪಿಯೊಬ್ಬ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದನೆಂದೂ, ಟಿಸಿಎಸ್‌ನಲ್ಲಿ ಉದ್ಯೋಗಕ್ಕೆ ಸೇರಿದಾಗ ಆರೋಪಿಯೂ ಅಲ್ಲಿ ನೌಕರಿ ಮಾಡುತ್ತಿದ್ದನು. 2026ರ ಫೆಬ್ರವರಿ ವೇಳೆ ಆತನಿಗೆ ಈಗಾಗಲೇ ಪತ್ನಿ ಮತ್ತು ಇಬ್ಬರು ಮಕ್ಕಳಿದ್ದಾರೆ ಎಂಬುದನ್ನು ಆತನ ಪತ್ನಿ ಸಂಪರ್ಕಿಸಿದಾಗ ತಿಳಿದುಬಂದಿತ್ತೆಂದು ಉಲ್ಲೇಖಿಸಿದ್ದಾರೆ.

ಇನ್ನೂ ಕೆಲವು ಆರೋಪಿಗಳು ಲೈಂಗಿಕ ಕಿರುಕುಳ ನೀಡಿ 'ಇಸ್ಲಾಂಗೆ ಮತಾಂತರವಾಗಲು ಬೆದರಿಕೆ ಹಾಕಿದ್ದರೆಂದೂ ಸಂತ್ರಸ್ತ ಮಹಿಳೆ ಆರೋಪಿಸಿದ್ದಾರೆ.

ಕ್ಯಾಂಟೀನ್‌ನಲ್ಲಿ ಹಿಂದು ದೇವತೆಗಳ ಅವಹೇಳನ!: ಆರೋಪಿ ಮತ್ತು ಇನ್ನಿಬ್ಬರು ಮುಸ್ಲಿಂ ಸಹೋದ್ಯೋಗಿಗಳು ಟಿಸಿಎಸ್ ಕಂಪನಿ ಕ್ಯಾಂಟೀನ್‌ನಲ್ಲಿ ಆಕೆಯನ್ನು ಭೇಟಿಯಾಗಿ, ಹಿಂದು ದೇವತೆಗಳ ಬಗ್ಗೆ ಕೆಟ್ಟದಾಗಿ ಅವಮಾನಕಾರಿ ಮಾತುಗಳನ್ನಾಡಿದ್ದರು. ಶಿವಲಿಂಗವನ್ನು ಪೂಜಿಸುವ ಕುರಿತು ಅಸಭ್ಯ ಮಾತನ್ನಾಡಿದ್ದರು. ಇಸ್ಲಾಂ ಶ್ರೇಷ್ಠ ಮತವೆಂದೂ, ಇಸ್ಲಾಂಗೆ ಮತಾಂತರ ಆಗಬೇಕೆಂದೂ ಪೀಡಿಸುತ್ತಿದ್ದರೆಂದು ಸಂತ್ರಸ್ತೆ ಆರೋಪಿಸಿದ್ದಾರೆ.

ಪೊಲೀಸರು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದ್ದು, ಒಟ್ಟು 9 ಎಫ್‌ಐಆರ್‌ಗಳನ್ನು ದಾಖಲಿಸಿಕೊಂಡಿದ್ದಾರೆ. ಈಗಾಗಲೇ 8 ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಕರಣದಲ್ಲಿ ಶೂನ್ಯ ಸಹಿಷ್ಣುತೆಯ ನೀತಿ ಪಾಲಿಸುವುದಾಗಿ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಶುಕ್ರವಾರ ಹೇಳಿಕೊಂಡಿದೆ.

ಬಾಯಿ ಬಿಟ್ಟ ನಿದಾ ಪತಿ ಇಕ್ಬಾಲ್ ಖಾನ್: ಟಿಸಿಎಸ್ ನಾಸಿಕ್ ಲೈಂಗಿಕ ದೌರ್ಜನ್ಯ ಮತ್ತು ಕಾರ್ಪೊರೇಟ್ ಜಿಹಾದ್ ಪ್ರಕರಣದ ಪ್ರಮುಖ ಆರೋಪಿ ನಿದಾ ಖಾನ್ ತನ್ನ ಸಂಬಂಧಿಕರ ಮನೆಯಲ್ಲಿ ಅಡಗಿದ್ದಾಳೆಂದು ಆಕೆಯ ಪತಿ ಮೊಯಿನ್ ನವೀದ್ ಇಕ್ಬಾಲ್ ಖಾನ್ ಪೊಲೀಸರಿಗೆ ಮಾಹಿತಿ ಬಿಟ್ಟುಕೊಟ್ಟಿದ್ದಾನೆ. ಅಲ್ಲಿಗೆ ಪೊಲೀಸರು ಭೇಟಿ ನೀಡಿದ್ದಾಗ ಮನೆಗೆ ಬೀಗ ಜಡಿದಿತ್ತೆಂಬ ಮಾಹಿತಿ ಸಿಕ್ಕಿದೆ. ನಿದಾ ಖಾನ್ ಪತಿಯನ್ನು ಶುಕ್ರವಾರ ಪೊಲೀಸರು ಬಂಧಿಸಿದ್ದು, ವಿಚಾರಣೆಗೆ ಒಳಪಡಿಸಿದ್ದರು. ಪತಿ ಇಕ್ಬಾಲ್ ನೀಡಿದ ಮಾಹಿತಿಯ ಪ್ರಕಾರ, ನಾಸಿಕ್ ಕೇಸ್‌ನಲ್ಲಿ ಆಕೆಯ ಹೆಸರು ಕೇಳಿಬರುತ್ತಿದ್ದಂತೆ, ಟಿಸಿಎಸ್ ಉದ್ಯೋಗದಿಂದ ಆಕೆಯನ್ನು ಅಮಾನತು ಮಾಡಲಾಗಿತ್ತು. ಇದೇ ಸಂದರ್ಭ ಏ.14ರಂದು ನಿದಾ ಮನೆ ತೊರೆದು ಸಂಬಂಧಿಕರ ಮನೆಗೆ ತೆರಳಿದ್ದಳು ಎಂದು ಇಕ್ಬಾಲ್ ಪೊಲೀಸ್ ತನಿಖೆಯಲ್ಲಿ ಬಾಯಿ ಬಿಟ್ಟಿದ್ದಾನೆ. ಇಕ್ಬಾಲ್ ನೀಡಿದ ಮಾಹಿತಿ ಆಧಾರದಲ್ಲಿ ನಿದಾ ಅತ್ತೆ ನೂರಿ ಶೇಖ್ ಮನೆಗೆ ಪೊಲೀಸರು ಭೇಟಿ ನೀಡಿದ್ದು, ನೂರಿ ಶೇಖ್ ಮನೆಗೆ ಬೀಗ ಹಾಕಿತ್ತು. ಸದ್ಯ ನಿದಾ ಎಲ್ಲಿದ್ದಾಳೆಂದು ಮಾಹಿತಿಯಿಲ್ಲ ಎಂದು ಇಕ್ಬಾಲ್ ಕೈಚೆಲ್ಲಿದ್ದಾನೆ.

ಶಾಲೆ, ಆಸ್ಪತ್ರೆಗಳಿಗೆ ಸಂಪರ್ಕ ಕಲ್ಪಿಸುವ ಗ್ರಾಮೀಣ ರಸ್ತೆ ನಿರ್ಮಾಣಕ್ಕೆ ಆದ್ಯತೆ

ರೈಲ್ವೆ ಕಾರಿಡಾರ್ ನಿರ್ಮಾಣಕ್ಕೆ ಕೇಂದ್ರ ಅಸ್ತು

• **ಹೊಸದಿಲ್ಲಿ:** ವ್ಯಾಪಕ ಮೂಲಸೌಕರ್ಯ, ಸಾಮಾಜಿಕ ಭದ್ರತೆ, ವ್ಯಾಪಾರೋದ್ದಿಮೆಗಳ ಬಲವರ್ಧನೆ, ಸಾಗರ ವಿಮೆ, ಸುಮಾರು 1.18 ಕೋಟಿ ಸರಕಾರಿ ನೌಕರರ ತುಟ್ಟಿಭತ್ಯೆ ಹೆಚ್ಚಳ ಮತ್ತು ಹೊಸ ರೈಲ್ವೆ ಕಾರಿಡಾರ್ ನಿರ್ಮಾಣ ಸಹಿತ ಹಲವು ಮಹತ್ವದ ನಿರ್ಧಾರಗಳಿಗೆ, ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಮಂಜೂರಾತಿ ನೀಡಲಾಗಿದೆ. ರೈಲ್ವೆ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ಈ ಮಹತ್ವದ ಮಾಹಿತಿಗಳನ್ನು ನೀಡಿದರು.

ಭಾರತ್ ಮೆರಿಟೈಮ್ ಇನ್ಶುರೆನ್ಸ್ ಪೂಲ್ : ಸುಮಾರು 12,980 ಕೋಟಿ ರೂ. ಸಾರ್ವಭೌಮ ಗ್ಯಾರಂಟಿಯಿರುವ ದೇಶೀ ಸಾಗರ ವಿಮಾ ಸೌಲಭ್ಯವನ್ನು ಸಂಪುಟ ಸಭೆಯಲ್ಲಿ ಮಂಜೂರು ಮಾಡಲಾಗಿದೆ. ಇದು ಹಲ್ ಮತ್ತು ಮೆಷಿನರಿ , ಸರಕು ಸಾಗಣೆ ಹಡಗು, ಪಿ ಆ್ಯಂಡ್ ಐ, ಸಮರ ಸಂಬಂಧಿತ ಅಪಾಯಗಳು ಇತ್ಯಾದಿಗಳಿಗೆ ಸ್ಪಂದಿಸಲಿರುವ ವಿಮೆಯಾಗಿದೆ. ಭಾರತದ ಧ್ವಜವುಳ್ಳ, ಭಾರತ ನಿಯಂತ್ರಿತ ಮತ್ತು ಭಾರತಕ್ಕೆ ಸೇರಿದ ಹಡಗುಗಳಿಗೆ ಸುಮಾರು 10 ವರ್ಷಗಳ ಅವಧಿಯ ಸಾಗರ ವಿಮೆ ಅನ್ವಯಿಸುತ್ತದೆ. ವಿಮಾ ಅವಧಿಯನ್ನು 15 ವರ್ಷಗಳಿಗೆ ವಿಸ್ತರಿಸಲು ಅವಕಾಶವಿದೆ. ಪ.ಏಷ್ಯಾ ಸಂಘರ್ಷ ಮತ್ತು ದಿನೇ ದಿನೇ ಹೆಚ್ಚುತ್ತಿರುವ ಜಾಗತಿಕ ಅನಿಶ್ಚಿತತೆ ನಡುವೆ ,ಅಂತಾರಾಷ್ಟ್ರೀಯ ಪಿ ಆ್ಯಂಡ್ ಐ ಕ್ಲಬ್‌ಗಳ ಮೇಲಿನ ಅವಲಂಬನೆ ಕುಗ್ಗಿಸಲು ಪ್ರಧಾನಿ ಮೋದಿ ಸಾಗರ ವಿಮೆಗೆ ಮಂಜೂರಾತಿ ನೀಡಿದ್ದಾರೆ.

ಪಿಎಂ ಗ್ರಾಮ ಸಡಕ್ ಯೋಜನೆ ವಿಸ್ತರಣೆ: ರಸ್ತೆಗಳು ಮತ್ತು ಬಯಲು ಪ್ರದೇಶಗಳಲ್ಲಿ ಸೇತುವೆ ನಿರ್ಮಾಣ ನಿಟ್ಟಿನಲ್ಲಿ ,ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ-IIIನ್ನು 2028 ಮಾರ್ಚ್‌ವರೆಗೆ ವಿಸ್ತರಿಸಲಾಗಿದೆ. ಗುಡ್ಡಗಾಡು ಪ್ರದೇಶಗಳಲ್ಲಿ ಸೇತುವೆ ನಿರ್ಮಾಣಕ್ಕೆ 2029 ಮಾರ್ಚ್‌ವರೆಗೂ ಕಾಲಾವಕಾಶ ಕಲ್ಪಿಸಲಾಗಿದೆ. ಸರಕಾರದ ಈ ನಿರ್ಧಾರದಿಂದ ಪರಿಷ್ಕೃತ ಅಂದಾಜುವೆಚ್ಚ ಮೊತ್ತವು 80,250 ಕೋಟಿ ರೂ.ಗಳಿಂದ 83,977 ಕೋಟಿ ರೂ.ಗಳಿಗೆ ಏರಿಕೆಯಾಗಲಿದೆ. ಜನವಸತಿ ಪ್ರದೇಶಗಳಿಂದ ಮಾರುಕಟ್ಟೆ, ಶಾಲೆ ಮತ್ತು ಆಸ್ಪತ್ರೆಗಳಿಗೆ ಸಂಪರ್ಕ ಕಲ್ಪಿಸುವ ಗ್ರಾಮೀಣ ರಸ್ತೆಗಳ ನಿರ್ಮಾಣಕ್ಕೆ ಪ್ರಾಧಾನ್ಯತೆ ನೀಡಲಾಗಿದೆ.

ಘಾಜಿಯಾಬಾದ್-ಸೀತಾಪುರ ರೈಲ್ವೆ ಕಾರಿಡಾರ್: ದಿಲ್ಲಿ-ಗುವಾಹಟಿ ಹೈ ಡೆನ್ಸಿಟಿ ನೆಟ್ ವರ್ಕ್ ಭಾಗವಾಗಿರುವ , 403ಕಿಮೀ ವ್ಯಾಪ್ತಿ ಘಾಜಿಯಾಬಾದ್ -ಸೀತಾಪುರ ಸೆಕ್ಷನ್‌ನಲ್ಲಿ ತೃತೀಯ ಮತ್ತು ಚತುರ್ಥ ರೈಲ್ವೆ ಲೈನ್‌ಗಳನ್ನು ನಾಲ್ಕು ವರ್ಷಗಳೊಳಗೆ ನಿರ್ಮಿಸುವ 14,926 ಕೋಟಿ ರೂ. ಮೊತ್ತದ ಯೋಜನೆಗೆ ಸರಕಾರ ಮಂಜೂರಾತಿ ನೀಡಿದೆ. ಯೋಜನೆ ಭಾಗವಾಗಿ ಆರು ಹೊಸ ರೈಲು ನಿಲ್ದಾಣಗಳು ನಿರ್ಮಾಣವಾಗಲಿವೆ. ಉತ್ತರಪ್ರದೇಶದ ಮೊರಾದಾಬಾದ್, ಬರೇಲಿ, ರಾಂಪುರ, ಲಖಿಮ್‌ಪುರ ಖೇರಿ ಸಹಿತ ಉತ್ತರಪ್ರದೇಶದ 5 ಜಿಲ್ಲೆಗಳ ವ್ಯಾಪ್ತಿಯನ್ನು ಪ್ರಸ್ತಾವಿತ ಯೋಜನೆ ಒಳಗೊಳ್ಳುವುದು. ರೇವಾ ಜಿಲ್ಲೆಯಲ್ಲಿ 82.39 ಕೋಟಿ ರೂ. ಮೊತ್ತದ ಮಹಾನಾ ಸಣ್ಣ ನೀರಾವರಿ ಯೋಜನೆಗೆ ಸಂಪುಟ ಸಭೆ ಮಂಜೂರಾತಿ ನೀಡಿದೆ.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಕುಲರೂಪವಾದ ಕಮಲಕ್ಕೆ ಸೂರ್ಯನಂತೆ ಅರಳಿಸುವ ಸಾಧನ ಯಾವುದು?

ಉತ್ತರ: ವಿದ್ಯಾ, ದಯಾ ಮೊದಲಾದ ದೈವೀಗುಣಗಳಿದ್ದರೂ ನಮ್ರನಾಗಿರುವುದು.

ಒಬ್ಬ ವ್ಯಕ್ತಿ ಒಂದು ಉತ್ತಮಕುಲದಲ್ಲಿ ಹುಟ್ಟಿದ್ದಾನೆ; ಆತನ ಕುಲವು ಅತ್ಯಂತ ಶ್ರೇಷ್ಠವಾದದ್ದು; ಅಷ್ಟೇ ಅಲ್ಲ, ಅವನಿಗೆ ವಿದ್ಯೆ, ದಯೆ ಮೊದಲಾದ ಅನೇಕ ಉತ್ತಮ ಗುಣಗಳಿವೆ. ಅಷ್ಟೇ ಅಲ್ಲ ಇನ್ನೂ ಅನೇಕ ದೈವದತ್ತ ಶ್ರೇಷ್ಠ ಗುಣಗಳೂ ಕೂಡ ಇವೆ. ಕುಲ ಎಂಬುದು ಒಂದು ಕಮಲವಿದ್ದಂತೆ. ಕಮಲವು ಅರಳಬೇಕಾದರೆ ಸೂರ್ಯನ ಕಿರಣ ಅತ್ಯಂತ ಅವಶ್ಯಕ. ಇಲ್ಲಿ ನಾವು ತಿಳಿಯಬೇಕಾದ ವಿಷಯ ಬಹಳ ಇದೆ. ಏಕೆಂದರೆ ಕುಲ, ಕಮಲ ಮತ್ತು ಸೂರ್ಯನ ಕಿರಣ ಇವೆಲ್ಲವೂ ಇವೆ. ಆದರೆ ಇವಕ್ಕೊಂದು ಕಿರೀಟಪ್ರಾಯವಾದ ಒಂದು ಬೆಳಗಿಸುವ ಸಾಧನ ಇದ್ದಾಗ ಮಾತ್ರ ಇವೆಲ್ಲಕ್ಕೂ ಸಾರ್ಥಕತೆ ಬರುತ್ತದೆ ಎಂದು. ದಯೆ, ವಿದ್ಯೆ, ಸಂಸ್ಕಾರ ಇವೆಲ್ಲವೂ ಅತ್ಯಂತ ಶ್ರೇಷ್ಠವಾದ ಗುಣಗಳೇ. ಇವು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಇರಬೇಕಾದವುಗಳೇ. ಆದರೆ ಈ ನಮ್ರತೆ ಅಥವಾ ವಿನಯ ಎಂಬ ಗುಣ ಇಲ್ಲದಿದ್ದರೆ ಈ ಹಿಂದೆ ಹೇಳಿದ ಯಾವ ಗುಣಗಳು ಇದ್ದರೂ ಪ್ರಯೋಜನವಿಲ್ಲ. ಹಾಗಾಗಿ ಇದಕ್ಕೆ ಅಷ್ಟೊಂದು ಬೆಲೆಯನ್ನು ಕೊಡಲಾಗಿದೆ. ಹಾಗಾದರೆ ಇದಕ್ಕೆ ಅಷ್ಟು ಬೆಲೆ ಬರಲು ಕಾರಣ ಏನು? ವಿನಯ ಎಂದರೇನು?

ವಿದ್ಯೆ, ಸಂಸ್ಕಾರ, ದಯಾ ಮೊದಲಾದ ಗುಣಗಳಿಂದ ವ್ಯಕ್ತಿ ಮೇಲಕ್ಕೆ ಏರುತ್ತಾನೆ. ಎಷ್ಟೇ ಮೇಲಕ್ಕೆ ಏರಿದರೂ, ವ್ಯಕ್ತಿತ್ವ ಎಷ್ಟೇ ಬೆಳೆದಿದ್ದರೂ, ವ್ಯಕ್ತಿಶಃ ಚಿಕ್ಕವನು ಎಂಬ ಒಂದು ಅರಿವಿದ್ದಾಗ ಮಾತ್ರ ಈ ಎಲ್ಲಕ್ಕೂ ಬೆಲೆ ಬರುತ್ತದೆ. ಹೀಗೆ ಒಬ್ಬ ಕವಿ ಹೇಳುತ್ತಾನೆ-''ಏರಿದವನು ಚಿಕ್ಕವನಿರಬೇಕಲೇ ಎಂಬ ಮಾತನು ಸಾರುವನು'' ಎಂದು. ಎಷ್ಟೇ ಮೇಲೆ ಏರಿದರೂ ಅದು ಶಾಶ್ವತವಲ್ಲ, ಒಂದಲ್ಲ ಒಂದು ಕಾಲದಲ್ಲಿ ಮತ್ತೆ ಕೆಳಗಿಳಿಯಬೇಕಾಗುತ್ತದೆ ಎಂಬ ಯಾವ ಅರಿವಿದೆಯೋ ಅದನ್ನೇ ವಿನಯ ಎಂಬುದಾಗಿ ಕರೆಯಬೇಕು. ವಿನಯ ಎಂದರೆ ಬಾಗುವುದು. ದೊಡ್ಡದಕ್ಕೆ ಗೌರವವನ್ನು ಕೊಡುವುದು. ಅದು ನಮಗೆ ಅರಿವಿಗೆ ಬಾರದಿರುವಾಗ ದಂಭಭಾವ, ಅಹಂಕಾರ ಮೊದಲಾದ ದುಷ್ಟಗುಣಗಳು ಆವಿರ್ಭಾವಗೊಳ್ಳುತ್ತವೆ. ಇವುಗಳು ನಮ್ಮ ಅಧಃಪತನಕ್ಕೆ ಕಾರಣವಾಗುತ್ತವೆ. ಕೆಲವರು ವಿದ್ಯಾವಂತರಾಗಿರುತ್ತಾರೆ, ಆದರೆ ಅವರಲ್ಲಿ ವಿನಯವೆಂಬುದು ಇರುವುದಿಲ್ಲ, ಇನ್ನು ಕೆಲವರು ಅನೇಕ ದೈವದತ್ತ ಗುಣಗಳಿಂದ ಕೂಡಿರುತ್ತಾರೆ. ಆದರೆ ಅದು ಅವರಿಗೆ ತಲೆಗೆ ಹತ್ತಿ ಕೊನೆಗೆ ಈ ಪ್ರಪಂಚವೇ ಕಾಣದಿರುವಷ್ಟು ಅಂಧತೆ ಆವರಿಸುತ್ತದೆ. ಹಾಗಾಗಿ ಈ ವಿನಯ ಎಂಬ ಗುಣವು ಈ ಮೌಢ್ಯವನ್ನು ಅಹಂಕಾರದ ಅಂಧತ್ವವನ್ನು ತೊಲಗಿಸುವ ಒಂದು ದೀಪದಂತೆ ಎಂಬುದಾಗಿ ಇಲ್ಲಿ ವಿವರಿಸಲಾಗಿದೆ. ಕಮಲವು ಶ್ರೇಷ್ಠವಾದದ್ದು, ಹಾಗೇ ಇದ್ದರೆ ಅದು ಅರಳದು. ಅದಕ್ಕೆ ಸೂರ್ಯಕಿರಣ ಬೇಕಷ್ಟೇ. ಒಳ್ಳೆಯ ಹಸು, ಆದರೆ ಹಾಲೇ ಕೊಡದಿದ್ದರೆ ಹೇಗೆ! ಎಂಬಂತೆ ವಿದ್ಯೆ ಮೊದಲಾದ ಗುಣಗಳು ಅತ್ಯಂತ ಶ್ರೇಷ್ಠವಾದವುಗಳೇ ಆದರೂ ಅವುಗಳು ಪ್ರಕಾಶಕ್ಕೆ ಬರಬೇಕಾದರೆ ದೀಪದಂತಿರುವ ವಿನಯ ಎಂಬುದು ಅತ್ಯಂತ ಮುಖ್ಯ ಎಂಬುದು ಈ ಪ್ರಶ್ನೋತ್ತರದ ಸಾರವಾಗಿದೆ.



ವ್ಯಾಸ ವೀಕ್ಷಿತ



• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಜಟ್ಟಿಗಳಿಬ್ಬರ ದೀರ್ಘಕಾಲಿಕ ಕಾಳಗ

ಭೀಮಸೇನನಿಗೂ ಜರಾಸಂಧನಿಗೂ ತೀವ್ರವಾದ ಯುದ್ಧವು ಆರಂಭವಾಯಿತಷ್ಟೆ? ಅವರಿಬ್ಬರ ಜಟ್ಟಿಕಾಳಗ ಅಲ್ಪಕಾಲದಲ್ಲಿ ಮುಗಿಯುವಂತಹುದಲ್ಲ. ಅವರ ಮಲ್ಲಯುದ್ಧವನ್ನು ಸಾಕಷ್ಟು ದೀರ್ಘವಾಗಿಯೇ ವ್ಯಾಸರು ಚಿತ್ರಿಸಿರುವರು.

ಬಾಹುಪಾಶ-ಚರಣಪಾಶಗಳೆಂಬ ಪಟ್ಟುಗಳನ್ನು ಹಾಕಿ ಒಬ್ಬರ ಪಾದದಿಂದ ಮತ್ತೊಬ್ಬರ ಶಿರಸ್ಸಿಗೆ ಹೊಡೆತವಿತ್ತರು. ಉರೋಹಸ್ತ-ಪೂರ್ಣಕುಂಭಗಳೆಂಬ ವರಸೆಗಳಿಂದಾಗಿ ಎದೆಗಳಿಗೆ ಗುದ್ದಿದರು. ಒಬ್ಬರ ಕೈಯನ್ನು ಮತ್ತೊಬ್ಬರು ಹಿಸುಕಿದರು. ಘೀಳಿಡುವ ಗಜಗಳಂತೆ ಅವರು ತೋರಿದರು. ಬಹುಪ್ರಹಾರಗಳನ್ನು ಪರಸ್ಪರ ಮಾಡುತ್ತಾ ಗುಡುಗುವ ಮೋಡಗಳಂತೆ ಕಂಡರವರು. ಅಂಗೈಯಿಂದ ಒಬ್ಬರಿಗೊಬ್ಬರು ಚಚ್ಚಿದರು. ಸಿಂಹಗಳ ಹಾಗೆ ಒಬ್ಬರನ್ನೊಬ್ಬರು ದಿಟ್ಟಿಸಿ ನೋಡುತ್ತಾ ಒಬ್ಬರನ್ನೊಬ್ಬರು ಎಳೆದಾಡಿ ಎಳೆದಾಡಿ ಕಾದಿದರು. ಒಬ್ಬರ ಅಂಗವನ್ನು ಮತ್ತೊಬ್ಬರು ಮರ್ದಿಸಿದರು. ತೋಳುಗಳಿಂದ ಒಬ್ಬರಿಗೊಬ್ಬರು ಬಾಹುಬಂಧವನ್ನು ಮಾಡಿದರು. ಒಬ್ಬರ ಹೊಟ್ಟೆಯನ್ನು ಮತ್ತೊಬ್ಬರು ತೋಳಿನಿಂದ ಬಳಸಿ ಅತ್ತಿಂದಿತ್ತ ತಳ್ಳಿಹಾಕಿದರು. ಒಬ್ಬರ ಸೊಂಟಕ್ಕೆ ಮತ್ತೊಬ್ಬರು ಕೈಹಾಕಿ ದೂರಕ್ಕೆ ಬಿಸಾಡುತ್ತಿದ್ದರು. ಬಗೆ ಬಗೆಯ ಜಟ್ಟಿಪಟ್ಟುಗಳನ್ನು ಕಟ್ಟಿದರು. ಅವರಿಬ್ಬರು ಹೀಗೆ ಯುದ್ಧ ಮಾಡುತ್ತಿರಲಾಗಿ, ಪುರವಾಸಿಗಳೆಲ್ಲ ಅಲ್ಲಿ ನೆರೆದರು. ಬ್ರಾಹ್ಮಣರು, ವೈಶ್ಯರು, ಕ್ಷತ್ರಿಯರು, ಶೂದ್ರರು, ಸ್ತ್ರೀಯರು, ವೃದ್ಧರು-ಇವರುಗಳೆಲ್ಲ ಸಾವಿರಗಟ್ಟಲೆ ಸಂಖ್ಯೆಯಲ್ಲಿ ಸುತ್ತುಗಟ್ಟಿದರು. ಅವರಿಬ್ಬರ ಪಾರಸ್ಪರಿಕವಾದ ಆಘಾತಗಳು ಪರ್ವತ-ವಜ್ರಾಯುಧಗಳ ಡಿಕ್ಕಿಗಳಂತೆ ಕಂಡವು. ಹೋರಾಟದಲ್ಲಿ ಇಬ್ಬರಿಗೂ ಖುಷಿಯಿತ್ತು. ಇಬ್ಬರೂ ಬಲಶಾಲಿಗಳಾಗಿದ್ದು, ಒಬ್ಬರಲ್ಲಿಯ ದೋಷವನ್ನು ಬಳಸಿಕೊಳ್ಳಲು ಮತೊಬ್ಬರು ಎಳಸುತ್ತಿದ್ದರು. ಪರಸ್ಪರ ಜಯಾಪೇಕ್ಷೆ ಇಬ್ಬರಿಗೂ ಇದ್ದಿತು.

ಒಬ್ಬರನ್ನೊಬ್ಬರು ಹೊಡೆದಾಡುತ್ತಿರಲಾಗಿ ಅದು ವೃತ್ರ-ವಾಸವರ ಯುದ್ಧದಂತೆ ಕಂಡುಬಂದಿತು. ಅವರ ಪರಸ್ಪರ ಘರ್ಜನ-ತರ್ಜನಗಳು ಅಸಾಧಾರಣವಾಗಿದ್ದವು. ಬಂಡೆಗಳ ಘಟ್ಟನ-ಕಟ್ಟಣದ ಪರಿಘಗಳಿಂದ ಪರಸ್ಪರ ಘರ್ಷಣ ಮುಂತಾದುವು ಅಲ್ಲಿ ಘಟಿಸಿದುವು. ಎಷ್ಟು ಕಾಲ ನಡೆಯಿತು, ಅವರ ಈ ಯುದ್ಧ? ಕಾರ್ತಿಕಮಾಸದ ಮೊದಲ ದಿನದಂದು ಆರಂಭವಾದ ಈ ಯುದ್ಧಕ್ಕೆ ಬಿಡುವೆಂಬುದೇ ಇರಲಿಲ್ಲ. ಹಗಲಿರುಳೂ ಯುದ್ಧ. ಆಹಾರವಿಲ್ಲದೇ ಯುದ್ಧ. ವಿಶ್ರಾಂತಿಯಿಲ್ಲದೇ ಯುದ್ಧ. ಹೀಗೆ ಮುಂದುವರೆಯಿತು, ಅವರಿಬ್ಬರ ಸಂಗರ. ಪ್ರಥಮೆಯಂದು ಆರಂಭವಾದದ್ದು ತ್ರಯೋದಶಿಯವರೆಗೂ ಎಡೆಬಿಡದೆ ನಡೆಯಿತು. ಚತುರ್ದಶಿಯ ರಾತ್ರಿಯ ಹೊತ್ತಿಗೆ ಜರಾಸಂಧನು ದಣಿದುಹೋದನು. ಜರಾಸಂಧನು ಹಾಗೆ ದಣಿದಿರಲಾಗಿ, ಅದನ್ನು ಗಮನಿಸಿದ ಕೃಷ್ಣನು ಭೀಮನಿಗೆ ಅರ್ಥವಾಗುವ ಪರಿಯಲ್ಲಿ ಹೀಗೆ ನುಡಿದನು: ಶತ್ರುವು ಬಳಲಿಹೋಗಿದ್ದಲ್ಲಿ, ಆತನಿಗೆ ಅಧಿಕವಾದ ಪೀಡೆಯುಂಟುಮಾಡುವುದು ತರವಲ್ಲ. ಪೂರ್ಣವಾಗಿ ಪೀಡಿಸಿದಲ್ಲಿ ಆತನ ಪ್ರಾಣವೇ ಹಾರಿಹೋದೀತು. ಅದ್ದರಿಂದ ರಾಜನಿಗೆ ಅತಿಯಾದ ಪೀಡೆಯುಂಟುಮಾಡದೆ ಆತನೊಂದಿಗೆ ಬಾಹುಯುದ್ಧವನ್ನು ಮುಂದುವರೆಸು ಎಂದನು. ಶತ್ರುವೀರನನ್ನು ನಾಶಪಡಿಸಿಯೇ ತೀರುವ ಆ ಭೀಮನು, ಜರಾಸಂಧನು ಇದ್ದ ಆ ಅವಸ್ಥೆಯನ್ನು ಕಂಡು ಆತನನ್ನು ಕೊಲ್ಲುವ ನಿಶ್ಚಯವನ್ನು ಮಾಡಿದನು. ಅಪರಾಜಿತನೆನಿಸಿದ್ದ ಆ ಜರಾಸಂಧನನ್ನು ಜಯಿಸಲೋಸುಗ ಆಗ ಭೀಮನು ಉತ್ಕಟವಾದ ಕ್ರೋಧವನ್ನು ತಾಳಿದನು. ಜರಾಸಂಧನನ್ನು ವಧಿಸಬೇಕೆಂಬ ಸಂಕಲ್ಪವು ಉಂಟಾದ ಭೀಮಸೇನನು, ಕೃಷ್ಣನನ್ನು ಕುರಿತು ಹೇಳಿದನು: ಈ ಪಾಪಿ ಜರಾಸಂಧನು ಇಷ್ಟೇಟು ತಿಂದೂ ಇನ್ನೂ ಯುದ್ಧವಸ್ತ್ರವನ್ನು ಧರಿಸಿಯೇ ಯುದ್ಧಮಾಡುತ್ತಿರುವನು! ಇನ್ನು ಅವನನ್ನು ಪ್ರಾಣದೊಂದಿಗೆ ಉಳಿಸುವುದು ತರವಲ್ಲ.

ನೆನ್ನೆ ಎಂಬ ನೆಚ್ಚಿನ ಸಂಗಾತಿ

'ನಾಳೆ'ಯೆಂಬ ಭವನಕ್ಕೆ 'ನೆನ್ನೆ'ಯೇ ಬುನಾದಿ.'ನೆನ್ನೆ' ಎನ್ನುವುದು ಕಾಲನು 'ಇಂದು' ಎಂದಿದ್ದ ದಿನಕ್ಕೆ ಹೊದೆಸುವ ಅವಧಿ ಕಂಬಳಿ.



ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

ನೆನ್ನೆ...
ಕನಸುಗಳ ನಾಳೆಗಿಂತ,
ವಾಸ್ತವದ ಇಂದಿಗಿಂತ ಆಪ್ತವಾದ ದಿನ.

'ನೆನ್ನೆ ಏನಾಯ್ತೂಂದ್ರೇ...' ಎಂದು ಆರಂಭಿಸಿದರೆ ಸಾಕು... ಕೌತುಕದ ಭಾವ ಗರಿಗೆದರುತ್ತದೆ. ಇಂದು ನೆನ್ನೆಯಾಗುವ ಪರಿಯೇ ಒಂದು ವಿಸ್ಮಯ. ನೆನ್ನೆ ಎನ್ನುವುದು ಒಬ್ಬೊಬ್ಬರಿಗೆ ಒಂದೊಂದು ಸಮಯದಲ್ಲಿ ಸಂಭವಿಸುತ್ತದೆ. ರೈಲ್ವೇ ಸಮಯವನ್ನು ಅನುಸರಿಸುವವರಿಗೆ ಗಡಿಯಾರದ ಮುಳ್ಳು ಶೂನ್ಯಮದಃ ಶೂನ್ಯಮಿದಂ ಎನ್ನುವುದನ್ನು ಸಕಲ ಸೊನ್ನೆಗಳ ಮೂಲಕ ಸೂಚಿಸಿದ ಕ್ಷಣದಲ್ಲಿ, ಸೊನ್ನೆಗಿಂತ ಹಿಂದಿನದೆಲ್ಲ ನೆನ್ನೆ, ಮುಂದಿನದೆಲ್ಲ ಇಂದು. ಸಾಮಾನ್ಯನಿಗೆ ನೆನ್ನೆ ಎನ್ನುವುದು ಆರಂಭವಾಗಲು ಇಂದಿನ ಕಾಲುಭಾಗವಾದರೂ ವ್ಯಯವಾಗಿರುತ್ತದೆ. ಆರಕ್ಕೆ ಏಳುವ ಮನುಜನಿಗೆ ಇಂದು ಎಂದು ದೊರಕುವುದು ಕೇವಲ ಹದಿನಾರು ಗಂಟೆಗಳು. ರಾತ್ರಿ ಪಾಳಿಯವರಿಗೂ ನೆನ್ನೆ ಎನ್ನುವುದು ಆ ಪಾಳಿ ಮುಗಿಯುವವರೆಗೂ ಇರುತ್ತದೆ. 'ಆರನೆಯ ತಾರೀಕಿನ ರಾತ್ರಿ ಡ್ಯೂಟಿ' ಎನ್ನುವುದು ಏಳನೆಯ ತಾರೀಕಿನ ಬೆಳಗಿನವರೆಗೆ ಹರಡುವುದರಿಂದ 'ಡ್ಯೂಟಿ'ಯ ಲೆಕ್ಕದಲ್ಲಿ ಏಳರ ಆರು ಆರರ ಲೆಕ್ಕಕ್ಕೇ ಬಂದಿತಲ್ಲ!

ನೆನ್ನೆ ಎನ್ನುವುದು ನಾಳೆ, ಇಂದುಗಳಂತೆಯೇ ಒಂದು ನಿರಂತರ ಕ್ರಿಯೆ. 'ಇಂದು' ನಾಳೆಗೆ ನೆನ್ನೆ. ನಾಳೆಯು ನಾಳಿದ್ದಿಗೆ ನೆನ್ನೆ. ಆದರೆ ಇಂದಿನ ನೆನ್ನೆ ನಾಳೆಗಾಗಲಿ, ಇನ್ನೆಂದಿಗೂ ಆಗಲಿ ನೆನ್ನೆಯಾಗಿ ಬರುವುದಿಲ್ಲ. ನೆನ್ನೆ ಅದು 'ಇಂದು' ಆಗಿತ್ತು. ನಾಳೆ ಅದು ಮೊನ್ನೆ ಆಗಿಬಿಡುತ್ತದೆ. ಹೀಗಾಗಿ ನೆನ್ನೆ ಎನ್ನುವುದು ಅಲ್ಪಾಯುಷಿಯಾದರೂ 'ಇಂದು'ಗೆ ಹೋಲಿಸಿದರೆ ದೀರ್ಘಾಯುಷಿ. 'ನೆನ್ನೆ' ಬೆಳಗಿನ ಜಾವವೇ ಆರಂಭವಾಗಿ 'ನೆನ್ನೆ ರಾತ್ರಿ ಕನಸಿನಲ್ಲಿ' ಎಂದಾಗ ಇಂದಿನ ಬೆಳಗಿನ ಸಮಯವೂ ಸೇರಬಹುದಾದ್ದರಿಂದ ಅವಧಿಯ ಲೆಕ್ಕದಲ್ಲಿ ನೆನ್ನೆ ಇಂದಿಗಿಂತಲೂ ದೀರ್ಘವಾದುದು.

ನೆನ್ನೆ ಎನ್ನುವ ಪದದಲ್ಲೇ ನೆನೆ ಎನ್ನುವ ಪದವೂ ಅಡಗಿದೆ. ಈ ನೆನೆ ಎನ್ನುವ ಪದವೇ ವಿಶಿಷ್ಟವಾದುದು. 'ಬಹಳ ನೆನೆಯುತ್ತಿದ್ದೇನೆ; ನನಗೆ ಬೇಕಾದ್ದು ; ಕೊಡೆ' ಎಂದು ಬರೆದಿದ್ದರು ಕವಿ ಜರಗನಹಳ್ಳಿ ಶಿವಶಂಕರ್. ಇಲ್ಲಿನ ನೆನೆ ನೆನ್ನೆಯ ನೆನೆಯಲ್ಲಿ ಇರುವುದೂ ಹೌದು, ಇಲ್ಲದಿರುವುದೂ ಹೌದು. ಪ್ರೇಯಸಿಯ ಜೊತೆ ಕಳೆದ ಕಾಲ ನೆನ್ನೆಯದು. ಪ್ರಿಯಕರ ಅದರ ಸ್ಮರಣೆಯಲ್ಲಿ ಕಾಲ ಕಳೆಯುತ್ತಾ 'ನೆನೆಯುತ್ತಿದ್ದೇನೆ' ಎನ್ನುವ ಅರ್ಥವೊದಗಿ 'ಕೊಡೆ' ಎನ್ನುವುದಕ್ಕೆ 'ನೀಡೆ' ಎನ್ನುವ ಅರ್ಥ ಸುಹ್ಮರಿಸಿದರೆ 'ನೆನೆ' ಎನ್ನುವುದು ಕ್ಲಿನ್ನವಾಗು ಎನ್ನುವುದನ್ನು ಸೂಚಿಸಿದಾಗ ಕೊಡೆ ಎನ್ನುವುದಕ್ಕೆ ಛತ್ರಿ, ಆತಪತ್ರವೆಂಬ ಅರ್ಥಗಳು ಮೂಡುತ್ತವೆ. ಛತ್ರಿ, ಆತಪತ್ರಗಳೂ ನೆನ್ನೆಯವೇ. ಆತಪತ್ರವಂತೂ ಅದೆಷ್ಟೋ ನೆನ್ನೆಗಳಷ್ಟು ಹಳೆಯದು.

'ನೆನ್ನೆ'ಯಲ್ಲಿರುವ 'ನೆನೆ'ಯನ್ನು ಹೆಕ್ಕಿ, ಅದಕ್ಕೊಂದು 'ಕ್ತಿ'ಯನ್ನು ಸೇರಿಸಿ 'ನೆನೆಕ್ತಿ'ಯಾಗಿಸಿದರೆ ಅದು ನೆನ್ನೆಯ ಗುಣಗಳನ್ನು ಕರಾರುವಾಕ್ಕಾಗಿ ಬಿಂಬಿಸುತ್ತದೆ. 'ನೆನೆಕ್ತಿ' ಎಂದರೆ 'ಪೋಷಿಸು', ಶುದ್ಧಗೊಳಿಸು', 'ತೊಳೆ' ಎಂಬ ಅರ್ಥಗಳಿವೆ. ಮೊದಲಿಗೆ ಪೋಷಕ ಎಂಬ ಅರ್ಥವನ್ನು ತೆಗೆದುಕೊಳ್ಳೋಣ. ನೆನ್ನೆಯನ್ನು ನೆನೆಸಿಕೊಳ್ಳಿ - ಅದು ಇಂದಿನ ಕೆಲಸಗಳಿಗೆ ಪೋಷಕ. ನೆನ್ನೆಯ ಪಾಠವೇ ಇಂದಿನ ಪಾಠದ ಹಿನ್ನೆಲೆ. ನೆನ್ನೆಯ ದೋಸೆಯ ಹಿಟ್ಟೇ ಇಂದಿನ ತಿಂಡಿಗೆ ಅವಶ್ಯವಾದ ಸೂಪರ್ ಹಿಟ್ಟು, ನೆನ್ನೆಯ ತರಬೇತಿಯೇ ಇಂದಿನ ಕವಾಯತಿಗೆ ಆಧಾರ. ನೆನ್ನೆ ಪ್ರಿಯಕರ ಕಿವಿಯಲ್ಲುಸುರಿದ ಪಿಸುಮಾತುಗಳೇ ಇಂದು ಕೆನ್ನೆಗೆ ಶೋಣಿತವರ್ಣವೇರಲು ಪೋಷಕ, ಪ್ರೇರಕ. ನೆನ್ನೆ ಇಂದೆಂಬ ಕಾಲನಿರ್ಮಿತ ಸ್ವಿಮ್ಮಿಂಗ್ ಪೂಲ್‌ಗೆ ಜಿಗಿಯಲು ಬೇಕಾದ ಸ್ಪ್ರಿಂಗ್ ಬೋರ್ಡು!

ನೆನೆಕ್ತಿ ಎಂದರೆ ಶುದ್ಧಗೊಳಿಸು ಎನ್ನುವ ಅರ್ಥವನ್ನು ಅವಲೋಕಿಸೋಣ. ಅಬ್ರಹಾಂ ಲಿಂಕನ್ನನ ಹಲವಾರು 'ನೆನ್ನೆಗಳ' ಸೋಲೇ ಮುಂದಿನ ಗೆಲುವಿಗೆ ಕಾರಣವಾಯಿತು. ಸೋಲೆಂಬ ಹಿನ್ನಡೆಯನ್ನು ಪರಿಶ್ರಮ, ಸಾಧನೆಗಳೆಂಬ ಸೋಪು, ನೀರುಗಳಿಂದ ಶುದ್ಧಗೊಳಿಸಿದರ ಪರಿಣಾಮವಾಗಿ ಅವನು ಸಕಲ ನಾಳೆಗಳಿಗೂ ಪ್ರಸ್ತುತವೆನಿಸುವ ವ್ಯಕ್ತಿತ್ವವನ್ನು ಪಡೆದನು. ನೆನ್ನೆಯೆಂಬುದನ್ನು ದುಃಖದ ಮಡುವಾಗಿಸಿಕೊಂಡು, ಮಡುವಿನಲ್ಲಿ ಆತ್ಮಗ್ಲಾನಿಯೆಂಬ ಪಾಚಿಯನ್ನು ಕಟ್ಟಿಕೊಂಡಿದ್ದಿದ್ದರೆ ಅವನು ಅಲ್ಲಿಯೇ ಮುಳುಗಿರುತ್ತಿದ್ದ. ಎಡಿಸನ್ ಸಹ ನೆನ್ನೆಯನ್ನೊಂದು 'ಫೇಲ್ಡ್ ಎಡಿಷನ್' ಎಂದಷ್ಟೇ ಪರಿಗಣಿಸಿ ಮುಂದುವರಿದುದರಿಂದ ನೆನ್ನೆಯ ಕತ್ತಲೆ ಕಳೆದು ಇಂದಿನ ಬೆಳಕು ಮೂಡಿದುದು. ಕೊಂಚ ಇರಿ... 'ನೆನ್ನೆಯ ಕತ್ತಲೆ' ಎಂದೆನಲ್ಲವೆ? ಇದೊಂದು ಸಾಮಾನ್ಯವಾಗಿ ಬಳಸಲ್ಪಡುವ ಪದಪುಂಜ. ಆದರೆ 'ನೆನ್ನೆ' ಎನ್ನುವುದು ನಿಜಕ್ಕೂ ಇಂದು-ನಾಳೆಗಳ ಬೆಳಕಿಗೆ ಬೇಕಾದ ಮೋಂಬತ್ತಿಯೇ ವಿನಹ ಕತ್ತಲಲ್ಲವೆನ್ನುವುದು ಅಪ್ಪಟ ಸತ್ಯ.



ನೆನೆಕ್ತಿ ಎನ್ನುವುದನ್ನು 'ತೊಳೆ' ಎಂಬ ಅರ್ಥದಲ್ಲಿ ಪರಿಗಣಿಸಿದರೆ 'ನೆನ್ನೆಯನ್ನು ತೊಳೆದಾಗಲೇ 'ಇಂದು' ಹೊಳೆಯುವುದು' ಎಂಬುದು ವ್ಯಕ್ತವಾಗುತ್ತದೆ. ತೊಳೆಯುವುದರಲ್ಲೂ ಎರಡು ಹಂತಗಳು; ನೆನ್ನೆ ನಡೆದ ವಿಷಯಗಳ ಮೇಲೆ ಚಿಂತನೆ ನಡೆಸಿ ಅವನ್ನು ಮನದಲ್ಲಿ ಬೆಳಗಿಸಿಕೊಳ್ಳುವುದೊಂದು ತೊಳೆವ ಹಂತ; 'ನೆನ್ನೆಯೆಂಬ ಅವಧಿ ತೊಳೆದುಹೋಯಿತು' ಎನ್ನುತ್ತಾ ಕಾಲನ ಕಾಲಘಟ್ಟ ಕೊಟ್ಟುವಿಕೆಯನ್ನು ಸ್ವೀಕರಿಸುವುದು ಇನ್ನೊಂದು ಹಂತ. ನೆನೆಕ್ತಿಯ ನೆನೆ ಈ ಮೂರೂ ವಿಧಗಳಲ್ಲಿ ನೆನ್ನೆಯಲ್ಲಿ ಅಡಗಿರುವ ನೆನೆಗೆ ಪೂರಕ, ಪ್ರೇರಕ. ನೆನ್ನೆಯ ನೆನೆಗೆ 'ಕ್ತಿ' ಎಂಬ ಬಾಲ ಸೇರಿಸಿದರೆ ನೆನ್ನೆಯ ಗುಣಗಳ ಅನಾವರಣ!

ನೆನ್ನೆ ಎನ್ನುವುದು 'ಇಂದು'ವಿನ ರೀತಿಯಲ್ಲಿಯೇ ಒಂಟಿ. 'ನೆನ್ನೆಗಳು' ಅಥವಾ 'ಇಂದುಗಳು' ಎಂಬ ಉಲ್ಲೇಖವಿಲ್ಲ, ಅಂತೆಯೇ 'ನಾಳಿದ್ದುಗಳು' ಎನ್ನುವುದೂ ಇಲ್ಲ, 'ನಾಳೆ' ಮಾತ್ರ ಬಹುವಾಗಲೂ ಸಾಧ್ಯವೆನ್ನಲು 'ನಾಳೆಗಳು' ಪದ ಬಳಕೆಯಲ್ಲಿದೆ. 'ನಾಳೆಗಳು' ಎಂಬ ಪದವು ಸೂಚಿಸುವ ಅವಧಿಯಲ್ಲಿ ನಾವು ಮಾಡಬಹುದಾದ ಕ್ರಿಯೆಗಳನ್ನು 'ನಾಳೆಗಳಲ್ಲಿ' ಎನ್ನದೆ ಮುಂದಿನ ದಿನಗಳಲ್ಲಿ ಎನ್ನುವ ಮೂಲಕ ಭವಿಷ್ಯತ್ತನ್ನು ಸೂಚಿಸುವಂತೆಯೇ, 'ನೆನ್ನೆಗಳಲ್ಲಿ' ಎನ್ನುವ ಬಳಕೆಯೂ ಇಲ್ಲದೆ ಹಿಂದಿನ ದಿನಗಳಲ್ಲಿ ಎನ್ನುವ ಮೂಲಕ ಭೂತವನ್ನು ಸೂಚಿಸುತ್ತೇವೆ. ಸಕಲ ನಾಳೆಗಳ ಮೊತ್ತವೇ ಭವಿಷ್ಯತ್. ಸಕಲ ನೆನ್ನೆಗಳ ಮೊತ್ತವೇ ಭೂತಕಾಲ. ತಮಾಷೆಯೆಂದರೆ ಭೂತಕಾಲ ನಮ್ಮನ್ನು ಎಚ್ಚರಿಸುವ ಕಾಲ; ಭವಿಷ್ಯತ್ ನಮ್ಮನ್ನು ಭೂತದಂತೆ ಹೆದರಿಸಬಲ್ಲ ಅನಿಶ್ಚಿತ ಕಾಲ.

'ನೆನ್ನೆ ನೆನ್ನೆಗೆ; ನಾಳೆ ನಾಳೆಗೆ; ಇಂದು ನಮ್ಮದೇ; ಚಿಂತೆ ಏತಕೆ' ಎಂಬ ಹಾಡನ್ನೋ, 'ಭೋಡೋ ಕಲ್ ಕೀ ಬಾತೇ; ಕಲ್ ಕೀ ಬಾತ್ ಪುರಾನೀ' ಎಂಬ ಸಾಲುಗಳನ್ನೋ ಕೇಳಿದಾಗ 'ಛೆ! ನೆನ್ನೆಗೆ ಇಷ್ಟು ಕಡಿಮೆ ಪ್ರಾಶಸ್ತ್ಯ ನೀಡಬಾರದಿತ್ತು' ಎನ್ನಿಸಿದೆ. ನೆನ್ನೆಯದನ್ನು ಮರೆಯುವುದು ಅಷ್ಟು ಸುಲಭವೆ?

'ತಿಂಮ, ನೆನ್ನೆ ಕೊಟ್ಟ ಹೋಂವರ್ಕ್ ಮಾಡಿದ್ದೀಯೇನೋ?'

'ಇಲ್ಲ ಸಾರ್! ಅದು ನೆನ್ನೆಗೇ ಮುಗಿದುಹೋದ ಕಥೆಯಲ್ಲವೇ ಸಾರ್' ಎಂದು ನುಡಿದರೆ ಮೇಷ್ಟು ಸುಮ್ಮನಿದ್ದಾರೇನು? ಕಚೇರಿಯಲ್ಲಿ ಬಾಸ್ 'ನೆನ್ನೆ ಕೊಟ್ಟಿದ್ದ ಫೈಲ್ ಮುಗಿಸಿದಿರೇನ್ರೀ?' ಎಂದರೆ 'ಭೋಡೋ ಕಲ್ ಕೀ ಬಾತೇ' ಎಂದರೆ ಅವರೂ 'ಭೋಡೋ ಕಲ್ ಕೀ ಬಾತೇ' ಎನ್ನುತ್ತಾ 'ನಾಳೆಯಿಂದ ನಿನ್ನ ಇರುವಿಕೆಯೇ ಬೇಡ' ಎನ್ನುವುದನ್ನು ಸೂಚಿಸಿಯಾರು. ನೆನ್ನೆ, ನಾಳೆಗಳೆರಡನ್ನೂ ಸೂಚಿಸುವ ಹಿಂದಿಯ 'ಕಲ್' ಯಾರಿಗೆ ಯಾವಾಗ ಕಲ್ಲಾಗಿ ಪರಿಣಮಿಸಿ ಭವಿಷ್ಯದ ಗಾಜನ್ನು ಛಿಳ್ಳೆನಿಸುವುದೋ ಹೇಳಲಾಗದು.

ನಾಳೆಯ ಅನಿಶ್ಚಿತತೆಗಳು ಏನೇ ಇರಲಿ, ನಮ್ಮನ್ನು ಕಾಡುವುದಂತೂ ನೆನ್ನೆಗಳೇ. 'ಅಶೋಕನು ಯಾವ ಇಸವಿಯಲ್ಲಿ ಹುಟ್ಟಿದನು?' ಎಂದು ಕೇಳಿ ಎಂದೋ ಆಗಿಹೋದ ಘಟನೆಗಳನ್ನು ಇಂದಿನ ಸ್ಮೃತಿಫಲಕಕ್ಕೆ ಲಗತ್ತಿಸಿಕೊಳ್ಳಿರೆಂದು ಬೇಡಿಕೆ ಮುಂದಿರಿಸಿ ವಿದ್ಯಾರ್ಥಿಗಳನ್ನು ಗೋಳು ಹೊಯ್ದುಕೊಳ್ಳುವ ಪರಿ ನಾಳೆಗೂ ಮುಂದುವರಿಯುವುದೇ. 'ನೆನ್ನೆ ಬೀಗ ಹಾಕಿ ಕೀ ಎಲ್ಲೋ ಇಟ್ಟೆ; ನೀವೇನಾದರೂ ನೋಡಿದಿರೆ?' ಎಂದುಬಿಟ್ಟರೆ ಶೋಧನ, ಪರಿಶೋಧನ ಕ್ರಿಯೆಗಳು ನಾಳೆಗೂ ಮುಂದುವರಿದಾವು. ನೆನ್ನೆಯ ಮರೆವಿನಿಂದ ಇಂದಿನ ಮೂಲೆಮುಂಗಡಿಗಳು ಜೇಡರಬಲೆರಹಿತವಾಗುವುದು ನೆನ್ನೆಯ ಕೊಡುಗೆಯೆಂಬುದೇ ಈ ಶೋಧದಲ್ಲಿ ಕಂಡುಬರುವ ಪ್ಲಸ್ ಪಾಯಿಂಟ್. 'ನೆನ್ನೆ ಯಾವುದೋ ಮದುವೆಗೆ ಹೋಗಬೇಕಾಗಿತ್ತಲ್ಲ...' ಎನ್ನುವುದಕ್ಕೆ ಕೆಲವೊಮ್ಮೆ ಉತ್ತರ ಸಿಗುವುದು ತಿಂಗಳುಗಳಾದ ಮೇಲೆ, ಮದುವೆಯಾದವನು ಎದುರಾಗಿ ನಮ್ಮ ಜನ್ಮ ಜಾಲಾಡಿದಾಗ. ನೆನ್ನೆ ಕಟ್ಟಬೇಕಾಗಿದ್ದ ಸಾಲದ ಮೀಟರ್ ಬಡ್ಡಿಯನ್ನು ಕಟ್ಟದಿದ್ದರಂತೂ ಇಂದು 'ಪ್ರಭಾತೇ ರೌಡಿದರ್ಶನಂ' ಎನ್ನುವುದು ಕಟ್ಟಿಟ್ಟ ಬುತ್ತಿ. 'ನೆನ್ನೆ' ಎನ್ನುವುದು ಕಾಲನು 'ಇಂದು' ಎಂದಿದ್ದ ದಿನಕ್ಕೆ ಹೊದೆಸುವ ಅವಧಿ ಕಂಬಳಿ.

'ನಾಳೆ'ಯೆಂಬ ಭವನಕ್ಕೆ 'ನೆನ್ನೆ'ಯೇ ಬುನಾದಿ. ಕನಸುಗಳ ಮೂಟೆಯಾಗಿ, ಅನುಭವಗಳ ಊಟೆಯಾಗಿ, ನೆನಪುಗಳ ಮೆರವಣಿಗೆಯನ್ನೇ ಹೊರಡಿಸುವ 'ನೆನ್ನೆ' ನಮಗೆ ಇನ್ನೊಂದು ನಾಳೆ ಇಲ್ಲ ಎನ್ನುವವರೆಗಿನ ದಿನದ ವರೆಗೆ ಅತ್ಯವಶ್ಯವಾದ ಮಾರ್ಗಸೂಚಕ, ಉಲ್ಲಾಸದಾಯಕ, ಪ್ರಬೋಧಕ, ಸಮಸಂಚಾರಿ ಸಂಗಾತಿ.

ಬಟ್ಟೆಯಿಂದ ಬ್ಯಾಲೆಟ್ ಬಾಕ್ಸ್‌ವರೆಗೆ: ಕೇರಳ 'ಟ್ವೆಂಟಿ-20' ಕ್ರಾಂತಿ!

ಉದ್ಯಮಿ ಜಾಕೋಬ್ ಅವರ 'ಟ್ವೆಂಟಿ-20 ಪಕ್ಷವು' ಕೇರಳ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಸಂಕೇತಗಳು ತೋರುತ್ತಿವೆ.

• ಎಸ್. ಎನ್. ಭಟ್, ಸೈಪಂಗಲ್ಲು



ಕೇರಳದ ಎರ್ನಾಕುಲಂ ಜಿಲ್ಲೆಯ ಮಡಿಲಲ್ಲಿರುವ ಕಿಳಕ್ಕಂಬಲಂ ಇಂದು ಕೇವಲ ಒಂದು ಹಳ್ಳಿಯಲ್ಲ; ಅದು ಭಾರತೀಯ ಪ್ರಜಾಪ್ರಭುತ್ವದ ದಿಕ್ಕನ್ನೇ ಬದಲಿಸಬಲ್ಲ ಮಹಾನ್ ರಾಜಕೀಯ ಪ್ರಯೋಗಶಾಲೆ. ಬೆಟ್ಟಗುಡ್ಡಗಳ ಹಸಿರು, ಫಲವತ್ತಾದ ಕೆಂಪು ಮಣ್ಣು ಮತ್ತು ಸಮೃದ್ಧ ಅಂತರ್ಜಲದ ಈ ಕೃಷಿ ಪ್ರಧಾನ ಭೂಮಿ ಇಂದು ಕಾರ್ಪೊರೇಟ್ ಶಿಸ್ತಿನ ಆಡಳಿತಕ್ಕೆ ಸಾಕ್ಷಿಯಾಗಿದೆ.

ಸಾಂಪ್ರದಾಯಿಕ ರಾಜಕೀಯದ ಜಡತ್ವವನ್ನು ಕೊಡವಿ ಹಾಕಿದ ಈ ಗ್ರಾಮವು, ಉದ್ಯಮದ ದಕ್ಷತೆ ಮತ್ತು ಸಾರ್ವಜನಿಕ ಸೇವೆಯ ಸಮನ್ವಯದಿಂದ ಜಾಗತಿಕ ಮಟ್ಟದ ಮಾದರಿಯಾಗಿ ಹೊರಹೊಮ್ಮಿರುವುದು ಪ್ರಚಲಿತ ವಿದ್ಯಮಾನಗಳ ಅಚ್ಚರಿ. 1968ರಲ್ಲಿ ಎಂ.ಸಿ. ಜಾಕೋಬ್ ಅವರು ಬಿತ್ತಿದ 'ಕಿಟೆಕ್ಸ್' (Kitex) ಎಂಬ ಉದ್ಯಮದ ಬೀಜ ಇಂದು ವಿಶ್ವದ ಎರಡನೇ ಅತಿದೊಡ್ಡ ಮಕ್ಕಳ ಉಡುಪು ತಯಾರಿಕಾ ಸಾಮ್ರಾಜ್ಯವಾಗಿ ಬೆಳೆದು ನಿಂತಿದೆ. ಸಾಬು ಎಂ. ಜಾಕೋಬ್ ಅವರ ನೇತೃತ್ವದಲ್ಲಿ ಈ ಸಂಸ್ಥೆಯು ಲಾಭದ ಬೆನ್ನತ್ತುವುದರ ಜೊತೆಗೆ ಸಮಾಜದ ಋಣ ತೀರಿಸಲು 'ಟ್ವೆಂಟಿ-20' ಎಂಬ ಚಾರಿಟೇಬಲ್ ಟ್ರಸ್ಟ್ ಅನ್ನು 2015ರಲ್ಲಿ ಸ್ಥಾಪಿಸುವ ಮೂಲಕ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಗೆ ಹೊಸ ಭಾಷ್ಯ ಬರೆಯಿತು. ಪ್ರತಿಯೊಂದು ಕುಟುಂಬಕ್ಕೂ ವಿತರಿಸಲಾದ 'ಸದಸ್ಯತ್ವ ಕಾರ್ಡ್' ಮೂಲಕ ಉನ್ನತ ವೈದ್ಯಕೀಯ ಸೇವೆ ಮತ್ತು ಶೇ. 50ರಿಂದ 70ರಷ್ಟು ರಿಯಾಯಿತಿಯ ದಿನಸಿ ನೀಡುವ 'ಫುಡ್ ಸೆಕ್ಯೂರಿಟಿ ಮಾರ್ಕೆಟ್' ಇಡೀ ರಾಜ್ಯದ ಗಮನ ಸೆಳೆಯಿತು. ಈ ಯೋಜನೆಯು ಕೇವಲ ದಾನವಾಗಿರದೆ, ಮಧ್ಯಮ ವರ್ಗದ ಸಂಸಾರದ ಆರ್ಥಿಕ ಶಿಸ್ತನ್ನು ಕಾಪಾಡುವ ಭದ್ರ ಬುನಾದಿಯಾಗಿ ಬದಲಾಯಿತು.

ಟ್ವೆಂಟಿ-20 ಕೇವಲ ಸೇವಾ ಸಂಸ್ಥೆಯಾಗಿ ಉಳಿಯದೆ ರಾಜಕೀಯ ಶಕ್ತಿಯಾಗಿ ರೂಪಾಂತರಗೊಂಡ ಹಾದಿ ಬಹಳ ರೋಚಕವಾಗಿದೆ. ರಸ್ತೆ ಮತ್ತು ಮನೆ ನಿರ್ಮಾಣದಂತಹ ಜನಪರ ಕಾರ್ಯಗಳಿಗೆ ಅಂದಿನ ಪಂಚಾಯತ್ ಆಡಳಿತಗಾರರು ಭ್ರಷ್ಟಾಚಾರದ ಮಸಲತ್ತಿನಿಂದ ಅಡೆತಡೆಗಳನ್ನು ಒಡ್ಡಿದಾಗ, ಸಾಬು ಜಾಕೋಬ್ ಅವರಿಗೆ ವ್ಯವಸ್ಥೆಯನ್ನು ಒಳಗಿನಿಂದಲೇ ಬದಲಿಸಬೇಕೆಂಬ ಜಾಗೃತಿ ಮೂಡಿತು. ಕೇವಲ ದಾನ ಮಾಡುವುದಕ್ಕಿಂತ, ತಾವೇ ಆಡಳಿತ ನಡೆಸಿದರೆ ಕಂಪನಿಯ ನಿಧಿ ಮತ್ತು ಸರ್ಕಾರದ ಅನುದಾನವನ್ನು ಸೇರಿಸಿ ಹತ್ತು ಪಟ್ಟು ಹೆಚ್ಚು ಕೆಲಸ ಮಾಡಬಹುದು ಎಂಬ ದೃಢಸಂಕಲ್ಪದೊಂದಿಗೆ ಚುನಾವಣಾ ಕಣಕ್ಕಿಳಿದರು. ಇದು ಕಾರ್ಪೊರೇಟ್ ದಕ್ಷತೆಯನ್ನು ರಾಜಕೀಯಕ್ಕೆ ತಂದ ಮೊದಲ ಐತಿಹಾಸಿಕ ಕ್ರಾಂತಿ. 2015ರ ಪಂಚಾಯತ್ ಚುನಾವಣೆಯಲ್ಲಿ ಯಾವುದೇ ಸಾಂಪ್ರದಾಯಿಕ ಪಕ್ಷದ ಹಂಗಿಲ್ಲದೆ 'ಅರಾಜಕೀಯ ಅಭಿವೃದ್ಧಿ ವೇದಿಕೆ' ಟ್ವೆಂಟಿ-20 ಜಯಭೇರಿ ಬಾರಿಸಿತು. 19 ಸ್ಥಾನಗಳಲ್ಲಿ 17 ಸ್ಥಾನಗಳನ್ನು ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ ಈ ತಂಡ, ಕೇವಲ ಐದು ವರ್ಷಗಳಲ್ಲಿ ಗ್ರಾಮದ ಮೂಲಭೂತ ಸೌಕರ್ಯಗಳನ್ನು ವಿಶ್ವದರ್ಜೆಗೆ ಏರಿಸಿ, ರಾಜಕೀಯ ಸಿದ್ಧಾಂತಗಳಿಗಿಂತ 'ಜನರ ಜೀವನಮಟ್ಟದ ಸುಧಾರಣೆಯೇ ಮುಖ್ಯ' ಎಂದು ಸಾರುವ ಕಲ್ಯಾಣ ರಾಜ್ಯದ ಮಾದರಿಯನ್ನು ಕಟ್ಟಿಕೊಟ್ಟಿತು. ಇದು ಕೇವಲ ರಸ್ತೆಗಳ ಸುಧಾರಣೆಯಲ್ಲ, ಬದಲಾಗಿ ಜನರ ಆಲೋಚನಾ ಕ್ರಮದಲ್ಲಿ ತಂದ ಗುಣಾತ್ಮಕ ಬದಲಾವಣೆಯಾಗಿತ್ತು.



ಇಂದು 'ಟ್ವೆಂಟಿ-20 ಪಕ್ಷವು' ಕೇವಲ ಒಂದು ಗ್ರಾಮದ ಶಕ್ತಿಯಾಗಿ ಉಳಿಯದೆ, 2026ರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದೊಂದಿಗೆ ಕೈಜೋಡಿಸಿ ಕೇರಳ ರಾಜಕೀಯದಲ್ಲಿ ಮಹತ್ತರ ತಿರುವು ಸೃಷ್ಟಿಸಿದೆ. ಎಡರಂಗ ಸರ್ಕಾರದ ನಿರಂತರ ರಾಜಕೀಯ ಸೇಡು ಮತ್ತು ಕಿರುಕುಳದಿಂದ ಬೇಸತ್ತ ಸಾಬು ಜಾಕೋಬ್, 'ರಾಜಕೀಯ ರಕ್ಷಣೆ ಇಲ್ಲದೆ ಅಭಿವೃದ್ಧಿ ಅಸಾಧ್ಯ' ಎಂಬ ಕಟು ಸತ್ಯದೊಂದಿಗೆ ಕಣಕ್ಕಿಳಿದಿದ್ದಾರೆ. ಕೆಲ ದಿನಗಳ ಹಿಂದೆ ನಡೆದ ವಿಧಾನಸಭಾ ಚುನಾವಣೆಯು ರಾಜ್ಯದ ಜನತೆಯ ಗಮನ ಸೆಳೆದಿದ್ದು, ರಾಜ್ಯದ ಇತಿಹಾಸದಲ್ಲೇ ಹಿಂದೆಂದೂ ಕಾಣದಂತಹ ದಾಖಲೆ ಮಟ್ಟದ (ಅಂದಾಜು 82% ಕ್ಕೂ ಹೆಚ್ಚು) ಮತದಾನ ದಾಖಲಾಗಿದೆ. ಈ ಬೃಹತ್ ಮತದಾನವು ಕೇವಲ 'ಆಡಳಿತ ವಿರೋಧಿ ಅಲೆ' ಮಾತ್ರವಲ್ಲದೆ, ರಾಜಕೀಯದಿಂದ ದೂರವಿದ್ದ ತಟಸ್ಥ ಮತದಾರರು ಮತ್ತು ಯುವಜನತೆಯನ್ನು ಟ್ವೆಂಟಿ-20 ಪಕ್ಷವು ತನ್ನ ಅಭಿವೃದ್ಧಿ ಮಂತ್ರದ ಮೂಲಕ ಮತಗಟ್ಟೆಗೆ ಸೆಳೆಯುವಲ್ಲಿ ಯಶಸ್ವಿಯಾಗಿರುವುದಕ್ಕೆ ಸಾಕ್ಷಿಯಾಗಿದೆ. ಮತಗಟ್ಟೆಗಳ ಮುಂದೆ ಕಂಡುಬಂದ ಸುದೀರ್ಘ ಸರತಿ ಸಾಲುಗಳು ಮತ್ತು ಉತ್ಸಾಹವು ಸಾಂಪ್ರದಾಯಿಕ ಮೈತ್ರಿಕೂಟಗಳಾದ ಎಲ್.ಡಿ.ಎಫ್ ಮತ್ತು ಯು.ಡಿ.ಎಫ್‌ಗಳ ಪಾಲಿಗೆ ನಡುಕ ಹುಟ್ಟಿಸಿವೆ. ಕಮ್ಯುನಿಸ್ಟ್ ಚಳವಳಿಯ ಗಟ್ಟಿನೆಲವಾಗಿದ್ದ ಪ್ರದೇಶಗಳಲ್ಲಿಯೂ ಕಾರ್ಪೊರೇಟ್ ದಕ್ಷತೆಯ ಬಗ್ಗೆ ಚರ್ಚೆಗಳು ಆರಂಭವಾಗಿರುವುದು ಸಣ್ಣ ವಿಷಯವಲ್ಲ.

ಈ ಬಾರಿಯ ಚುನಾವಣಾ ಫಲಿತಾಂಶವು ಕೇರಳದ ದಶಕಗಳ ಹಳೆಯ ರಾಜಕೀಯ ಧ್ರುವೀಕರಣವನ್ನು ಬುಡಮೇಲು ಮಾಡುವುದು ನಿಶ್ಚಿತವಾಗಿದೆ. ಎರ್ನಾಕುಲಂ ಜಿಲ್ಲೆಯ ಕನಿಷ್ಠ 10-12 ಕ್ಷೇತ್ರಗಳಲ್ಲಿ ಈ ಮೈತ್ರಿಕೂಟವು ನೀಡಲಿರುವ ಪ್ರಬಲ ಪೈಪೋಟಿಯು ದ್ವಿಪಕ್ಷೀಯ ಸ್ಪರ್ಧೆಯನ್ನು ಮೀರಿ ತ್ರಿಕೋನ ಸ್ಪರ್ಧೆಗೆ ದಾರಿ ಮಾಡಿಕೊಟ್ಟಿದೆ. ಕಳೆದೆರಡು ದಶಕಗಳಲ್ಲಿ ಅತಿ ಸಣ್ಣ ಮತಗಳ ಅಂತರದಿಂದ ನಿರ್ಧರಿಸಲ್ಪಡುತ್ತಿದ್ದ ಕ್ಷೇತ್ರಗಳಲ್ಲಿ, ಟ್ವೆಂಟಿ-20 ಸೆಳೆಯಲಿರುವ 20,000 ದಿಂದ 30,000 ಮತಗಳು ಸಾಂಪ್ರದಾಯಿಕ ಪಕ್ಷಗಳ ಭದ್ರಕೋಟೆಯನ್ನು ಕುಸಿಯುವಂತೆ ಮಾಡಬಹುದು. ಈ ಮೈತ್ರಿಕೂಟವು ಕೆಲವಾರು ಸ್ಥಾನಗಳನ್ನು ಗೆಲ್ಲುವ ಮೂಲಕ ಹೊಸ ಶಾಸನಸಭೆಯಲ್ಲಿ 'ಕಿಂಗ್ ಮೇಕರ್' ಆಗುವ ವಿಶ್ವಾಸ ಹೊಂದಿದೆ. ಇದು ಸಾಂಪ್ರದಾಯಿಕ ಮತಬ್ಯಾಂಕ್‌ಗಳನ್ನು ಛಿದ್ರಗೊಳಿಸಲಿದ್ದು, ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಎಂಬ ಭೇದವಿಲ್ಲದೆ ಜನಪರ ಆಡಳಿತ ಬಯಸುವ ಮತದಾರರನ್ನು ಸೆಳೆಯುವ ಮೂಲಕ ರಾಜ್ಯ ರಾಜಕಾರಣದ ಒಟ್ಟಾರೆ ದಿಕ್ಕನ್ನೇ ಬದಲಿಸುವುದೆಂದು ನಿರೀಕ್ಷಿಸಲಾಗಿದೆ.

ಆಸಕ್ತಿದಾಯಕ ಸಂಗತಿಯೆಂದರೆ, ಕ್ರಿಕೆಟ್ ಮೈದಾನದಲ್ಲಿ ಟ್ವೆಂಟಿ-20 ಮಾದರಿಯು ಹೇಗೆ ಸಾಂಪ್ರದಾಯಿಕ ಶೈಲಿಯನ್ನು ಬದಿಗೊತ್ತಿ ವೇಗ ಮತ್ತು ದಕ್ಷತೆಯಿಂದ ಜನಮನ ಗೆದ್ದಿದೆಯೋ, ಅದೇ ಕ್ರಾಂತಿಯನ್ನು ನಾವು ಇಂದು ಕೇರಳದ ರಾಜಕೀಯದಲ್ಲೂ ಕಾಣುತ್ತಿದ್ದೇವೆ. ಕ್ರಿಕೆಟ್‌ನಲ್ಲಿ ಈ ಮಾದರಿಯು ಸುದೀರ್ಘ ಕಾಯುವಿಕೆಯನ್ನು ಕೊನೆಗೊಳಿಸಿ ಕ್ಷಿಪ್ರ ಫಲಿತಾಂಶ ಮತ್ತು ಮನರಂಜನೆಯನ್ನು ನೀಡುವಂತೆ, ರಾಜಕೀಯದಲ್ಲಿ ಟ್ವೆಂಟಿ-20 ಪಕ್ಷವು ಸಾಂಪ್ರದಾಯಿಕ ಪಕ್ಷಗಳ ದಶಕಗಳ ವಿಳಂಬ ನೀತಿಗೆ ಪರ್ಯಾಯವಾಗಿ 'ಕಾರ್ಪೊರೇಟ್ ವೇಗ' ಮತ್ತು 'ನಿಖರ ಅಭಿವೃದ್ಧಿ'ಯನ್ನು ಜನರ ಮುಂದೆ ಇಟ್ಟಿದೆ. ಐದು ದಿನಗಳ ಟೆಸ್ಟ್ ಪಂದ್ಯದ ತಾಳ್ಮೆ ಇಲ್ಲದ ಇಂದಿನ ಯುವ ಪೀಳಿಗೆಗೆ, ಕೇವಲ 20 ಓವರ್‌ಗಳ ರೋಚಕತೆಯಂತೆ ಶೀಘ್ರ ಅಭಿವೃದ್ಧಿ ಬೇಕಾಗಿದೆ. ಕ್ರೀಡೆಯಲ್ಲಿ ಟಿ20 ಹೇಗೆ ಆಟದ ಹಳೆಯ ನಿಯಮಗಳನ್ನು ಬದಲಿಸಿ ಯುವಜನತೆಯನ್ನು ಹುಚ್ಚೆಬ್ಬಿಸಿದೆಯೋ, ಅದೇ ರೀತಿ ಕೇರಳದ ರಾಜಕೀಯದಲ್ಲಿ ಈ ಪಕ್ಷವು ದ್ವಿಪಕ್ಷೀಯ ವ್ಯವಸ್ಥೆಯ ಭದ್ರಕೋಟೆಯನ್ನು ಭೇದಿಸಿ, ಜನರ ಆಶೋತ್ತರಗಳಿಗೆ ತಕ್ಷಣ ಸ್ಪಂದಿಸುವ ಹೊಸ ಪೀಳಿಗೆಯ 'ಪವರ್ ಪ್ಲೇ' ಆರಂಭಿಸಿದೆ. ಟ್ವೆಂಟಿ-20 ಎನ್ನುವುದು ಕೇವಲ ಹೆಸರಲ್ಲ; ಅದು ಹಳೆಯ ವ್ಯವಸ್ಥೆಯನ್ನು ಮುರಿದು ಹೊಸ ಯುಗವನ್ನು ಸೃಷ್ಟಿಸಿದ ಕ್ರಾಂತಿಯ ಸಂಕೇತ.

ಈ ಹೊಸ ಯುಗದ ರಾಜಕಾರಣದಲ್ಲಿ ಜನರು ಕೇವಲ ಭರವಸೆಗಳನ್ನು ಕೇಳಲು ಸಿದ್ಧರಿಲ್ಲ. ಕಾಂಗ್ರೆಸ್ ಮತ್ತು ಸಿಪಿಐಎಂ ನಡುವಿನ ಜಂಗಿ-ಕುಸ್ತಿಯಲ್ಲಿ ನಲುಗಿದ್ದ ಸಾಮಾನ್ಯ ಜನರಿಗೆ, ಟ್ವೆಂಟಿ-20 ಮತ್ತು ಎನ್‌ಡಿಎ ಮೈತ್ರಿಯು ಒಂದು ವಿಭಿನ್ನ ಆಯಾಮವನ್ನು ತೆರೆದಿಟ್ಟಿದೆ. ಇದರ ಪರಿಣಾಮ ರಾಜ್ಯದ ಗಡಿಯನ್ನೂ ಮೀರಿ ಬೆಳೆಯುವ ಲಕ್ಷಣಗಳಿವೆ.

ಬಟ್ಟೆ ಮಾರುಕಟ್ಟೆಯಿಂದ ಆರಂಭವಾದ ಈ ಮಹಾನ್ ಪಯಣ ಈಗ ಬ್ಯಾಲೆಟ್ ಬಾಕ್ಸ್‌ನ ಪವಿತ್ರ ಅಂಗಳಕ್ಕೆ ಬಂದು ನಿಂತಿದೆ. ಇದು ಕೇವಲ ಒಂದು ಉದ್ಯಮದ ಯಶಸ್ಸಿನ ಕಥೆಯಲ್ಲ; ಇದು ಅಧಿಕಾರದ ಹಪಾಹಪಿ ಇಲ್ಲದ, ಅಭಿವೃದ್ಧಿಯ ಹಸಿವಿನಿಂದ ಕೂಡಿದ ಒಂದು ಹಳ್ಳಿ ರಾಜ್ಯದ ಹಣೆಬರಹವನ್ನೇ ನಿರ್ಧರಿಸುವ ಹಂತಕ್ಕೆ ಬೆಳೆದ ಪ್ರಜಾಪ್ರಭುತ್ವದ ಅಪ್ರತಿಮ ಪವಾಡ! ಮುಂಬರುವ ದಿನಗಳಲ್ಲಿ ಈ ಪ್ರಯೋಗವು ಭಾರತದ ಇತರ ಭಾಗಗಳಿಗೂ ಹರಡಬಹುದು. ಸಮಾಜಸೇವೆ ಮತ್ತು ಉದ್ಯಮ ಶಿಸ್ತು ಸೇರಿದರೆ ರಾಜಕೀಯವು ಎಷ್ಟು ಪರಿಶುದ್ಧವಾಗಬಹುದು ಎಂಬುದಕ್ಕೆ ಟ್ವೆಂಟಿ-20 ಕಿಳಕ್ಕಂಬಲಂ ಒಂದು ಜ್ವಲಂತ ಉದಾಹರಣೆ. ಫಲಿತಾಂಶ ಏನೇ ಇರಲಿ, ಈ ಕಾರ್ಪೊರೇಟ್ ಕ್ರಾಂತಿ ಈಗಾಗಲೇ ಕೇರಳದ ರಾಜಕೀಯ ಇತಿಹಾಸದ ಸುವರ್ಣ ಪುಟಗಳಲ್ಲಿ ದಾಖಲಾಗಿದೆ.

ಧರ್ಮದ ಉಳಿವಿಗಾಗಿ ಪರಶುರಾಮ ಅವತಾರ

ಇಂದು ಪರಶುರಾಮ ಜಯಂತಿ.
ಪರಶುರಾಮನು ಬ್ರಹ್ಮ ತೇಜ, ಕ್ಷಾತ್ರ ತೇಜದಿಂದ ದುಷ್ಟ ಅರಸರನ್ನು ನಾಶ ಮಾಡಿದವನು.

• ಎಂ.ರಾಘವೇಂದ್ರ, ಭಂಡಾರ್ಕರ್

ಶ್ರೀಮನ್ನಾರಾಯಣನ ಹತ್ತು ಅವತಾರಗಳಲ್ಲೊಂದಾದ ಭಗವಾನ್ ಪರಶುರಾಮನ ಜನನ ವೈಶಾಖ ಶುಕ್ಲ ಪಕ್ಷ ತೃತೀಯಾದಂದು ತ್ರೇತಾಯುಗದ ಪ್ರಾರಂಭದಲ್ಲಿ, ಮಹರ್ಷಿ ಜಮದಗ್ನಿ ಮತ್ತು ರೇಣುಕಾ ಮಾತೆಯ ಉದರದಲ್ಲಿ ಆಯಿತೆಂದು ಪುರಾಣಗಳಲ್ಲಿ ಉಲ್ಲೇಖವಿದೆ. ಭಾರ್ಗವ ಗೋತ್ರಿಯಾಗಿದ್ದರಿಂದ ಭಾರ್ಗವ ರಾಮನೆಂದೂ ಪರಶುರಾಮ ಪ್ರಸಿದ್ಧ.

ಸಾವಿರಾರು ಕೈಗಳುಳ್ಳ ಮಹಾಕ್ಷತ್ರಿಯ ಅರಸ ಕಾರ್ತವೀರ್ಯಾರ್ಜುನನು ತನ್ನನ್ನು ಸತ್ಕರಿಸಿದ ಜಮದಗ್ನಿಯ ಸತ್ಕಾರದ ಮೂಲಕ್ಕೆ ಕೈ ಹಾಕಿ ಕಾಮಧೇನುವನ್ನು ಬಲಾತ್ಕಾರದಿಂದ ಅಪಹರಿಸಿ ತನ್ನೊಂದಿಗೆ ಕೊಂಡೊಯ್ಯುತ್ತಾನೆ. ವಿಚಾರ ತಿಳಿದ ಪರಶುರಾಮ ಕಾರ್ತವೀರ್ಯಾರ್ಜುನನ ಸಹಸ್ರ ಕೈಗಳನ್ನು ಕತ್ತರಿಸಿ ಆತನ ತಲೆಯನ್ನು ಧರೆಗುರುಳಿಸುತ್ತಾನೆ. ಕೋಪಗೊಂಡ ಕಾರ್ತವೀರ್ಯಾರ್ಜುನನ ಸುತರು ಪರಶುರಾಮನು ಇಲ್ಲದ ಸಂದರ್ಭದಲ್ಲಿ ಜಮದಗ್ನಿಯ ತಲೆಯನ್ನು ಕಡಿದು ರುಂಡವನ್ನು ತೆಗೆದುಕೊಂಡು ಹೋಗುತ್ತಾರೆ. ಇದನ್ನರಿತ ಪರಶುರಾಮನು ಕೆಂಡಾಮಂಡಲನಾಗಿ ರೌದ್ರಾವತಾರ ತಾಳುತ್ತಾನೆ. ತನ್ನ ತಂದೆಯ ಹತ್ಯೆಗೆ ಕಾರಣರಾದ ಎಲ್ಲರ ರುಂಡಗಳನ್ನು ಚೆಂಡಾಡಿ, ಅಮಂಗಲ ಕಾರ್ಯ ನಿರತವಾದ ರಾಜರನ್ನು ಹುಡುಕಿ ಹುಡುಕಿ ಬಿಡದೆ ಕೊಲ್ಲುತ್ತಾನೆ.



ಹೀಗೆ ಸಪ್ತ ಚಿರಂಜೀವಿಗಳಲ್ಲಿ ಒಬ್ಬರಾಗಿರುವ ಶ್ರೀಹರಿಯ ಸ್ವರೂಪಾಂಶ ಜಾತನಾದ ಭಾರ್ಗವ ರಾಮನು ದುಷ್ಕೃತ್ಯದಲ್ಲಿ ನಿರತರಾದ ದುಷ್ಟ ರಾಜರುಗಳ ಮೇಲೆ 21 ಸಲ ದಂಡಯಾತ್ರೆಯನ್ನು ಮಾಡಿ ಅವರುಗಳನ್ನು ಕೊಂದು ಭೂಮಿಯು ನಿಃಕ್ಷತ್ರಿಯವಾಗುವಂತೆ ಮಾಡಿದನು. ಅಧರ್ಮಿಗಳು, ಪ್ರಜಾಪೀಡಕರು, ವಿಪ್ರ ವಿರೋಧಿಗಳು, ರಜಸ್ತಮಹ ಸ್ವಭಾವದವರು, ದುರಾಹಂಕಾರಿಗಳೂ ಆದ ರಾಜರುಗಳನ್ನು ಸಂಹರಿಸಿ ಭೂಭಾರವನ್ನು ಇಳಿಸಿದನು.

ಭಗವಂತನು ಅನೇಕಾನೇಕ ಅವತಾರಗಳನ್ನು ಎತ್ತಿದ್ದರೂ ಅವುಗಳಲ್ಲಿ ಪ್ರಮುಖವಾಗಿ ಹತ್ತು ಅವತಾರಗಳು ಮಹತ್ತರ ಕಾರಣಗಳಿಂದಾಗಿ ಅದರಲ್ಲೂ ಧರ್ಮ ಸಂಸ್ಥಾಪನೆಗಾಗಿ ಆವಿರ್ಭವಿಸಿದಂತಾಗಿವೆ. ಹೀಗೆ ಪರಶುರಾಮ ಅವತಾರವೂ ಕೂಡ ಇಂತಹ ಮಹತ್ತರ ಕಾರಣಕ್ಕಾಗಿ ಕಾರಣೀಭೂತವಾಗಿದ್ದು ಭಕ್ತ ಜನರ ಉದ್ಧಾರಕ್ಕಾಗಿ ಭಗವಂತನು ಪರಶುರಾಮನ ರೂಪದಲ್ಲಿ ಜಗತ್ತಿಗೆ ತೋರಿ ಬಂದಿದ್ದಾನೆ.

ಪರಶುರಾಮನು ಶಾಸ್ತ್ರ ಬಲ(ಅಂದರೆ ಜ್ಞಾನ ಬಲ) ಮತ್ತು ಶಸ್ತ್ರ ಬಲ (ಅಂದರೆ ಬಾಹುಬಲ) ಇವೆರಡರ ಸಂಯೋಗದಿಂದ ಶತ್ರು ದಮನ ಮಾಡಿದನು. ಆಧ್ಯಾತ್ಮಿಕ ಪರಿಭಾಷೆಯಲ್ಲಿ ಜ್ಞಾನ ಬಲವೆಂದರೆ ಬ್ರಹ್ಮ ತೇಜ, ಬಾಹು ಬಲವೆಂದರೆ ಕ್ಷಾತ್ರ ತೇಜವಾಗಿದೆ.

ಪರಶುರಾಮನು ಶಾಸ್ತ್ರ ಬಲದಿಂದ ಸಂಕಲ್ಪದಲ್ಲಿ ಶಾಪಕೊಟ್ಟು ಹಾಗೂ ಬಾಹುಬಲದಿಂದ ಅಂದರೆ ಕ್ಷಾತ್ರ ತೇಜದ ಬಲದಿಂದ ಪರಶುವಿನಿಂದ ಆಘಾತ ಮಾಡಿ, ಅಂದರೆ ಪ್ರತ್ಯಕ್ಷ ಸಂಹಾರ ಮಾಡಿ ಅಧರ್ಮಿಗಳನ್ನು ಸಂಹಾರ ಮಾಡಿದನು. ಹೀಗೆ ಪರಶುರಾಮನು ದುಷ್ಟರನ್ನು ನಾಶಗೊಳಿಸಲು ಬ್ರಹ್ಮ ಹಾಗೂ ಕ್ಷಾತ್ರ, ಇವೆರಡೂ ತೇಜಗಳನ್ನು ಉತ್ಕೃಷ್ಟವಾಗಿ ಉಪಯೋಗಿಸಿದ ಶ್ರೇಷ್ಠತಮ ಯೋಧನಾಗಿದ್ದಾನೆ.

ಬ್ರಹ್ಮ ವೃಂದವನ್ನು ಸರ್ವನಾಶಗೊಳಿಸುವ, ಅವರ ಆಶ್ರಮ ಮತ್ತು ಗುರುಕುಲದ ಉಜ್ವಲ ಪರಂಪರೆಯನ್ನು ಧ್ವಂಸಗೊಳಿಸುವ ಅನ್ಯಾಯದ ರಾಜ್ಯಾಧಿಕಾರಕ್ಕೆ ಎರಡೂ ತೇಜಗಳಿಂದ ಸಂಪನ್ನವಿರುವ ಪರಶುರಾಮ ತಡೆ ಹಾಕಿದನು. ಈ ರೀತಿಯಲ್ಲಿ ಕಾಲಾನುಸಾರ ಅವಶ್ಯವಿರುವ ಕ್ಷತ್ರಿಯರ ಕರ್ತವ್ಯವನ್ನು ಪರಶುರಾಮ ಪೂರ್ಣಗೊಳಿಸಿದರು.

ಪರಶುರಾಮ ದೇವರು ಮಾಡಿದ ಅನುಗ್ರಹದ ಬಗ್ಗೆ ಹೇಳುವುದಾದರೆ ಗಾಯತ್ರಿ ಮಂತ್ರದ ಮೊದಲ ಅಕ್ಷರ ತತ್. ಇದು ಪರಶುರಾಮ ದೇವರನ್ನು ಕೊಂಡಾಡುವ ಅಕ್ಷರವೆಂದು ಶ್ರೀ ಮಧ್ವಾಚಾರ್ಯರು ತಿಳಿಸಿದ್ದಾರೆ. ತೇಜೋಮಯವಾದ ಅಗ್ನಿಯಲ್ಲಿ ಅಂತರ್ಯಾಮಿಯಾದ ಹರಿಣಿಪತಿ ಪರಶುರಾಮ ದೇವರು 'ತತ್' ಎಂಬ ಅಕ್ಷರದಿಂದ ಪ್ರತಿಪಾದ್ಯರಾಗಿ ನಮ್ಮೆಲ್ಲರಿಗೆ ಅನುಗ್ರಹವನ್ನು ಮಾಡುವುದಕ್ಕೆ ಸನ್ನಿಹಿತರಾಗಿದ್ದಾರೆ ಅಂತ ನಾವು ತಿಳಿದರೆ ಗಾಯತ್ರಿ ಮಂತ್ರ ಜಪ ಸಾರ್ಥಕವಾಗುತ್ತದೆ ಎಂಬುದಾಗಿ ಉತ್ತರಾದಿ ಮಠದ ಶ್ರೀಶ್ರೀ ಸತ್ಯಾತ್ಮ ತೀರ್ಥರು ತಮ್ಮ ಆಶೀರ್ವಚನ ಸಂದರ್ಭ ಸ್ಮರಿಸಿದ ನುಡಿಗಳಿವು.

ಪರಶುರಾಮನು ಅಂದು ಕೋಪತಾಪ ಪ್ರದರ್ಶಿಸಿದ್ದು ಅನಿವಾರ್ಯವಾದ ಸಂದರ್ಭದಲ್ಲಿ ಧರ್ಮಕ್ಕೆ ಚ್ಯುತಿ ಬಂದಾಗ ಮಾತ್ರ. ಮಹಾಭಾರತ ಯುದ್ಧದಲ್ಲಿ ಚಕ್ರವನ್ನು ಹಿಡಿಯುವುದಿಲ್ಲ ಎಂದಿದ್ದ ಕೃಷ್ಣಪರಮಾತ್ಮನು, ಅನಿವಾರ್ಯವಾದ ಸಂದರ್ಭದಲ್ಲಿ ಭೀಷ್ಮಾಚಾರ್ಯರ ಮೇಲೆಯೇ ಸುದರ್ಶನ ಚಕ್ರವನ್ನು ಪ್ರಯೋಗಿಸಿರಲಿಲ್ಲವೇ? ಯುದ್ಧ ಅನಿವಾರ್ಯವಾದಾಗ, ಭಯೋತ್ಪಾದಕರ ಉಪಟಳ ಹೆಚ್ಚಾದಾಗ ನೆರೆ ರಾಷ್ಟ್ರದ ಆಕ್ರಮಣಕಾರಿ ಪ್ರವೃತ್ತಿಯನ್ನು ತಡೆಯಬೇಕಾದರೆ ಶಸ್ತ್ರಾಸ್ತ್ರಗಳ ಪ್ರಯೋಗ ಮಾಡಲಾರದೆ ಸುಮ್ಮನೆ ಕುಳಿತುಕೊಳ್ಳಲಾದೀತೇ?! ಕೇವಲ ಶಾಂತಿ ಮಂತ್ರ ಪಠಿಸಿ ಸುಮ್ಮನಾದರೆ ಹೇಡಿಗಳೆಂದು ಎಲ್ಲರೆದುರು ತಲೆ ತಗ್ಗಿಸಿ ಕುಳಿತುಕೊಳ್ಳಬೇಕಾದೀತು. ಪ್ರಧಾನಿ ನರೇಂದ್ರ ಮೋದಿಯವರು ಉಡುಪಿಗೆ ಬಂದಿದ್ದಾಗ ತಮ್ಮ ಭಾಷಣದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಪರಶುರಾಮನ ಸೃಷ್ಟಿ ಎಂದು ಸ್ಮರಿಸಿದ್ದರಲ್ಲದೆ ಈ ಪರಶುರಾಮ ಸೃಷ್ಟಿಯು ನಮಗೆ ಪ್ರಕೃತಿಯ ಪೋಷಣೆ, ಪ್ರಕೃತಿಯ ರಕ್ಷಣೆ, ಪ್ರಕೃತಿಯೊಂದಿಗೆ ಸಮತೋಲನದ ಜೀವನವನ್ನು ಕಲಿಸಿಕೊಟ್ಟಿದೆ ಎಂದು ಕೊಂಡಾಡಿದ್ದರು.

ಹೀಗೆ ಅಂದು ದುಷ್ಟ ಕ್ಷತ್ರಿಯರನ್ನು ನಾಶ ಮಾಡಿದ ಪರಶುರಾಮನು ಇಂದು ಯಾವ ವ್ಯಕ್ತಿಗಳ ನಾಶ ಮಾಡುವುದು ಬೇಡ, ಆದರೆ ಆಡಳಿತಗಾರರ ಹಾಗೂ ಸಕಲ ಸಜ್ಜನರ ಮನಸ್ಸಿನಲ್ಲಿರುವ ಕಾಮಕ್ರೋಧಾದಿ ಎಲ್ಲಾ ದೋಷಗಳೆಂಬ ದುಷ್ಟರನ್ನು ದೂರಮಾಡಿ ಶುದ್ಧವಾದ ಮನಸ್ಸು ವಾಕ್ ಶಕ್ತಿಯನ್ನು ನೀಡಿ ಸದ್ಗುಣವಾದ ಸಾಮ್ರಾಜ್ಯವನ್ನು ನಮ್ಮ ಮನಸ್ಸಿನಲ್ಲಿ ಸ್ಥಾಪನೆ ಮಾಡಲಿ.

ಕಿರುಸುದ್ದಿ

ಶ್ರೀಗಂಗಮ್ಮ ದೇವಿಗೆ ಅಕ್ಷಯ ಅಮಾವಾಸ್ಯೆ ಪೂಜೆ

• **ತಾವರೆಕೆರೆ:** ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿ ಕರಪನಹಳ್ಳಿ-ಮಜ್ಜಿಗೆಕುಂಟೆಯ ಚಿಂತಾಮಣಿ-ಹೊಸಕೋಟೆ ರಾಜ್ಯ ಹೆದ್ದಾರಿ ಬಳಿ ನೆಲೆಸಿರುವ ಶ್ರೀಗಂಗಮ್ಮ ದೇವಿ ದೇವಾಲಯದಲ್ಲಿ ಅಕ್ಷಯ ಅಮಾವಾಸ್ಯೆ ಪ್ರಯುಕ್ತ ಭಾರತೀಯರ ಸೇವಾ ಸಮಿತಿ ರಾಜ್ಯಾಧ್ಯಕ್ಷ ಡಾ.ಎಂ.ರಾಮಚಂದ್ರ(ಹೂಡಿ ಚಿನ್ನಿ) ನೇತೃತ್ವದಲ್ಲಿ ವಿಶೇಷ ಪೂಜೆ ನಡೆಸಲಾಯಿತು.



ಬೆಳಗಿನ ಜಾವದಿಂದಲೇ ದೇವಿಗೆ ಪ್ರಧಾನ ಅರ್ಚಕರಾದ ರತ್ನಮ್ಮ ನೇತೃತ್ವದಲ್ಲಿ ಅಭಿಷೇಕ, ಕುಂಕುಮಾರ್ಚನೆ, ಹೂವಿನ ಅಲಂಕಾರ ನೆರವೇರಿತು. ದೇವರಿಗೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಸೇವೆ ನಡೆಯಿತು. ಕರಪನಹಳ್ಳಿ, ಎಂ.ಹೊಸಹಳ್ಳಿ ಸುತ್ತಮುತ್ತಲ ಗ್ರಾಮದ ನೂರಾರು ಸುಮಂಗಲೆಯರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಇಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

• **ದೊಡ್ಡಬಳ್ಳಾಪುರ:** ನಗರ ಹಾಗೂ ತಾಲೂಕಿನ ಹಲವೆಡೆ ಭಾನುವಾರ ವಿದ್ಯುತ್ ಪೂರೈಕೆ ವ್ಯತ್ಯಯವಾಗಲಿದೆ. ದೊಡ್ಡಬಳ್ಳಾಪುರ ನಗರ ಉಪವಿಭಾಗದ ವ್ಯಾಪ್ತಿಗೆ ಬರುವ ವಿವಿಧ ಉಪಕೇಂದ್ರಗಳಲ್ಲಿ ಹೊರಹೊಮ್ಮುತ್ತಿರುವ ಫೀಡರ್‌ಗಳ ನಿರ್ವಹಣೆ ಕಾರ್ಯದ ಹಿನ್ನೆಲೆಯಲ್ಲಿ ಏಪ್ರಿಲ್19ರಂದು ಭಾನುವಾರ ನಗರದ ಮತ್ತು ತಾಲೂಕಿನ ಹಲವೆಡೆ ವಿದ್ಯುತ್ ಅಡಚಣೆ ಉಂಟಾಗಲಿದೆ ಎಂದು ಬೆಸ್ಕಾಂ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ ಕ್ರಾಸ್ ವ್ಯಾಪ್ತಿಗೆ ದೊಡ್ಡಬಳ್ಳಾಪುರ ನಗರದ ಗಂಗಾಧರಪುರ, ತಾಲೂಕು ಕಚೇರಿ ರಸ್ತೆ, ಡಿ ಕ್ರಾಸ್ ಮತ್ತು ತಾಲೂಕಿನ ರಘುನಾಥ ಪುರ ಸ್ಟೇಟ್, ಕ್ಯಾಂಪ್‌ರಸ್ತೆ, ನಾಗದೇನಹಳ್ಳಿ, ಮೋಪುರಹಳ್ಳಿ, ಆದಿನಾರಾಯಣಹೊಸಹಳ್ಳಿ, ಹಮಾಮ್, ಶಿವಪುರ, ಸೋಣ್ಣಪ್ಪನ ಹಳ್ಳಿ ಕೋಡಿಹಳ್ಳಿ, ಕೊನಘಟ್ಟ, ಲಿಂಗನಹಳ್ಳಿಗಳಲ್ಲಿ ಬೆಳಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳಲಿದೆ.

ಕಾಂಗ್ರೆಸ್‌ನ ಮಹಿಳಾ ವಿರೋಧಿ ಮನಸ್ಥಿತಿ ಬದಲಾಗಿಲ್ಲ: ಎಚ್‌ಡಿಕೆ

• **ಹೊಸದಿಲ್ಲಿ:** ತಿದ್ದುಪಡಿ ಮಸೂದೆ ಸೋಲುವ ಮೂಲಕ ಲೋಕಸಭೆಯಲ್ಲಿ 30 ವರ್ಷಗಳ ಹಿಂದಿನ ಕರಾಳ ಇತಿಹಾಸ ಮತ್ತೆ ಮರುಕಳಿಸಿದೆ. ಮೂರು ದಶಕಗಳ ನಂತರವೂ ಕಾಂಗ್ರೆಸ್ ಪಕ್ಷದ ಮಹಿಳಾ ವಿರೋಧಿ ಮನಸ್ಥಿತಿ ಕೊಂಚವೂ ಬದಲಾಗಿಲ್ಲ ಎನ್ನುವುದಕ್ಕೆ ಲೋಕಸಭೆ ಮತ್ತೊಮ್ಮೆ ಸಾಕ್ಷಿಯಾಯಿತು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಮಹಿಳಾ ಮೀಸಲು ಮಸೂದೆಯನ್ನು ಸೋಲಿಸಿದ ಕೂಟದ ಶಕ್ತಿಗಳನ್ನು ರಾಷ್ಟ್ರದ ನಾರಿಶಕ್ತಿ ಎಂದಿಗೂ ಕ್ಷಮಿಸುವುದಿಲ್ಲ, ಇದು ಮಾತೃಶಕ್ತಿಗೆ ಆಗಿರುವ ಅಪಮಾನ. ಇದಕ್ಕೆ ಕಾರಣರಾದ ಎಲ್ಲರೂ ತಕ್ಕ ಶಾಸ್ತಿ ಅನುಭವಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ಅಂದು ದೇವೇಗೌಡರ ನೇತೃತ್ವದ ಸಂಯುಕ್ತ ರಂಗ ಸರ್ಕಾರವು ಮಹಿಳೆಯರಿಗೆ ಶೇ.33 ರಷ್ಟು ಮೀಸಲು ನೀಡುವ ಕ್ರಾಂತಿಕಾರಿ ನಿರ್ಧಾರ ಕೈಗೊಂಡು ಸಂಸತ್ತಿನಲ್ಲಿ ಮಸೂದೆ ಮಂಡಿಸಿತ್ತು. ಅಂದು ಇದೇ ಕಾಂಗ್ರೆಸ್ ಮತ್ತು ಅದರ ಸಹಚರ ಶಕ್ತಿಗಳು ಆ ಪ್ರಯತ್ನವನ್ನು ಸಂಘಟಿತವಾಗಿ ವಿಫಲಗೊಳಿಸಿದ್ದವು. ಆ ಐತಿಹಾಸಿಕ ಅನ್ಯಾಯ ಸರಿಪಡಿಸಲು ಪ್ರಧಾನಿ ಮೋದಿ ಅವರು ದಿಟ್ಟಹೆಜ್ಜೆ ಇರಿಸಿದ್ದರು. ಇದಕ್ಕೆ ಪುನಃ ಅದೇ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ತಡೆಯೊಡ್ಡಿವೆ ಎಂದು ಅವರು ಕಿಡಿಕಾರಿದ್ದಾರೆ.

ಕುವೆಂಪು ಆದರ್ಶ ಪಾಲಿಸಲಿ

• **ಬೆಂಗಳೂರು:** ಕುವೆಂಪು ರವರ ತತ್ವ ಆದರ್ಶವನ್ನು ಹೇಳುವುದಲ್ಲ ಅದನ್ನ ಜೀವನದಲ್ಲಿ ಪಾಲಿಸಬೇಕು ಎಂದು ಸಾಹಿತಿ ವ.ಚ.ಚನ್ನೇಗೌಡರು ಹೇಳಿದರು.

ಮಹಿಳಾ ವಿಶ್ರಾಂತ ಕೊಠಡಿಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾದ ನಾಡು-ನುಡಿಗೆ ದುಡಿದ ಸಾರಿಗೆ ಸಂಸ್ಥೆಯ ಕನ್ನಡ ಪರಿಚಾರಕರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿ, ಹಳ್ಳಿ ಹಳ್ಳಿಗಳಿಗೆ ಸಾಹಿತ್ಯ ತಲುಪಿಸಲು ಕರ್ನಾಟಕ ಸಾಹಿತ್ಯ ಅಕಾಡೆಮಿ ಶ್ರಮಿಸುತ್ತಿದೆ. ಕುವೆಂಪು ರವರ ತತ್ವ ಆದರ್ಶಗಳನ್ನು ಹೇಳುವುದಲ್ಲ ಅದನ್ನ ಜೀವನದಲ್ಲಿ ಪಾಲಿಸಬೇಕು ಎಂದರು.

ಈ ವೇಳೆ ನಾಡು-ನುಡಿಗೆ ಸೇವೆ ಸಲ್ಲಿಸಿದ ಸಾರಿಗೆ ಸಂಸ್ಥೆಯ ಯಶೋಧ, ಎನ್.ಎಂ.ನಟರಾಜ್, ಸುಭಾಶ್ ಕುಮಾರ್, ಆರ್.ವೆಂಕಟೇಶ್, ಬಸವರಾಜ್ ಎನ್, ಮಾರ್ಕಂಡೇಯ ಎ. ಅವರಿಗೆ ಅಭಿನಂದನೆ ಸಲ್ಲಿಸಲಾಯಿತು.

ದುರ್ಗಾಜೋಗಿಹಳ್ಳಿಯಲ್ಲಿ 2115ನೇ ದಿನದ ಅನ್ನದಾಸೋಹ | ಅಪಾರ ಜನ ಮೆಚ್ಚುಗೆ | ಬಟ್ಟೆ ವಿತರಣೆ

ಹಸಿವು ನೀಗಿಸುವುದೇ ಶ್ರೇಷ್ಠ ಕಾಯಕ

• **ದೊಡ್ಡಬಳ್ಳಾಪುರ:** ಸಾರ್ವಜನಿಕರು ತಮ್ಮ ವಿಶೇಷ ದಿನವನ್ನು ದುರ್ಗಾಜೋಗಿಹಳ್ಳಿಯಲ್ಲಿ ನಡೆಯುವ ನಿರಂತರ ಅನ್ನದಾಸೋಹ ಕಾರ್ಯಕ್ರಮದಲ್ಲಿ ಭಾಗವಹಿಸಿ ನಿರಾಶ್ರಿತರಿಗೆ ಆಹಾರ ನೀಡುವ ಮೂಲಕ ಸೇವೆ ಸಲ್ಲಿಸಬಹುದು ಎಂದು ಯುವ ಬಲಿಜ ಸಂಘದ ಅಧ್ಯಕ್ಷ ಶ್ರೀನಾಥ್ ಹೇಳಿದರು.

ತಾಲೂಕಿನ ದುರ್ಗಾಜೋಗಿಹಳ್ಳಿಯಲ್ಲಿ 2115 ನೇ ದಿನದ ನಿರಂತರ ಅನ್ನ ದಾಸೋಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಹಸಿದವರಿಗೆ ಆಹಾರ ವಿತರಣೆ, ಶಾಲಾ ಮಕ್ಕಳಿಗೆ ಅಗತ್ಯ ಪರಿಕರ ಹಾಗೂ ವಯೋವೃದ್ಧರಿಗೆ ಬಟ್ಟೆ ವಿತರಣೆ ಮಾಡುವ ಮೂಲಕ ನಮ್ಮ ಕೈಲಾದ ಸೇವೆಯನ್ನು ಮಾಡುವ ಮೂಲಕ ವಿಶೇಷ ಕಾರ್ಯಕ್ರಮ ಮಾಡಿ ಎಂದರು.

ಕರ್ನಾಟಕ ರಾಜ್ಯ ಛಾಯಾಗ್ರಾಹಕ ಸಂಘದ ನಿರ್ದೇಶಕ ರವಿಪಟ್ಟರಹಳ್ಳಿ ಮಾತನಾಡಿ, ಇಂದು ಅನ್ನದಾನ ಸೇರಿದಂತೆ ಹಲವು ಸೇವಾ ಕಾರ್ಯವನ್ನು ಮಾಡುವ ಮೂಲಕ ಅರ್ಥ ಪೂರ್ಣವಾಗಿ ಆಚರಿಸುತ್ತೇವೆಂದು ತಿಳಿಸಿದರು.

ಕಳೆದ 2115 ದಿನದಿಂದ ನಿತ್ಯ ನಿರಂತರ ಅನ್ನದಾನ ಮಾಡಿಕೊಂಡು ಬರುತ್ತಿರುವ ಮಲ್ಲೇಶ್ ಮತ್ತು ತಂಡಕ್ಕೆ ಶುಭವಾಗಲಿ. ನಿರಂತರ ಅನ್ನದಾಸೋಹ ಸಮಿತಿಗೆ ನಮ್ಮ ಸಹಕಾರ ಸದಾ ಇರುತ್ತದೆ ಎಂದರು. ಸಮಾಜ ಸೇವಕ ಚೆನ್ನಕೃಷ್ಣ ಮಾತನಾಡಿ, ನಿರಂತರ ಅನ್ನದಾಸೋಹ ಸಮಿತಿ ಸಹಯೋಗದೊಂದಿಗೆ ನಿರ್ಗತಿಕ ಕಡುಬಡವರಿಗೆ ಆಹಾರ, ವಯೋವೃದ್ಧರಿಗೆ ಹಾಗೂ ಶಾಲಾ ಮಕ್ಕಳಿಗೆ ಅಗತ್ಯ ಪರಿಕರ ವಿತರಣೆ ಮಾಡುವ ಮೂಲಕ ಆಚರಿಸಿದ್ದೇವೆ. ಇಂತಹ ಅರ್ಥಪೂರ್ಣ ಆಚರಣೆ ಸದಾ ನಡೆಯಲಿ ಇಂತಹ ಮಹತ್ಕಾರ್ಯವನ್ನು ಮಾಡಿಕೊಂಡು ಬರುತ್ತಿರುವ ಮಲ್ಲೇಶ್ ಮತ್ತು ತಂಡಕ್ಕೆ ಶುಭವಾಗಲಿ ಎಂದರು.



ಕಾರ್ಯಕ್ರಮದ ಆಯೋಜಕ ಅನ್ನದಾಸೋಹಿ ಮಲ್ಲೇಶ್ ಮಾತನಾಡಿ, ದಾನಿಗಳ ನೆರವಿನಿಂದ ಕಳೆದ 2115 ದಿನದಿಂದ ನಿರಂತರವಾಗಿ ಅನ್ನದಾಸೋಹ ಕಾರ್ಯಕ್ರಮ ನಡೆಯುತ್ತಾ ಬಂದಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಎಲ್ಲಾ ದಾನಿಗಳಿಗೆ ಹೃದಯಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು. ಸ್ಥಳೀಯ ಪ್ರಮುಖರು, ನಿರಂತರ ಅನ್ನದಾಸೋಹ ಸಮಿತಿ ಸದಸ್ಯರು ಹಾಜರಿದ್ದರು. ಸ್ಥಳೀಯಪ್ರಮುಖರು, ನಿರಂತರಅನ್ನದಾಸೋಹ ಸಮಿತಿ ಸದಸ್ಯರು ಹಾಜರಿದ್ದರು.

ನಿರಂತರವಾಗಿ ಸಾಗಲಿ

ಅನ್ನದಾಸೋಹ ಮಾಡುವುದು ವಿಶೇಷ ಕಾಯಕವಾಗಿದೆ. ಸಮಾಜದಲ್ಲಿ ಹಸಿದವರು ಸಾಕಷ್ಟು ಜನರಿದ್ದಾರೆ. ಇವರ ಹಸಿವು ನೀಗಿಸುವುದು ಇಂದಿನ ತುರ್ತು ಕೆಲಸವಾಗಿದೆ. ಇಂತಹ ಕೆಲಸ ನಿರಂತರವಾಗಿ ಸಾಗಲಿ ಎಂದು ಯುವ ಬಲಿಜ ಸಂಘದ ಅಧ್ಯಕ್ಷ ಶ್ರೀನಾಥ್ ಹೇಳಿದರು.

ದಾನಿಗಳಿಗೆ ಅಭಿನಂದನೆ

ಕೊರೋನಾ ಸಂದರ್ಭದಿಂದ ಇಲ್ಲಿವರೆಗೆ ಕಳೆದ 2115 ದಿನದಿಂದ ನಿರಂತರವಾಗಿ ಅನ್ನದಾಸೋಹ ನಡೆಸಿಕೊಂಡು ಬರಲಾಗುತ್ತಿದೆ. ಇಲ್ಲಿವರೆಗೆ ಸಾಕಷ್ಟು ಎಲ್ಲಾ ದಾನಿಗಳಿಗೆ ಹೃದಯಪೂರ್ವಕವಾಗಿ ನೆರವು ನೀಡಿದ್ದಾರೆಂದು ಕಾರ್ಯಕ್ರಮದ ಆಯೋಜಕ ಅನ್ನದಾಸೋಹಿ ಮಲ್ಲೇಶ್ ಅಭಿನಂದನೆ ಸಲ್ಲಿಸಿದರು.

ಮಹತ್ವದ ಕಾರ್ಯ

ವಯೋವೃದ್ಧರು, ಶಾಲಾ ಮಕ್ಕಳು, ಕಡುಬಡವರಿಗೆ ಅನ್ನದಾಸೋಹ ಮಾಡಲಾಗುತ್ತಿದೆ. ಇಂತಹ ಮಹತ್ಕಾರ್ಯವನ್ನು ಮಾಡಿಕೊಂಡು ಬರುತ್ತಿರುವ ಮಲ್ಲೇಶ್ ಮತ್ತು ತಂಡಕ್ಕೆ ಶುಭವಾಗಲಿ ಎಂದು ಸಮಾಜ ಸೇವಕ ಚೆನ್ನಕೃಷ್ಣ ಹಾರೈಸಿದರು.

ವಿಧೇಯಕ ಸೋಲು: ಜೆಡಿಎಸ್ ಧರಣಿ



• **ಬೆಂಗಳೂರು:** ಲೋಕಸಭೆ ಮತ್ತು ರಾಜ್ಯಗಳ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಶೇ.33ರಷ್ಟು ಮೀಸಲಾತಿ ನೀಡುವ ವಿಧೇಯಕಕ್ಕೆ ಲೋಕಸಭೆಯಲ್ಲಿ ಸೋಲಾಗಿದ್ದನ್ನು ಖಂಡಿಸಿ ಜೆಡಿಎಸ್ ಮಹಿಳಾ ಘಟಕವು ನಗರದ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ಪಕ್ಷದ ಶಾಸಕರು, ವಿಧಾನಪರಿಷತ್ ಸದಸ್ಯರು ಸೇರಿದಂತೆ ಅನೇಕ ಮುಖಂಡರು ಭಾಗಿಯಾಗಿದ್ದ ಈ ಪ್ರತಿಭಟನೆಯಲ್ಲಿ, ಜೆಡಿಎಸ್ ಕಾರ್ಯಕರ್ತೆಯರು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್ ಮಿತ್ರಪಕ್ಷಗಳ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆ ನೇತೃತ್ವ ವಹಿಸಿ ಮಾತನಾಡಿದ ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರು, 1996ರಲ್ಲಿ ಶಾಸನಸಭೆಗಳಲ್ಲಿ ಮಹಿಳೆಯರಿಗೆ ನ್ಯಾಯೋಚಿತ ಮೀಸಲಾತಿ ನೀಡುವ ಉದ್ದೇಶದಿಂದ ಸಂಸತ್ತಿನಲ್ಲಿ ಮಹಿಳಾ ಮೀಸಲು ವಿಧೇಯಕವನ್ನು ಮಂಡಿಸಿದ್ದರು. ಅಂದು ಕೂಡ ಕಾಂಗ್ರೆಸ್ ಮತ್ತು ಸಂಯುಕ್ತ ರಂಗದ ಕೆಲ ಮಿತ್ರಪಕ್ಷಗಳ ಕುಯುಕ್ತಿಯಿಂದ ಆ ಮಸೂದೆಗೆ ಸೋಲಾಯಿತು. ಮತ್ತೆ ಅದೇ ಇತಿಹಾಸ ಮರುಕಳಿಸಿದ್ದು, ರಾಷ್ಟ್ರದ ಮಹಿಳೆಯರಿಗೆ ಕಾಂಗ್ರೆಸ್ ಮೋಸ ಮಾಡಿದೆ ಎಂದು ಟೀಕಿಸಿದರು. ಕಾಂಗ್ರೆಸ್ ಹಿಂದಿನಿಂದಲೂ ಮಹಿಳಾ ವಿರೋಧಿ ನೀತಿಯನ್ನೇ ಅನುಸರಿಸಿಕೊಂಡು ಬರುತ್ತಿದೆ ಎಂದು ದೂರಿದ ಅವರು, ಮಹಿಳಾ ಮೀಸಲು ಮಸೂದೆ ಸೋಲಿಗೆ ಕಾರಣರಾದ ಕಾಂಗ್ರೆಸ್ಸಿಗರನ್ನು ರಾಷ್ಟ್ರದ ಮಹಿಳೆಯರು ಶಾಶ್ವತವಾಗಿ ಮನೆಯಲ್ಲಿ ಕೂರಿಸುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ, ಮಾಜಿ ಶಾಸಕ ಕೆ.ಎ. ತಿಪ್ಪೇಸ್ವಾಮಿ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ನಗರ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಶೈಲಜಾ ರಾವ್ ಸೇರಿದಂತೆ ಅನೇಕ ನಾಯಕರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಸಾರ್ವಜನಿಕರು ತಕ್ಷಣವೇ ಮಾಹಿತಿ ನೀಡಬೇಕು: ಜಿಲ್ಲಾಧಿಕಾರಿ ಮನವಿ

ಬಾಲ್ಯವಿವಾಹ ತಡೆಗೆ ಸಹಕರಿಸಲಿ

• **ದೊಡ್ಡಬಳ್ಳಾಪುರ:** ಏಪ್ರಿಲ್ 20 ರಂದು ಬಸವ ಜಯಂತಿ ಮತ್ತು ಅಕ್ಷಯ ತೃತೀಯ ಹಿನ್ನೆಲೆಯಲ್ಲಿ ಬಾಲ್ಯವಿವಾಹ ನಡೆಯುವ ಸಾಧ್ಯತೆ ಇದೆ. ಬಾಲ್ಯ ವಿವಾಹವನ್ನು ತಡೆಗಟ್ಟಲು ಸಾರ್ವಜನಿಕರು, ಅಧಿಕಾರಿಗಳು ಜಾಗೃತಿ ವಹಿಸಿ ಎಂದು ಜಿಲ್ಲಾಧಿಕಾರಿ ಡಾ. ಕೆ.ಎನ್ .ಅನುರಾಧಾ ತಿಳಿಸಿದ್ದಾರೆ.

ಬಾಲ್ಯ ವಿವಾಹವೆಂದರೆ 18 ವರ್ಷದೊಳಗಿನ ಹುಡುಗಿ ಹಾಗೂ 21 ವರ್ಷದೊಳಗಿನ ಹುಡುಗನ ನಡುವೆ ನಡೆಯುವ ಮದುವೆ ಅಥವಾ ಇಬ್ಬರಲ್ಲಿ ಒಬ್ಬರು ನಿಗದಿತ ವಯಸ್ಸಿನೊಳಗಿದ್ದರು ಇಂತಹ ಮದುವೆಯನ್ನು ಬಾಲ್ಯವಿವಾಹ ಎಂದು ಪರಿಗಣಿಸಲಾಗುವುದು ಎಂದರು. ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ-2016 ಪ್ರಕಾರ ಬಾಲ್ಯವಿವಾಹವನ್ನು ಏರ್ಪಡಿಸುವ ಪೋಷಕರು ಅಥವಾ ಪಾಲಕರು, 18 ವರ್ಷದೊಳಗಿನ ಹುಡುಗಿಯನ್ನು ಮದುವೆಯಾಗುವ ವಯಸ್ಕ ವ್ಯಕ್ತಿ ಮತ್ತು ಮದುವೆಯಲ್ಲಿ ಭಾಗವಹಿಸುವ, ಎಲ್ಲಾ ರೀತಿಯಲ್ಲಿ ಸಹಕರಿಸಿದ ಕುಟುಂಬಸ್ಥರನ್ನು ಸಹ ತಪ್ಪಿತಸ್ಥರು ಎಂದು ಪರಿಗಣಿಸಲಾಗುವುದು ಎಂದಿದ್ದಾರೆ. ಇವರಿಗೆ ಮೇಲೆ ತಿಳಿಸಿದ ಕಾಯ್ದೆಯ ಪ್ರಕಾರ ಒಂದು ವರ್ಷಕ್ಕೆ ಕಡಿಮೆ ಇಲ್ಲದ ಅಂದರೆ ಎರಡು ವರ್ಷ ಕಾಲ ವಿಸ್ತರಿಸಬಹುದಾದ ಕಠಿಣ ಜೈಲು ಶಿಕ್ಷೆ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಅಥವಾ ಇವೆರಡರಿಂದಲು ಶಿಕ್ಷೆಗೆ ಒಳಪಡುತ್ತಾರೆಂದು ಹೇಳಿದ್ದಾರೆ.



ಬಾಲ್ಯವಿವಾಹ ನಿಷೇಧ ಕಾಯ್ದೆಯಲ್ಲಿ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ತನ್ನ ಅ ಕಾರವ್ಯಾಪ್ತಿಯಲ್ಲಿಬಾಲ್ಯವಿವಾಹಜರುಗುತ್ತಿರುವ ಮಾಹಿತಿ ಬಂದಾಗ ಸ್ವ ಪ್ರೇರಿತವಾಗಿ ದೂರು ದಾಖಲು ಮಾಡಲು ಅವಕಾಶವಿರುತ್ತದೆ. ಅದೇರೀತಿ ಇದು ಕೇವಲ ಸರ್ಕಾರಿ ಅಧಿಕಾರಿಗಳ ಜವಾಬ್ದಾರಿಯಾಗದೇ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿರುತ್ತದೆಂದಿದ್ದಾರೆ.

ಬಾಲ್ಯವಿವಾಹ ನಿಷೇಧಾಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಗೆ ಬರುವ ಧಾರ್ಮಿಕ ಸ್ಥಳ ಮತ್ತು ಕಲ್ಯಾಣ ಮಂಟಪದಲ್ಲಿ ಸಾಮೂಹಿಕ ಅಥವಾ ವೈಯಕ್ತಿಕ ವಿವಾಹದಲ್ಲಿ ಯಾವುದೇ ಬಾಲ್ಯವಿವಾಹಗಳು ಜರುಗದಂತೆ ಕ್ರಮವಹಿಸಬೇಕೆಂದು ಸೂಚಿಸಿದರು.

ಸಹಾಯವಾಣಿ ಸಂಪರ್ಕಿಸಲು ಮನವಿ

ಜಿಲ್ಲೆಯಲ್ಲಿ ಬಾಲ್ಯವಿವಾಹ ನಡೆಯುತ್ತಿರುವುದು ಸಾರ್ವಜನಿಕರ ಗಮನಕ್ಕೆ ಬಂದರೆ ತುರ್ತಾಗಿ ಮಕ್ಕಳ ಸಹಾಯವಾಣಿ 1098, ಪೊಲೀಸ್ ಸಹಾಯವಾಣಿ 112 ಮತ್ತು ಮಕ್ಕಳ ರಕ್ಷಣಾ ಘಟಕ 080-29560034 ಹಾಗೂ ಸಂಬಂಧಪಟ್ಟ ಹತ್ತಿರದ ಪೊಲೀಸ್ ಠಾಣೆಗೆ ದೂರು ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ವೇತನ ಅನ್ಯ ಕಾರ್ಯಕ್ಕೆ ಬಳಕೆ



- ಎಬಿವಿಪಿ ರಾಜ್ಯ ಸಹ ಕಾರ್ಯದರ್ಶಿ ಯಶವಂತ್ ಆರೋಪ
- ಬಾಕಿ ಇರುವ ವಿದ್ಯಾರ್ಥಿವೇತನ ಬಿಡುಗಡೆ
- ಎಸ್‌ಎಸ್‌ಪಿ ಪೋರ್ಟಲ್ ತಾಂತ್ರಿಕ ದೋಷ ನಿವಾರಣೆ

• **ಬೆಂಗಳೂರು:** ರಾಜ್ಯ ಸರ್ಕಾರ 2024-25ನೇ ಸಾಲಿನಲ್ಲಿರಾಜ್ಯದಲಕ್ಷಾಂತರವಿದ್ಯಾರ್ಥಿಗಳಿಗೆಮಂಜೂರಾದ ವಿದ್ಯಾರ್ಥಿ ವೇತನ ತಡೆ ಹಿಡಿದು ಆ ಹಣವನ್ನು ಇನ್ನಿತರ ಕಾರ್ಯಗಳಿಗಾಗಿ ಬಳಸುತ್ತಿದೆ. ಹಲವಾರು ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಂಚಿತರಾಗುವಂತೆ ಮಾಡುತ್ತಿದೆ ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ರಾಜ್ಯ ಸಹ ಕಾರ್ಯದರ್ಶಿ ಯಶವಂತ್ ಎಂ . ಎನ್ ಆರೋಪಿಸಿದರು.

ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡದೆ, ಶಿಕ್ಷಣದಿಂದ ವಂಚಿತರಾಗುವಂತೆ ಮಾಡುತ್ತಿರುವ ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ ಬಳಿಕ ಮಾತನಾಡಿ, ನಮ್ಮ ದೇಶದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ಮುಂದುವರಿಸದೆ ಇರಲು ಅತ್ಯಂತ ಪ್ರಮುಖವಾದ ಕಾರಣ ಅವರಿಗಿರುವ ಆರ್ಥಿಕ ಸಮಸ್ಯೆ. ವಿದ್ಯಾರ್ಥಿಗಳಿಗಾಗುವ ಆರ್ಥಿಕ ಸಮಸ್ಯೆಯನ್ನು ಹೋಗಲಾಡಿಸುವ ದೃಷ್ಟಿಯಿಂದ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳಿಗೆ ನೀಡಿ ಅವರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದರೆ ರಾಜ್ಯ ಸರ್ಕಾರ 2024-25ನೇ ಸಾಲಿನಲ್ಲಿ ರಾಜ್ಯದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಮಂಜೂರಾದ ವಿದ್ಯಾರ್ಥಿ ವೇತನ ತಡೆ ಹಿಡಿದು ಆ ಹಣವನ್ನು ಇನ್ನಿತರ ಕಾರ್ಯಗಳಿಗಾಗಿ ಬಳಸುತ್ತಿರುವ ಕ್ರಮ ಖಂಡಿಸಿದರು.

ಎಬಿವಿಪಿ ಮಹಾನಗರ ಸಹ ಕಾರ್ಯದರ್ಶಿ ಧನುಷ್ ಗೌಡ ಮಾತನಾಡಿ, 4 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳಿಗೆ, ಇಂದು ರಾಜ್ಯ ಸರ್ಕಾರ 2024-25 ನೇ ಸಾಲಿನ ವಿದ್ಯಾರ್ಥಿ ವೇತನವನ್ನು ತಡೆ ಹಿಡಿದಿದೆ. ಎಸ್‌ಎಸ್‌ಪಿ ತಂತ್ರಾಂಶದಲ್ಲಿ, ವಿದ್ಯಾರ್ಥಿವೇತನ ಮಂಜೂರಾಗಿರುವುದಾಗಿ ತೋರಿಸಿದ್ದರು, ವಿದ್ಯಾರ್ಥಿಗಳ ಖಾತೆಗೆ ಹಣ ಜಮಾವಾಗಿರುವುದಿಲ್ಲ, ಹಣ ಜಮಾವಾಗುವ ಮೊದಲೇ ಮುಂದಿನ ಶೈಕ್ಷಣಿಕ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿರುವುದು ವಿದ್ಯಾರ್ಥಿಗಳಿಗೆ ಗೊಂದಲವನ್ನು ಉಂಟುಮಾಡಿದ್ದು, ಶಿಕ್ಷಣದಿಂದ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳು ವಂಚಿತರಾಗುವುದನ್ನು ತಪ್ಪಿಸಬೇಕು ಎಂದು ಆಗ್ರಹಿಸಿದರು.

ಚೆನ್ನಮ್ಮಮೂರ್ತಿ, ಚೆಲಕಲ ಬಂಡಿ ಮೆರವಣಿಗೆ | ಸಾಂಸ್ಕೃತಿಕ ಕಾರ್ಯಕ್ರಮ

ಇಂದು ಸಾಸಲು ಚೆನ್ನಮ್ಮ ಉತ್ಸವ

• **ದೊಡ್ಡಬಳ್ಳಾಪುರ:** ತಾಲೂಕಿನ ಸಾಸಲು ಹೋಬಳಿ ಕೇಂದ್ರದ ಡಾ.ಬಿ.ಆರ್. ಅಂಬೇಡ್ಕರ್ ಪ್ರೌಢಶಾಲಾ ಆವರಣದಲ್ಲಿ ಏಪ್ರಿಲ್19 ರಂದು ಭಾನುವಾರ ನಡೆಯಲಿರುವ ಸಾಸಲು ಚೆನ್ನಮ್ಮ ಉತ್ಸವಕ್ಕೆ ಕ್ಷಣಗಣನೆ ತೀವ್ರವಾಗಿದೆ. ಪ್ರಚಾರ ಕಾರ್ಯ ವ್ಯಾಪಕವಾಗಿ ನಡೆಯುತ್ತಿದೆ.

ಮೊದಲ ಬಾರಿಗೆ ಆಯೋಜನೆ ಮಾಡಿರುವ ಉತ್ಸವ ಸಮಿತಿ ಸದಸ್ಯರು ಈಗಾಗಲೇ ತಾಲೂಕಿನಾದ್ಯಂತ ಪ್ರಚಾರ ಮಾಡಲಾಗಿದೆ. ಮನೆ ಮನೆಗೆ ತೆರಳಿ ಮಾಹಿತಿ ನೀಡಿ ಉತ್ಸವಕ್ಕೆ ಆಹ್ವಾನ ನೀಡುತ್ತಿದ್ದಾರೆ.



ಸಾಸಲು ಹೋಬಳಿ ಚೆನ್ನಮ್ಮ ಉತ್ಸವ ಸಮಿತಿ ವತಿಯಿಂದ ಮೊದಲ ಬಾರಿಗೆ ನಡೆಯುತ್ತಿರುವ ಸಾಸಲು ಚೆನ್ನಮ್ಮ ಉತ್ಸವ-2026 ಕಾರ್ಯ ಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲ ಯದ ಕನ್ನಡ ಅಧ್ಯಯನಕೇಂದ್ರದಪ್ರಾಧ್ಯಾಪಕ ಡಾ.ಡಿ.ಕೆ.ಚಿತ್ತಯ್ಯ ಪೂಜಾರ್ ಉದ್ಘಾಟಿಸಲಿದ್ದಾರೆ.



ಸಾಸಲು ಚೆನ್ನಮ್ಮ ಉತ್ಸವ ಏಪ್ರಿಲ್ 19ರ ಬೆಳಗ್ಗೆ 8 ಗಂಟೆಗೆ ಸಾದ್ವಿಮಣಿ ಸಾಸಲು ಚೆನ್ನಮ್ಮ ದೇವಾಲಯ ಮುಂಭಾಗದಿಂದ ಡಾ.ಬಿ.ಆರ್. ಅಂಬೇಡ್ಕರ್ ಪ್ರೌಢಶಾಲೆಯ ಸಾಸಲು ಚೆನ್ನಮ್ಮ ಉತ್ಸವ ವೇದಿಕೆ ತನಕ ಜಾನಪದ ಕಲಾ ತಂಡಗಳೊಂದಿಗೆ ಸಾಸಲು ಚೆನ್ನಮ್ಮ ಮೂರ್ತಿಯನ್ನು ಚೆಲಕಲ ಬಂಡಿ ಮೂಲಕ ಮೆರವಣಿಗೆ ನಡೆಯುತ್ತದೆ. ಸಾಸಲು ಚೆನ್ನಮ್ಮ ಉತ್ಸವದ ಮುಖ್ಯ ವೇದಿಕೆಯಲ್ಲಿ ಜಾನ ಪದ ವಿದ್ವಾಂಸರಾದ ಸಣ್ಣ ನಾಗಪ್ಪನವರಿಂದ ಸಾಸಲು ಚೆನ್ನಮ್ಮ ಪರಿಚಯದ ಕಿರುಪುಸ್ತಕ ಬಿಡುಗಡೆ ಮಾಡುವರು. ಮುಖ್ಯ ಅತಿಥಿಗಳಾಗಿ ಶಾಸಕ ಧೀರಜ್ ಮುನಿರಾಜು, ಮಾಜಿ ಶಾಸಕ ಟಿ.ವೆಂಕಟರಮಣಯ್ಯ, ಕಿಮ್ಸ್ ಆಸ್ಪತ್ರೆ ಮಾಜಿ ಅಧ್ಯಕ್ಷ ಬಿ. ಮುನೇಗೌಡ ಭಾಗವಹಿಸಲಿದ್ದಾರೆ. ದೊಡ್ಡಬಳ್ಳಾಪುರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಪಿ. ಗೋವಿಂದರಾಜು ಅಧ್ಯಕ್ಷತೆ ವಹಿಸಲಿದ್ದಾರೆ.

ಮಧ್ಯಾಹ್ನ 12 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿರುತ್ತದೆ. ಸಾಸಲು ಹೋಬಳಿ ಕುರಿತು ಚಿಂತನ-ಮಂಥನ ವಿಚಾರಗೋಷ್ಠಿ, ರಾತ್ರಿ 7 ಗಂಟೆಗೆ ಸಾಸಲು ಚೆನ್ನಮ್ಮ ಕುರಿತ ನಾಟಕ ನಡೆಯಲಿದೆ.

ಕಸಾಪ ತಾಲೂಕು ಅಧ್ಯಕ್ಷ ಪಿ.ಗೋವಿಂದರಾಜು, ಗೌರವ ಕಾರ್ಯದರ್ಶಿ ಎ.ಜಯರಾಮ್, ಸಾಸಲು ಹೋಬಳಿ ಕಸಾಪ ಘಟಕದಅಧ್ಯಕ್ಷಜಿ.ಎಂ.ನಾಗರಾಜು,ಪಿಡಿಒಶ್ರೀನಿವಾಸ್ ಸಾಸಲು ಚೆನ್ನಮ್ಮ ಉತ್ಸವ ಸಮಿತಿಯ ಮುಖಂಡರಾದ ನರಸಿಂಹಗೌಡ, ಪುಟ್ಟಾಪುರಹಳ್ಳಿ ರಮೇಶ್, ಕೇಶವಮೂರ್ತಿ, ರವಿಕುಮಾರ್, ಚನ್ನವೀರನಹಳ್ಳಿ ನರಸಿಂಹಮೂರ್ತಿ, ನರೇಂದ್ರ ಮುಂತಾದವರು ವಿವಿಧ ಗ್ರಾಮಗಳಿಗೆ ತೆರಳಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ.

ರಸ್ತೆ ಬದಿ ನಿಂತ ಅನಾಥ ವಾಹನಗಳ ಎತ್ತಂಗಡಿ | ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಕ್ರಮ

ಮುಂದಿನ ವಾರದಿಂದ ಟೋಯಿಂಗ್ ಆರಂಭ

• **ಬೆಂಗಳೂರು:** ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಮತ್ತು ಅಕ್ರಮವಾಗಿ ನಿಲುಗಡೆ ಮಾಡಲಾದ ಹಾಗೂ ಅನಾಥ ವಾಹನವನ್ನು ತೆರವುಗೊಳಿಸುವ ನಿಟ್ಟಿನಲ್ಲಿ ಮುಂದಿನ ವಾರದಿಂದ ಟೋಯಿಂಗ್ ಪ್ರಾರಂಭಿಸಲಾಗುವುದು ಎಂದು ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ತಿಳಿಸಿದ್ದಾರೆ.

ಟೋಯಿಂಗ್ ವಾಹನ ಪರಿಶೀಲನೆ ನಡೆಸಿದ ಅವರು, ಟೋಯಿಂಗ್ ವಾಹನಗಳನ್ನು ಪಡೆದುಕೊಳ್ಳುವ ಸಲುವಾಗಿ ಪಾಲಿಕೆಯು ಟೋಯಿಂಗ್ ವಾಹನ ಪರಿಶೀಲನಾ ಕಾರ್ಯವನ್ನು ನಡೆಸಿದೆ. ಟೆಂಡರ್ ಪಡೆದ ಗುತ್ತಿಗೆದಾರರು ನಿಗದಿಪಡಿಸಿದ ಮಾನದಂಡವನ್ನು ಪೂರೈಸುತ್ತಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲುಈಪರಿಶೀಲನಾಕಾರ್ಯವನ್ನು ನಡೆಸಲಾಯಿತು ಎಂದು ಹೇಳಿದ್ದಾರೆ.

ಆರು ಟೋಯಿಂಗ್ ವಾಹನ ಬಳಕೆ: ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ಒಟ್ಟು 6 ಟೋಯಿಂಗ್ ವಾಹನಗಳನ್ನು ಬಾಡಿಗೆಗೆ ಪಡೆಯಲಾಗಿದೆ. ವಾಹನಗಳ ಕಾರ್ಯಕ್ಷಮತೆ ಮತ್ತು ಗುತ್ತಿಗೆದಾರರ ಅರ್ಹತೆಯನ್ನು ಪರಿಶೀಲಿಸಿದ ನಂತರ, ಮುಂದಿನ ವಾರದಿಂದ ಈ ವಾಹನಗಳು ಅಧಿಕೃತವಾಗಿ ಟ್ರಾಫಿಕ್ ಪೊಲೀಸರ ಉಸ್ತುವಾರಿಯಲ್ಲಿ ರಸ್ತೆಗಿಳಿದು ಕಾರ್ಯನಿರ್ವಹಿಸಲಿವೆ ಎಂದು ತಿಳಿಸಿದರು.



ಅನಾವಶ್ಯಕ ಪಾರ್ಕಿಂಗ್ ವಾಹನಗಳಿಂದ ಉಂಟಾಗುತ್ತಿದ್ದ ಕಿರಿಕಿರಿಯನ್ನು, ರಸ್ತೆಗಳಲ್ಲಿನ ಅಡೆತಡೆಗಳನ್ನು ನಿವಾರಿಸಿ ಸುಗಮ ಸಂಚಾರಕ್ಕೆ ಟೋಯಿಂಗ್ ವಾಹನಗಳು ಸಹಕಾರಿಯಾಗಲಿವೆ. ವಾಹನ ಸವಾರರು ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸದಂತೆ ಮನವಿ ಮಾಡಿದ್ದಾರೆ.

ನೋ ಪಾರ್ಕಿಂಗ್ ವಲಯದಲ್ಲಿ ಕಟ್ಟುನಿಟ್ಟಿನ ನಿಗಾ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೋ ಪಾರ್ಕಿಂಗ್ ವಲಯಗಳಲ್ಲಿ ಕಟ್ಟುನಿಟ್ಟಿನ ನಿಗಾ ವಹಿಸಲು ನಿರ್ದೇಶಿಸಲಾಗಿದೆ. ಅದರಂತೆ ಪಾಲಿಕೆಗಳಲ್ಲಿ ಮೊದಲಹಂತದಲ್ಲಿ ಟೋಯಿಂಗ್ ಆರಂಭಿಸಲು ಸೂಚಿಸಲಾಗಿದೆ. ಬಳಿಕ ಅಗತ್ಯತೆಯನ್ನು ನೋಡಿಕೊಂಡು ಪಾಲಿಕೆವಾರು ಟೋಯಿಂಗ್ ವಾಹನಗಳ ಹೆಚ್ಚಳ ಮಾಡುವ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ.

ವಿವಿಧ ಸಂಘಟನೆಗಳ ಸಹಯೋಗ: ಬಿಎಸ್‌ಡಬ್ಲ್ಯುಎಂಎಲ್ ಕಾರ್ಯಾಗಾರ

ತ್ಯಾಜ್ಯ ನಿರ್ವಹಣೆಗೆ ಸಮನ್ವಯತೆ ಇರಲಿ

• **ಬೆಂಗಳೂರು:** ನಗರದಲ್ಲಿ ಘನತ್ಯಾಜ್ಯ ನಿರ್ವಹಣಾ ನಿಯಮಗಳು-2026 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎಲ್ಲಾ ಪಾಲುದಾರರ ಸಮನ್ವಯ ಹಾಗೂ ನಾಗರಿಕರ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ ಎಂದು ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ (ಬಿಎಸ್ ಡಬ್ಲ್ಯುಎಂಎಲ್)ದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕರೀಗೌಡ ಅವರು ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ವ್ಯಾಪ್ತಿಯಲ್ಲಿ ಬಿಎಸ್‌ಡಬ್ಲ್ಯುಎಂಎಲ್ ವತಿಯಿಂದ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2026 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ನಗರದ ಟೌನ್ ಹಾಲ್‌ನಲ್ಲಿ ನಾಗರಿಕರು, ನಿವಾಸಿಗಳ ಕಲ್ಯಾಣ ಸಂಘಗಳು, ಸರ್ಕಾರೇತರ ಸಂಸ್ಥೆಗಳು, ಹೋಟೆಲ್ ಸಂಘಟನೆಗಳು ಹಾಗೂ ಜಲಮಂಡಳಿ ಅಧಿಕಾರಿಗಳಿಗೆ ಕಾರ್ಯಾಗಾರದಲ್ಲಿ ಅವರು ಮಾತನಾಡಿ, ನಗರದಲ್ಲಿ ರಸ್ತೆ ಬದಿಗಳಲ್ಲಿ ಹಾಗೂ ಖಾಲಿ ಜಾಗಗಳಲ್ಲಿ ಕಸವನ್ನು ಬಿಸಾಡದೆ, ಮನೆ-ಮನೆಗೆ ಭೇಟಿ ನೀಡುವ ಆಟೋ ಟಿಪ್ಪರ್ ಗಳಿಗೆ ತ್ಯಾಜ್ಯವನ್ನು ನೀಡಬೇಕು. ಮಿಶ್ರ ತ್ಯಾಜ್ಯವನ್ನು ನೀಡದೆ, ಹಸಿ ಹಾಗೂ ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ನೀಡುವಂತೆ ಮನವಿ ಮಾಡಿದರು. ನಗರದ ದೊಡ್ಡ ಅಪಾರ್ಟ್‌ಮೆಂಟ್‌ಗಳಲ್ಲಿ ಉತ್ಪತ್ತಿಯಾಗುವ ಬೃಹತ್ ಪ್ರಮಾಣದ ತ್ಯಾಜ್ಯವನ್ನು ಹೇಗೆ ವಿಲೇವಾರಿ ಮಾಡಬೇಕು ಎಂದು ಐದು ನಗರ ಪಾಲಿಕೆಗಳಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳೊಂದಿಗೆ ಸಭೆ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.



ಕೇಂದ್ರೀಕೃತ ಆನ್‌ಲೈನ್ ವ್ಯವಸ್ಥೆ : ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಹಾಗೂ ಮೇಲ್ವಿಚಾರಣೆಯನ್ನು ಚುರುಕುಗೊಳಿಸಲು ಹೊಸ ಕೇಂದ್ರೀಕೃತ ಆನ್‌ಲೈನ್ ಪೋರ್ಟಲ್ ಅನ್ನು ಶೀಘ್ರದಲ್ಲೇ ಪ್ರಾರಂಭಿಸಲು ಹಾಗೂ ಬೃಹತ್ ಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದಿಸುವವರ ಜವಾಬ್ದಾರಿಯನ್ನು ಹೆಚ್ಚಿಸಲು ಮತ್ತು ನಿಯಮಗಳ ಕಟ್ಟುನಿಟ್ಟಿನ ಅನುಷ್ಠಾನವನ್ನು ಖಚಿತಪಡಿಸಲು ಬೃಹತ್ ತ್ಯಾಜ್ಯ ಉತ್ಪಾದಕರ ಜವಾಬ್ದಾರಿ ಎಂಬ ಹೊಸ ಹೊಣೆಗಾರಿಕಾ ವ್ಯವಸ್ಥೆಯನ್ನು ಜಾರಿಗೆ ತರಲು ಬಿಎಸ್‌ಡಬ್ಲ್ಯುಎಂಎಲ್ ಉದ್ದೇಶಿಸಿದೆ.

ನಾಲ್ಕು ಹಂತದಲ್ಲಿ ತ್ಯಾಜ್ಯ ವಿಂಗಡಣೆ ಕಡ್ಡಾಯ: ತ್ಯಾಜ್ಯವನ್ನು ಸುಲಭವಾಗಿ ವಿಲೇವಾರಿ ಮಾಡಲು ಹಾಗೂ ಮರುಬಳಕೆಯನ್ನು ಉತ್ತೇಜಿಸಲು, ಇನ್ನು ಮುಂದೆ ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕರೂ ನೂತನ ನಿಯಮದ ಪ್ರಕಾರ ಕಡ್ಡಾಯವಾಗಿ ತ್ಯಾಜ್ಯವನ್ನು ನಾಲ್ಕು ಪ್ರತ್ಯೇಕ ವಿಭಾಗಗಳಾಗಿ ವಿಂಗಡಿಸಬೇಕು. ಜೈವಿಕವಾಗಿ ಕರಗುವ ತ್ಯಾಜ್ಯ ಹಸಿ ತ್ಯಾಜ್ಯ, ಮರುಬಳಕೆ ಮಾಡಬಹುದಾದ ಒಣ ತ್ಯಾಜ್ಯ, ವೈಯಕ್ತಿಕ ನೈರ್ಮಲ್ಯಕ್ಕೆ ಬಳಸಿದ ನೈರ್ಮಲ್ಯ ತ್ಯಾಜ್ಯ, ವಿಲೇವಾರಿ ವೇಳೆ ವಿಶೇಷ ಎಚ್ಚರಿಕೆ ಅಗತ್ಯವಿರುವ ವಿಶೇಷ ಕಾಳಜಿಯ ತ್ಯಾಜ್ಯ ಎಂದು ನಾಲ್ಕು ವಿಭಾಗದಲ್ಲಿ ವಿಂಗಡಿಸಬೇಕು.

ಕಿರುಸುದ್ದಿ

ಹಾಸಿಗೆ ಫ್ಯಾಕ್ಟರಿಗೆ ಬೆಂಕಿ: ಲಕ್ಷಾಂತರ ರೂಪಾಯಿ ನಷ್ಟ



• **ತಿಪಟೂರು:** ನಗರದ ರಂಗಾಪುರ ರಸ್ತೆಯ ಅರಸು ನಗರ ಪ್ರದೇಶದಲ್ಲಿರುವ ಮೋಹಿನ್ ಅವರಿಗೆ ಸೇರಿದ ಹಾಸಿಗೆ (ಬೆಡ್‌ಶೀಟ್) ಫ್ಯಾಕ್ಟರಿಯಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿದ್ದು, ಬೆಂಕಿ ತೀವ್ರವಾಗಿ ಹೊತ್ತಿ ಉರಿದ ಪರಿಣಾಮ, ಪಕ್ಕದಲ್ಲಿದ್ದ ಪೊರಕೆ ಸಂಗ್ರಹಿಸಿಟ್ಟಿದ್ದ ಕಟ್ಟಡಕ್ಕೂ ಬೆಂಕಿ ವ್ಯಾಪಿಸಿದೆ.ಅಗ್ನಿ ಅವಘಡದಲ್ಲಿ ಹಾಸಿಗೆ ಫ್ಯಾಕ್ಟರಿಯಲ್ಲಿದ್ದ ಹತ್ತಿ, ವಿದ್ಯುತ್ ಉಪಕರಣಗಳು, ಮೇಲ್ಛಾವಣಿಯ ಸೀಟ್‌ಗಳು, 100ಕ್ಕೂ ಹೆಚ್ಚು ಹಾಸಿಗೆಯ ಉತ್ಪನ್ನಗಳು, ಅಸ್ಲಾಂಪಾಷ ಅವರಿಗೆ ಸೇರಿದ 10ಟನ್ ತೆಂಗಿನಕಡ್ಡಿಯ ಪೊರಕೆಗಳು, ಜಮೀರ್‌ಗೆ ಸೇರಿದ 5ಟನ್ ಪ್ಲಾಸ್ಟಿಕ್ ಖಾಲಿ ಚೀಲಗಳು ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾಗಿದ್ದು, ಕಡ್ಡಿ ಮಂಡಿಯಲ್ಲಿ 10ಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದರು ಘಟನೆ ನಡೆದ ಸಂದರ್ಭದಲ್ಲಿ ಫ್ಯಾಕ್ಟರಿಯಲ್ಲಿದ್ದವರು ಎಲ್ಲಾ ಕಾರ್ಮಿಕರು ನಮಾಜ್‌ಗೆ ತೆರಳಿದ್ದರಿಂದ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ತಿಳಿದಿದೆ.ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಎರಡು ಜಲವಾಹನಗಳ ಸಹಾಯದಿಂದ ಬೆಂಕಿ ನಂದಿಸಲು ಹರ ಸಾಹಸಪಟ್ಟರು.

ಎಸ್.ಎಲ್. ಭೈರಪ್ಪ ಪ್ರತಿಷ್ಠಾನದಿಂದ ಧರ್ಮಶ್ರೀ 65ನೇ ವರ್ಷದ ಸಾಹಿತ್ಯ ಸಂಸ್ಮರಣೆ | ವಿದ್ಯಾರ್ಥಿ ವೇತನ ವಿತರಣೆ

ಸತ್ಯವೇ ಡಾ. ಎಸ್.ಎಲ್. ಭೈರಪ್ಪ ಸರ್ವಸ್ವ



• **ಬೆಂಗಳೂರು :** ಭೈರಪ್ಪ ಪ್ರತಿಷ್ಠಾನದಿಂದ ಮೊದಲ ಬಾರಿಗೆ ವಿದ್ಯಾರ್ಥಿ ವೇತನವನ್ನು ಕೊಡಮಾಡಲಾಗುತ್ತಿರುವುದು ಸಂತಸದ ಸಂಗತಿ. ಅವರ ಧರ್ಮಶ್ರೀ ಕಾದಂಬರಿ ಸಹ ಈ ಪ್ರಕ್ರಿಯೆಗೆ ಸ್ಫೂರ್ತಿಯಾಗಿದೆ ಎಂದರೆ ತಪ್ಪಾಗುವುದಿಲ್ಲ ಎಂದು ಲೇಖಕ ಜಿ.ಬಿ.ಹರೀಶ್ ಅಭಿಪ್ರಾಯಪಟ್ಟರು.

ಶನಿವಾರ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಎಸ್.ಎಲ್.ಭೈರಪ್ಪ ಪ್ರತಿಷ್ಠಾನ ಆಯೋಜಿಸಲಾಗಿದ್ದ ಧರ್ಮಶ್ರೀ 65ನೇ ವರ್ಷದ ಸಾಹಿತ್ಯ ಸಂಸ್ಮರಣಾ ಕಾರ್ಯಕ್ರಮದಲ್ಲಿ ಮಾತನಾಡಿ, ಭೈರಪ್ಪ ಅವರು ಆರ್ಯಸಮಾಜದ ಮಾದರಿಯನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದರು ಹಾಗೂ ಅವರ ಕಾದಂಬರಿಗಳಲ್ಲಿ ಸಹ ಅದು ಬಿಂಬಿತವಾಗುತ್ತಿತ್ತು.ಅವರು ರಸತಪಸ್ವಿಯಾಗಿದ್ದರು, ಸತ್ಯವೇ ಅವರಿಗೆ ಸರ್ವಸ್ವವಾಗಿತ್ತು ಎನ್ನುವುದು ಸಾರವಾಗಿ ಅವರ ಜೀವನ ಕ್ರಮದಿಂದಲೇ ತಿಳಿದು ಕೊಳ್ಳಬಹುದಾಗಿದೆ ಎಂದರು.

1961ನೇ ಇಸವಿಯಲ್ಲಿ ಧರ್ಮಶ್ರೀ ಕಾದಂಬರಿ ಬಿಡುಗಡೆಯಾಯಿತು. ಇದು ಹೃದಯವನ್ನು ಕಲಕುವಂಥಹ ಕಾದಂಬರಿಯಾಗಿದೆ. ಧರ್ಮಗಳ ಮಧ್ಯೆಯ ಜಿಜ್ಞಾಸೆಯನ್ನು ಎತ್ತಿ ಹಿಡಿದ ಮಹೋನ್ನತ ಕಾದಂಬರಿಯಾಗಿದೆ. ಕಾದಂಬರಿಯ ಪಾತ್ರಗಳ ಮೂಲಕ ಧರ್ಮದ ಭಾರವನ್ನು ಇಳಿಸುವ ಒಳ್ಳೆಯ ಪ್ರಯತ್ನವನ್ನು ಮಾಡಲಾಗಿದೆ. ರಿಲಿಜಿಯನ್ ಮತ್ತು ಧರ್ಮದ ನಡುವಿನ ಸಂಘರ್ಷದ ಪ್ರಯಾಣ ಧರ್ಮಶ್ರೀಯಾಗಿದೆ. ನನ್ನ ಮೊದಲಾರ್ಧದ ಜೀವನ ಧರ್ಮಶ್ರೀಯ ಮೊದಲಾರ್ಧ ಬಹುತೇಕ ಒಂದೇ ಆಗಿರುವುದು ಕೂಡ ಕಾಕತಾಳೀಯ ಎಂದೇ ಹೇಳಬಹುದಾಗಿದೆ. ಈ ಕೃತಿಯ ಮುಂದುವರಿದ ಭಾಗಗಳೇ ಸಾರ್ಥ ಮತ್ತು ಆವರಣವಾಗಿದೆ ಎಂದರೆ ತಪ್ಪಾಗಲಾರದು ಎಂದು ಹೇಳಿದರು.

ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, ಕನ್ನಡ ಸಾಹಿತ್ಯ ಲೋಕದಲ್ಲಿ ತನ್ನದೇ ಆದ ವೈಚಾರಿಕ ದಿಟ್ಟತನ, ಸ್ವತಂತ್ರ ನಿಲುವು ಮತ್ತು ತತ್ತ್ವ ಚಿಂತನೆಯ ಮೂಲಕ ವಿಶಿಷ್ಟ ಸ್ಥಾನ ಪಡೆದವರು ಎಸ್.ಎಲ್.ಭೈರಪ್ಪ ಅವರು. ತಮಗೆ ಸರಿಯೆಂದು ಕಂಡ ವಿಚಾರಗಳನ್ನೂ ನಿರ್ಭೀತಿಯಾಗಿ ಅನುಸರಿಸುವುದು ಅವರ ವ್ಯಕ್ತಿತ್ವ. ಕನ್ನಡ ಸಾಹಿತ್ಯ ಲೋಕದಲ್ಲಿ ಅವರು ಒಂಟಿ ಸಲಗ ಎಂಬಂತೆ ಸ್ವತಂತ್ರ ಚಿಂತನೆಯ ದಾರಿಯಲ್ಲಿ ನಡೆದು, ಇತರರ ಅಭಿಪ್ರಾಯಗಳಿಗೆ ಅತಿಯಾಗಿ ತಲೆಕೆಡಿಸಿಕೊಳ್ಳದೆ ತಮ್ಮದೇ ವೈಚಾರಿಕ ಮಾರ್ಗವನ್ನು ನಿರ್ಮಿಸಿಕೊಂಡವರು. ಅವರ ವೈಯಕ್ತಿಕ ಜೀವನದಲ್ಲಿಯೂ ಹಲವಾರು ಸವಾಲುಗಳು ಎದುರಾದ ಹಿನ್ನೆಲೆಯಲ್ಲಿ, ತಮ್ಮ ಅಂತಿಮ ಆಶಯಗಳ ಕುರಿತು ಟ್ರಸ್ಟ್‌ನ ಟ್ರಸ್ಟಿ ಸಹನಾ ವಿಜಯಕುಮಾರ್ ಅವರ ಮೇಲೆ ವಿಶ್ವಾಸವಿಟ್ಟು ಕೆಲವು ಜವಾಬ್ದಾರಿಗಳನ್ನು ಅವರಿಗೆ ನೀಡಬೇಕೆಂದು ತಿಳಿಸಿದ್ದರು ಎಂದು ವಿವರಿಸಿದರು.

ನಿರಂತರ ಪ್ರಯತ್ನ

ಭೈರಪ್ಪ ಅವರ ಆಶಯಗಳು, ಆದರ್ಶಗಳು ಮತ್ತು ಸಾಹಿತ್ಯಿಕ ಚಿಂತನೆಗಳನ್ನು ಮುಂದಿನ ಪೀಳಿಗೆಗೂ ತಲುಪಿಸುವ ಉದ್ದೇಶದಿಂದ ಈ ಟ್ರಸ್ಟ್ ಕಾರ್ಯನಿರ್ವಹಿಸುತ್ತಿದ್ದು, ಅವರ ವಿಚಾರಧಾರೆಯನ್ನು ಜೀವಂತವಾಗಿಡಲು ನಿರಂತರ ಪ್ರಯತ್ನ ನಡೆಸುತ್ತಿದೆ ಎಂದು ವಿಶ್ವೇಶ್ವರ ಭಟ್ ವಿವರಿಸಿದರು.

ನವಿರು ಪ್ರೇಮದ ನೈಜ ಚಿತ್ರಣ

ಕ್ರೈಸ್ತ ಧರ್ಮಕ್ಕೆ ಮತಾಂತರವಾದವರ ತೊಳಲಾಟದ ಚಿತ್ರಣವನ್ನು ನೈಜವಾಗಿ ಧರ್ಮಶ್ರೀ ಕಾದಂಬರಿಯಲ್ಲಿ ತೋರಿಸಲಾಗಿದೆ. ನವಿರಾದ ಪ್ರೇಮವನ್ನು ನೈಜವಾಗಿ ಚಿತ್ರಿಸಲಾಗಿದೆ. ಶುದ್ಧವಾದ ಪ್ರೀತಿಯನ್ನು ವಿಸ್ತೃತವಾಗಿ ನವಿರಾಗಿ ಹೇಳಲಾಗಿದೆ. ಹಿಂದುಗಳ ಸಂಕುಚಿತ ಭಾವನೆಯನ್ನು ಸಹ ಇದರಲ್ಲಿ ತಿಳಿಹೇಳಲಾಗಿದೆ. ಮತಾಂತರದ ಸಮಸ್ಯೆಯನ್ನು ಆಗಿನ ಕಾಲದಲ್ಲಿಯೇ ಧೈರ್ಯವಾಗಿ ಹೇಳಿದ್ದಾರೆ ಎಂದು ಜಿ.ಬಿ. ಹರೀಶ್ ಧರ್ಮಶ್ರೀ ಕುರಿತು ವಿವರಿಸಿದರು.

ಹೆದ್ದಾರಿ ಹಲಸಹಳ್ಳಿ ಬಳಿ ಆಕರ್ಷಕ ಘಂಟೆ ಹೂವು



• **ತಾವರೆಕೆರೆ:** ಬೇಸಿಗೆ ಬೇಗೆಯ ನಡು ವೆಯೂ ಹೆದ್ದಾರಿ ನಡುವೆ ಬೆಳೆದಿರುವ ಗಿಡ ಗಳಲ್ಲಿ ಬಣ್ಣಬಣ್ಣದ ಹೂವುಗಳು ಅರಳಿ ನಿಂತಿವೆ. ಇವುಗಳು ನೋಡುಗರ ಕಣ್ಣಿನ ಸೆಳೆಯುವಂತಿವೆ.

ಬೆಂಗಳೂರು ಚನ್ನೈ ರಾಷ್ಟ್ರೀಯ ಹೆದ್ದಾರಿ -75ರಲ್ಲಿ ತಾವರೆಕೆರೆ ಗ್ರಾಮ ಪಂಚಾಯಿತಿಯ ಗಂಗಾಪುರದ ಬಳಿ ಇರುವ ಸುಮಾರು ದೂರ ವಿಭಜಕದಲ್ಲಿ, ಹಳದಿ ಬಣ್ಣದ ಫಂಟೆ ಹೂವುಗಳು ಅರಳಿ ರಸ್ತೆಯ ಸೊಬಗು ಹೆಚ್ಚಿಸಿದೆ . ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೋಗುವ ವಾಹನಗಳ ಚಾಲಕರು ಹಾಗೂ ಕಣ್ಣಿಗೆ ಹೂವುಗಳು ಮುದ ನೀಡುತ್ತಿವೆ. ಕೆಲವರು ವಾಹನವನ್ನ ನಿಲ್ಲಿಸಿ ಪೋಟೋ ತೆಗೆದುಕೊಳ್ಳುವ ದೃಶ್ಯ ಕಂಡು ಬರುವವು. ಕೆಲವುರು ವಿಡೀಯೊ ಮಾಡಿ ತಮ್ಮ ಸ್ನೇಹಿತರಿಗೆ ಕಳುಹಿಸುವ ಪರಿಪಾಠವಾಗಿದೆ.

ದಿನ ನಿತ್ಯದಲ್ಲಿ ನೂರಾರು ಪ್ರಯಾಣಿಕರು ನಿತ್ಯದ ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದು ಆನಂದಿಸುತ್ತಿದ್ದಾರೆ. ಹೆದ್ದಾರಿ ಅಜುಬಾಜು ಹಾಗೂ ಮಧ್ಯದಲ್ಲಿ ಫಂಟೆ ಹೂವಿನ ಗಿಡಗಳು ಮನ ಸೆಳೆಯುತ್ತಿವೆ. ಬೈಗ್ನೋನಿಯೆಸಿಸ್‌ ಜಾತಿಗೆ ಸೇರಿದ ಹೂವು ಜೇನು ಹುಳು ಚಿಟ್ಟೆ , ಫಂಟೆ ಹೂವು ಹಕ್ಕಿಗಳನ್ನು ತನ್ನೆಡೆಗೆ ಆಕರ್ಷಿಸುತ್ತಿವೆ.

ಅರವಳಿಕೆ ಚುಚ್ಚುಮದ್ದು ನೀಡಿದ ವೈದ್ಯರು | ಹಗಲು ರಾತ್ರಿ ಕಾರ್ಯಾಚರಣೆ ಯಶಸ್ವಿ

ಬೇಲೂರು ಬಳಿ ಎರಡು ಕಾಡಾನೆ ಸೆರೆ



• **ಬೇಲೂರು:** ತಾಲೂಕಿನಲ್ಲಿ ಆತಂಕ ಸೃಷ್ಟಿಸಿದ್ದ ನರಹಂತಕ ಒಂಟಿಕೋರೆ ಕಾಡಾನೆಯನ್ನು ಸೆರೆಹಿಡಿಯುವ ಕಾರ್ಯಾಚರಣೆ ಮೂರನೇ ದಿನ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಕಳೆದ ಕೆಲವು ದಿನದಿಂದ ಕಾಡಾನೆ ಜನರಲ್ಲಿ ಭೀತಿ ಮೂಡಿಸಿತ್ತು. ಈ ದೈತ್ಯಾಕಾರದ ಕಾಡಾನೆಯನ್ನು ಹಿಡಿಯಲು ಅರಣ್ಯ ಇಲಾಖೆ ವಿಶೇಷ ತಂಡ ರಚಿಸಿ ಹಗಲು-ರಾತ್ರಿ ಕಾರ್ಯಾಚರಣೆ ನಡೆಸುತ್ತಿತ್ತು. ಶುಕ್ರವಾರ ಕಾರ್ಯಾಚರಣೆ ಆರಂಭಿಸಿದ ಅರಣ್ಯ ಇಲಾಖೆ ತಂಡವು ಬೇಲೂರು ತಾಲೂಕಿನ ಕಾನಳ್ಳಿ ಅರಣ್ಯ ಪ್ರದೇಶದಲ್ಲಿ ಕಾಡಾನೆ ಇರುವ ಸ್ಥಳವನ್ನು ನಿಖರವಾಗಿ ಪತ್ತೆಹಚ್ಚಿತು.

ಇಟಿಎಫ್ (ಎಲಿಫೆಂಟ್ ಟಾಸ್ಕ್ ಫೋರ್ಸ್) ಸಿಬ್ಬಂದಿ ಹಾಗೂ ಅನುಭವಿಗಳಾದ ಕುಮ್ಕಿ ಆನೆಗಳ ಸಹಾಯದಿಂದ ಕಾಡಾನೆಯನ್ನು ಸುತ್ತು ವರಿದು ನಿಯಂತ್ರಣಕ್ಕೆ ತರಲು ಕಾರ್ಯಾಚರಣೆ ಆರಂಭಿಸಲಾಯಿತು.

ಕಾರ್ಯಾಚರಣೆಯಲ್ಲಿ ಪ್ರಮುಖ ಘಟ್ಟವಾಗಿ ವೈದ್ಯರು ಕಾಡಾನೆಗೆ ಅರವಳಿಕೆ ಚುಚ್ಚುಮದ್ದು ನೀಡಿದರು. ಇಂಜೆಕ್ಷನ್ ನೀಡುತ್ತಿದ್ದಂತೆಯೇ, ಒಂಟಿಕೋರೆ ಕಾಡಾನೆ ಹಾಗೂ ಅದರ ಜತೆಯಲ್ಲಿದ್ದ ಕ್ಯಾಪ್ಟನ್ ಕಾಡಾನೆ ಏಕಾಏಕಿ ಓಡಲು ಆರಂಭಿಸಿತು. ಇದರಿಂದ ಕೆಲಕಾಲ ಗೊಂದಲ ಉಂಟಾದರೂ, ಕಾರ್ಯಾಚರಣಾ ತಂಡ ಸಮರ್ಥವಾಗಿ ಎರಡೂ ಕಾಡಾನೆಯನ್ನು ಬೇರ್ಪಡಿಸುವಲ್ಲಿ ಯಶಸ್ವಿಯಾಯಿತು.

ಸ್ವಲ್ಪ ದೂರ ಓಡಿದ ಬಳಿಕ ಅರವಳಿಕೆ ಪರಿಣಾಮದಿಂದ ನರಹಂತಕ ಕಾಡಾನೆ ಪ್ರಜ್ಞೆ ತಪ್ಪಿ ನೆಲಕ್ಕುರುಳಿತು. ತಕ್ಷಣವೇ ಕುಮ್ಕಿ ಆನೆಗಳು ಕಾಡಾನೆಯನ್ನು ಸುತ್ತುವರಿದು ಭದ್ರತೆ ಒದಗಿಸಿತು. ನಂತರ ಸಿಬ್ಬಂದಿ ಕಾಡಾನೆಗೆ ನೀರು ಹಾಕಿ ಆರೈಕೆ ನಡೆಸಿ, ಸುರಕ್ಷಿತವಾಗಿ ಹಗ್ಗ ಕಟ್ಟುವ ಮೂಲಕ ಸ್ಥಳಾಂತರಕ್ಕೆ ಸಿದ್ಧತೆ ನಡೆಸಿದರು.

ಈ ಯಶಸ್ವಿ ಕಾರ್ಯಾಚರಣೆಯಿಂದ ಹಲವು ದಿನದಿಂದ ಆತಂಕದಲ್ಲಿದ್ದ ಬೇಲೂರು ಭಾಗದ ಜನರು ನಿಟ್ಟುಸಿರು ಬಿಟ್ಟಿದ್ದಾರೆ. ಅರಣ್ಯ ಇಲಾಖೆ ಧೈರ್ಯಶಾಲಿ ಕ್ರಮ ಹಾಗೂ ಸಮನ್ವಯದಿಂದ ದೊಡ್ಡ ಅಪಾಯ ತಪ್ಪಿದಂತಾಗಿದೆ. ಸ್ಥಳಾಂತರದ ನಂತರ ಕಾಡಾನೆಯನ್ನು ಸುರಕ್ಷಿತ ಅರಣ್ಯ ಪ್ರದೇಶಕ್ಕೆ ಕಳುಹಿಸುವ ಯೋಜನೆ ರೂಪಿಸಲಾಗಿದೆ. ಮುಂದಿನ ಕ್ರಮವನ್ನು ಇಲಾಖೆ ಕೈಗೊಂಡಿದೆ.

IN THE COURT OF THE PRINCIPAL DISTRICT & SESSION JUDGE AT CHICKBALLAPUR.
P & SC No.23/2026.

Petitioners : 1. Smt. Venkateshamma, W/o late Venkateshappa, aged about 44 years R/at Cheemangala village, Jangamakote hobli, Sidlaghatta taluk, Chickballapur District. **2. Sri. Aravinda** S/o late Venkateshappa, Aged about 20 years, Both are residents of Cheemangala village, Jangamakote hobli, Sidlaghatta taluk, Chickballapur District.

V/S

Respondents : 1. Smt. Anjinamma D/o late Gangappa, W/o Chikka Ajjappa Aged about 61 years, R/at Mannarapura village, Nandi hobli, Chickballapur taluk. **2. Smt. Lakshmamma** D/o late Gangappa, W/o Venkateshappa Aged about 59 years, R/at Dalasagere village, Nandagudi hobli, Hosakote taluk, Bengaluru Rural District. **3. Sri. Narasimha Murthy** S/o late Gangappa aged about 56 years, R/at Cheemangala village, Jangamakote hobli, Sidlaghatta taluk, Chickballapur District. **4. Smt. Munirathnamma** D/o late Gangappa, W/o Muniyappa, Aged about 54 years, R/at Salappanahalli village, Nandagudi hobli, Hosakote taluk, Bengaluru Rural District. **5. Smt. Muni Anjinamma** D/o late Gangappa W/o Munirajappa Aged about 50 years, R/at Pathuru village, Nandagudi hobli, Hosakote taluk, Bengaluru Rural District. **6. Sri. Adarsha** S/o Narasimha Murthy Aged about 20 years, Cheemangala village, Jangamakote hobli, Sidlaghatta taluk, Chickballapur District.

PAPER PUBLICATION

WHEREAS, the Petitioners have filed this petition for the grant of Probate Certificate under section 276 and 295 of the Indian Succession Act pertaining to the registered Will dated: 12-03-2012 and the same was registered Vide No.SDG-3-00114-2011-12 executed by Gangappa, S/o Late. Narasimhaiah in respect of the schedule. property. The said Gangappa, S/o Late. Narasimhaiah demised on.05-08-2017 at Any interested parties may appear before the Hon'ble Court in person or duly instructed by his Advocate **on. 02.05.2026** 11:00 AM if he/she failed to appear before the Hon'ble Co on such pa 06 2026 date the Hon'ble Court will decide the matter according to Law.

SCHEDULE

1. Property bearing Sy.No.82/18, measuring 1-38 guntas, assessed situated at Rs.2.38, out of which 0-38 guntas, Narayanadasarahalli village, Jangamakote hobli, Sidlaghatta taluk, bounded on : East by : Government Road, West by : Land of Kittanna, North by : Land of Narasimhamurthy, South by : Land of Hanumantharayappa.
2. Property bearing House List No.VPDR 90, Property No.144, consisting of stone slab roof house, out of which eastern half hissa, situated at Cheemangala village, Jangamakote hobli, Sidlaghatta taluk bounded on: East by : VPDR No. 90/145 vacant site, West by : Remaining property in the same property, South by : Road and house of Doddanagappa, North by : Government Halla.
3. Property bearing House List No.VPDR 90, Property No. 145, consisting of vacant site, out of which eastern half hissa, situated at Cheemangala village, Jangamakote hobli, Sidlaghatta taluk bounded on: East by : Government Road, West by : Remaining property in the same property, North by : Road and house of Hanumantharayappa, South by : Nagappa's vacant site. Given under by hand seal of the court on the day of a 5th day of march-2026.

By Order of the Court
Chief Administrative Officer Principal District & Sessions Court Chickaballapur.
advocate for service: **Sri. Manjunatha K M** Advocate, Chickaballapur.

ಮಾನ್ಯ ನಾಗಮಂಗಲದ ಸೀನಿಯರ್ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ.
[illegible]/2026.

[illegible]

ಪತ್ರಿಕಾ ಪ್ರಕಟಣೆ

[illegible] ದಿನಾಂಕ:18/04/2026 ರಂದು [illegible].

[illegible]

BEFORE THE HON'BLE COURT OF THE ADDL. SMALL CAUSES COURT AT MYSURU.
M.V.C. No.936/2025.

Petitioner : Sri. Puttegowda S/o Kempaveeregowda, Aged about 46 years, R/at. Kaniyanhundi Village, G.B.Saraguru Post, Hampapura Hobli, H.D. Kote Taluk, Mysuru Dist.

V/S

Respondent : Sri. Manu and others.
R1. Sri. Manu. M. S/o Mahadevagowda, Aged about 36 years, R/at. Lakshmipur Village, Hunasuru Taluk, Mysuru Dist. **(Driver of the Vechicle Bearing Regn. No.KA-11-C7479)**

PAPER PUBLICATION

Whereas, The Above Named Petitioner has made Petition under section 166 of the Motor Vehicle Act, against the respondents for seeking Compensation for the grievous injuries sustained by him a Motor Vehicle accident.

You, the Respondent No.1 is hereby warned to appear in the Court in person or by a pleader duly instructed **on :28/5/2026** at 11.00 o" Clock in the forenoon to show-cause against the petition will be heard and determined Ex-parte.

Given under my hand and seal of the court this 17 day of April 2026.

By Order Of the Court
CHIEF ADMINISTRATIVE OFFICER, PRL SMALL CAUSES COURT, MYSURU.
Advocate for Petitioner : **Shankar.K,** No.2513,CH34, 2 Floor, Room No.5 New Kantharaje Urs Road. K.G.Koppalu, Mysuru.

IN THE COURT OF THE SENIOR CIVIL JUDGE& JMFC AT ANEKAL
O.S.No.1173/2024

BETWEEN:
Smt. Mala N. ....PLAINTIFF
AND:
Smt. Narayanappa and others ....DEFENDANTS

SUMMONS TO THE DEFENDANT No.7

To,
Smt. V. Anusha D/o V. Penchalaiah Aged about 40 years R/at No 44/45, 2nd Floor, Vinayaka Complex, Residency Cross Road, Bangalore-25. .... **DEFENDANT No.7**

The above named plaintiff as instituted suit in O.S.No.1173/2024 before the Hon'ble Civil Judge (Sr.Div) at Anekal, Bangalore urban District against you for the relief of Partition and other relief's. The case is posted for hearing on 29-7-26 Therefore you are hereby summoned to appear before this court **on: 9-7-2026 at 11.00.a.m.** in person or through a pleader duly instructed to answer the same without fail, failing which the case will heard and determined in your absence.

Given under my hand and seal of this court **25th day of march 2026.**

By Order Of Court
Chief Ministerial Officer
Senior Civil Judge & JMFC Court Anekal
Address for Service :
H.A.CHITRASHEKARAIAH, Advocate,
No.1, Vijaykumar Layout, Attibele Road, Anekal, Bengaluru -562106

ಕರ್ನಾಟಕ ಸರ್ಕಾರ

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ
ಉಪ ವಿಭಾಗ ಆಸ್ಪತ್ರೆ, ಗಂಗಾವತಿ-583227 ಜಿ॥ ಕೊಪ್ಪಳ
ದೂರವಾಣಿ :08533-230102/230103, e-mail: sdh.gangavathi@gmail.com

ಸಂಖ್ಯೆ:ಉವಿಆಗಂ/ಎಮ್ ಸಿಹೆಚ್/ಪಥ್ಯಾಹಾರ/10/2026-27 ದಿನಾಂಕ: 16/04/2026

ಇ ಪ್ರೊಕ್ಯೂರ್‌ಮೆಂಟ್ ಟೆಂಡರ್

ವಿಷಯ:- ಉಪ ವಿಭಾಗ ಆಸ್ಪತ್ರೆ ಗಂಗಾವತಿಗೆ ಪಥ್ಯಾಹಾರ ವಸ್ತುಗಳು ಪೂರೈಕೆಗಾಗಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆದಿರುವ ಬಗ್ಗೆ.
ಉಲ್ಲೇಖ:- ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ಕಡತ ಅನುಮೋದನೆ ದಿನಾಂಕ:- 07/04/2026

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಪ ವಿಭಾಗ ಆಸ್ಪತ್ರೆ ಗಂಗಾವತಿ ಕೊಪ್ಪಳ ಜಿಲ್ಲೆಯಲ್ಲಿ **2026-27** ನೇ ಸಾಲಿಗಾಗಿ ಪಥ್ಯಾಹಾರ ವಸ್ತುಗಳು ಅಂದಾಜು ಮೊತ್ತ **ರೂ:-53,74,366.00** ಗಳ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ. ಟೆಂಡರ್ ಮಾಹಿತಿ ಈ ಕೆಳಗಿನಂತಿರುತ್ತದೆ.
1) ಟೆಂಡರ್ ಸಲ್ಲಿಸಲು ಪ್ರಾರಂಭ **ದಿನಾಂಕ: 18.04.2026.** 2) ಟೆಂಡರ್ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ **ದಿನಾಂಕ: 30.04.2026** ರಂದು **ಸಂಜೆ 4.00 ಗಂಟೆಯೊಳಗೆ.** 3) ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 16.05.2026** ರಂದು **ಸಂಜೆ 4.30 ಗಂಟೆಯೊಳಗೆ.** 4) ಮಾದರಿ ಸಲ್ಲಿಸುವ **ದಿನಾಂಕ: 18.05.2026 ರಂದು** ಕಚೇರಿ ಸಮಯದಲ್ಲಿ **ಸಂಜೆ 4.30 ಒಳಗೆ.** 5) ಟೆಂಡರ್ ತಾಂತ್ರಿಕ ಬಿಡ್ಡು ತೆರೆಯುವ **ದಿನಾಂಕ: 19.05.2026** ರಂದು **ಸಂಜೆ 4.31 ಗಂಟೆ.** 6) **https://kppp.karnataka.gov.in/: DHFWS/2026-27/IND2422.**
ಹೆಚ್ಚಿನ ಮಾಹಿತಿಗಾಗಿ ಕಚೇರಿಯ ವೇಳೆಯಲ್ಲಿ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು
ಉಪ ವಿಭಾಗ ಆಸ್ಪತ್ರೆ ಗಂಗಾವತಿ ಜಿ॥ ಕೊಪ್ಪಳ.
ವಾ.ಸಾ.ಸಂ.ಇ/ಕೊಪ್ಪಳ/41/ ಡಿಜಿಟಲ್‌ಜಾಹೀರಾತು/2026-27

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ ಸಂಖ್ಯೆ 080-22112809
ಸಂ.ಕಾ.ಇಂ(ವಿ)/ಲೋ.ಇ/ವಿದ್ಯುತ್/2026-27/79 ದಿನಾಂಕ: 16.04.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಯನ್ನು **KW-3 STD** ಷರತ್ತುಗೊಳಪಟ್ಟಂತೆ ಮೊದಲನೆ ಟೆಂಡರ್ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಕೆಳಕಂಡಂತಿವೆ.

Sl. No.	Work Indents	Work Value (Rs. in Lakhs)
1	Providing LAN Connection to Court building at Chikkamagalur PWD/2025-26/EL/WORK_INDENT 34712.	63.55

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು **ದಿನಾಂಕ: 13.04.2026** ರಿಂದ **28.04.2026, 16:00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ **ದಿನಾಂಕ: 28.04.2026 ರಂದು 16:00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು **Karnataka Public Procurement Portal** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ).
ವಾಸಾಸಂಇ/ಅನಿ-ಸಿ.ಪಿ/260/ಸಿಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ (ಸಹಕಾರ ಇಲಾಖೆ)

ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತಿಪಟೂರು.
ದೂ.: 08134-254414. ಮಾರಾಟಾಧಿಕಾರಿ : ಟಿ. ಸಿ. ರವಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,

ಸ್ಥಿರಾಸ್ತಿ ಬಹಿರಂಗ ಹರಾಜು ಮಾರಾಟ ಪ್ರಕಟಣೆ

[illegible]

ಕ್ರ. ಸಂ	ಹೆಸರು ಮತ್ತು ವಿಳಾಸ	ಸಾಲಗಾರರ ಭಾವಚಿತ್ರ	ಇ.ಪಿ.ಸಂ ಮತ್ತು ದಾವಾ ಸಂಖ್ಯೆ	15-04-2026 ಕ್ಕೆ ಬರಬೇಕಾದ ಸಾಲದ ಅಸಲು ಮತ್ತು ಬಡ್ಡಿ	ಹರಾಜು ಮಾಡುವ ದಿನಾಂಕ-ವಾರ, ವೇಳೆ ಮತ್ತು ಸ್ಥಳ
1	[illegible]		[illegible] 129/2025-26.	8,07,766/- + [illegible]	22-05-2026ರ [illegible] 11-00 ಗಂಟೆಗೆ, [illegible]

ಹರಾಜು ಮಾಡುವ ಷೆಡ್ಯೂಲ್ ಸ್ವತ್ತಿನ ವಿವರ

[illegible]

ಹರಾಜಿನ ಷರತ್ತುಗಳು :

[illegible]

ಸ್ಥಳ : ತಿಪಟೂರು,
ದಿನಾಂಕ : 15-04-2026.

ಸಹಿ/- ಮಾರಾಟಾಧಿಕಾರಿ
ಟಿ. ಸಿ. ರವಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತಿಪಟೂರು.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ

No.EE/MID/VJP/AE-1,4/4702 & 4711/TND/2026-27/167 **Date:17.04.2026**

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ-ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು :- ಒಟ್ಟು 1 ಕಾಮಗಾರಿ(3ನೇ ಕರೆ), ಟೆಂಡರಿಗಿಟ್ಟ ಮೊತ್ತ **ರೂ.451.77ಲಕ್ಷಗಳು. ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು(11) ತಿಂಗಳುಗಳು.**

4711 ಪ್ರವಾಹ ಸಂರಕ್ಷಣಾ ಕಾಮಗಾರಿಗಳು :- ಒಟ್ಟು 1 ಕಾಮಗಾರಿ, ಟೆಂಡರಿಗಿಟ್ಟ ಮೊತ್ತ **ರೂ.24.21ಲಕ್ಷಗಳು. ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

4702 ಎಸ್.ಸಿ.ಪಿ. ಕಾಮಗಾರಿಗಳು :- ಒಟ್ಟು 8 ಕಾಮಗಾರಿಗಳು, ಟೆಂಡರಿಗಿಟ್ಟ ಮೊತ್ತ **ರೂ.492.51ಲಕ್ಷಗಳು. ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳುಗಳಿಂದ ಹನ್ನೊಂದು(11) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ-ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **18.04.2026** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ-ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **27.04.2026** ರ 17-30 ಘಂಟೆವರೆಗೆ ಸ್ವೀಕರಿಸಲಾಗುವದು. ದಿನಾಂಕ: **22.04.2026** ರಂದು ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ-ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ: **24.04.2026** ರ 17-30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ "ಇ-ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ(ಫೋನ:-080-25501216 ಮತ್ತು 080-25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ
ವಾಸಾಸಂಇ/ವಿಜಯಪುರ/48/ಸಿಎಸ್‌ಎಂಸಿಎ/2026-27

ಜಾಹೀರಾತಿಗಾಗಿ ಸಂಪರ್ಕಿಸಿ :
9845438807
9611755391

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಕಬಿನಿ ಜಲಾಶಯ ವಿಭಾಗ,
ಕಬಿನಿ ಕಾಲೋನಿ, ಹೆಚ್.ಡಿ.ಕೋಟೆ ತಾ॥, ಮೈಸೂರು ಜಿಲ್ಲೆ
Ph/ Fax: 08228-268378,
e-mail: xekrdhdk@yahoo.com
ಸಂ: ಕಾ.ಇಂ/ಕ.ಜ.ವಿ/ಯೋ.ಶಾ/ ಟೆಂಡರ್ ಪ್ರಸಂ.01/2026-27 ದಿ: 16.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27, ದಿನಾಂಕ: 16.04.2026

(ಕೆಪಿಪಿ ಪೋರ್ಟಲ್ ಮೂಲಕ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕನಿಷ್ಠ ಮೊತ್ತ ರೂ.1.90 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.65.85 ಲಕ್ಷದ ಒಟ್ಟು 15 ಕಾಮಗಾರಿಗಳನ್ನು ಅರ್ಹ ವರ್ಗದ ನೋಂದಾಯಿತ ಗುತ್ತಿಗೆದಾರರು/ ಸಂಸ್ಥೆಯವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕೆ.ಪಿ.ಪಿ ಪೋರ್ಟಲ್ ನಲ್ಲಿ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕಡೆಯ ದಿ: 24.04.2026 ಸಾ:5.30 ಗಂಟೆವರೆಗೆ ಮತ್ತು ಬಿಡ್ಡು ತೆರೆಯುವ ದಿ: 27.04.2026ರ ಬೆ:10.30 ಗಂಟೆ ನಂತರ ನಿಗಧಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ವೆಬ್‌ಸೈಟ್ https://kppp.karnataka.gov.in/kppp ನಿಂದ **ದಿ: 17.04.2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸರ್ಕಾರದ ಪತ್ರ ಸಂಖ್ಯೆ ಜಸಂಇ 94, ಎಂಬಿಐ 2017 **ದಿ: 29.07.2017**ರ ಅಧಿಸೂಚನೆಯನ್ವಯ ಮೀಸಲಾತಿ ನಿಯಮ ಪಾಲಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ.
DIPR/DDMYS/72/KSMCA/057/2026-27

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಕುಮಟಾ (ಉ.ಕ)

ದೂರವಾಣಿ: 808386-222212 ಇಮೇಲ್: adakumta@gmail.com

ಸಂ:ಸಕೃನಿ(ಕು)/ಆಡಳಿತ/ಇ-ಪೋರ್ಟಲ್/ಹೊ.ಗು.ಸಿ.ಸೇ/2026-27 ದಿನಾಂಕ: 17-04-2026

ಟೆಂಡರ್ ಪ್ರಕಟಣೆ (ಇ ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 2000 ರನ್ವಯ ಸರಕಾರದಿಂದ ನೋಂದಾಯಿಸಲ್ಪಟ್ಟ ಅರ್ಹ ಸಂಸ್ಥೆಯವರು 2026-27 ನೇ ಸಾಲಿಗೆ ಈ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ರೈತ ಸಂಪರ್ಕ ಕೇಂದ್ರಗಳಿಗೆ ದಾಸ್ತಾನು ನಿರ್ವಹಣಾ ಸಿಬ್ಬಂದಿ, ಈ ಕಚೇರಿಗೆ ಗ್ರೂಪ್ "ಡಿ" ಸಿಬ್ಬಂದಿಗಳನ್ನು ಒದಗಿಸಲು ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.kppp.karnataka.gov.in ವೆಬ್‌ಸೈಟ್ ಮುಖಾಂತರ ಇ ಟೆಂಡರ್‌ನಲ್ಲಿ ಭಾಗವಹಿಸುವುದು. ಇ ಟೆಂಡರ್ ಗೆ ಸಂಬಂಧಿಸಿದಂತೆ ಮಾಹಿತಿಗಾಗಿ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. ಹಾಗೂ ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ವೆಬ್‌ಸೈಟ್‌ನಲ್ಲಿ Tender No: AD/2026-27/SE0505 ಮತ್ತು ಈ ಕಛೇರಿಯಲ್ಲಿ ಪಡೆಯಬಹುದು.

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿವೆ.

(1) ಟೆಂಡರ್ ಕರೆದ ವಿವರ: ಹೊರಗುತ್ತಿಗೆ ಆಧಾರದ ಮೇಲೆ ಈ ಕಾರ್ಯಾಲಯಕ್ಕೆ ಡಿ ಗ್ರೂಪ್ ಹಾಗೂ ರೈತ ಸಂಪರ್ಕ ಕೇಂದ್ರಗಳಿಗೆ ದಾಸ್ತಾನು ನಿರ್ವಹಣಾ ಸಿಬ್ಬಂದಿ, ಹುದ್ದೆಗೆ ಸೇವೆ ಪೂರೈಸುವ ಕುರಿತು, (2) EMD ಮೊತ್ತ: 31960=00 (3) ಇ-ಟೆಂಡರ್ ನಲ್ಲಿ ಭಾಗವಹಿಸಲು ಪ್ರಾರಂಭವಾಗುವ ದಿನಾಂಕ: 17-04-2026. (4) ಇ-ಟೆಂಡರ್ ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ ಮತ್ತು ಸಮಯ: 16-05-2026 ಸಮಯ 4.00 ಘಂಟೆ. (5) ಇ-ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 18-05-2026 ಸಮಯ 4.00 ಘಂಟೆ. (6) ಇ-ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 25-05-2026 ಸಮಯ 12.30 ಘಂಟೆ.

ಸಹಿ/-ಸಹಾಯಕ ಕೃಷಿ ನಿರ್ದೇಶಕರು,
ಕುಮಟಾ (ಉ.ಕ)

DIPR/KWR/KSMCA/61/26-27 Dt.18.04.2026

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನೀಯರವರ ಕಛೇರಿ ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಸಿ.ಡಿ. ವೃತ್ತ, ಗಣಪತಿ ದೇವಸ್ಥಾನದ ಹಿಂದುಗಡೆ, ದಾಸನಕೊಪ್ಪ ಮುಖ್ಯ ರಸ್ತೆ, ಧಾರವಾಡ-580 001.
ಫೋನ: 0836-2955347 ಇ-ಮೇಲ್: eesliddwd@gmail.com

No.KNNL/SLID/DWD/PB-1/Shiggaon-Additional/Tender/2026-27/45 Dt : 18-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (3ನೇ ಕರೆ)
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ:1. KNN/SLID/DWD/PB-1/Savanur-Additional/Tender 2025-26/884, Dated: 21-01-2026
2. KNNL/SLID/DWD/PB-1/Shiggaon-Additional/Tender/2025-26/968, Dated:16-02-2026

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ. ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ "Filling up of Additional 26 Tanks under Shiggaon Lift Irrigation Scheme"(Extension of Hotanhalli and Chandapura Tank Filling Scheme) (i) **Package–1** : Pumping Machinery and Construction of Sump Cum Pump House and Construction of substation & Construction of tapping point and erection of 11kV SC Line and O & M for 5 years (Amount put to tender Rs. **349.89** Lakhs) (ii) **Package–2** : Construction of Rising main for a length of 7.760 Km of HDPE Pipe for extension of Hothanahalli tank filling scheme and O & M for 5 years (Amount put to tender Rs. **413.27** Lakhs) (iii) **Package–3** : Construction of Bleeder 1,2,3,4,5,6,7 & 8 Distribution of HDPE and Construction of Gravity Distribution Network of Chandapura Tank Filling Scheme and O & M for 5 years (Amount put to tender Rs. **420.86** Lakhs)"

ಒಟ್ಟು 3 ಸಂಖ್ಯೆಯ ಕಾಮಗಾರಿಗಳಿಗೆ ಟರ್ನಕೀ ಆಧಾರದ ಮೇಲೆ ದ್ವಿ-ಲಕೋಟೆ ಪದ್ಧತಿಯ ಮುಖಾಂತರ ಕೆ.ಪಿ.ಪಿ.-ಪೋರ್ಟಲ್‌ನಲ್ಲಿ ಪ್ರತ್ಯೇಕವಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಕೆ.ಪಿ.ಪಿ.-ಪೋರ್ಟಲ್ ವೆಬ್‌ಸೈಟ್ (http://kppp.karnataka.gov.in) ಮುಖಾಂತರವೇ ದಿನಾಂಕ: **24/04/2026** ಬೆಳಿಗ್ಗೆ 11.00 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: **08/05/2026**ರ ಸಂಜೆ 4.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ ಪೂರ್ವಭಾವಿ ಸಭೆಯನ್ನು ದಿನಾಂಕ **04/05/2026** ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ ಕಾರ್ಯನಿರ್ವಾಹಕ ಇಂಜನೀಯರರು , ಕನೀನಿನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರಗಳನ್ನು ದಿನಾಂಕ: **11/05/2026** ರಂದು ಬೆಳಿಗ್ಗೆ 11.00 ಘಂಟೆಗೆ ಹಾಗೂ ಆರ್ಥಿಕ ಟೆಂಡರ್‌ಗಳನ್ನು ದಿನಾಂಕ: **15/05/2026** ರಂದು ಬೆಳಿಗ್ಗೆ 11.00 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ (KPP-portal) ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಸಹಿ/- (ಮಂಜುನಾಥ.ಬಿ.) ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ,
ವಾಸಾಸಂಇ/ಧಾ/ಕೆಎಸ್‌ಎಂಸಿಎ/70/2026-27 ಧಾರವಾಡ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ

Phone No: 08372-238782 Fax No. 08372-237268
E.Mail : eepwdgad@gmail.com

ಸಂ:ಕಾನಿಇಂಗ:ಲೋಇ:ಹಿಬಿ- 1 2 4 5 :ವಿವಿಧ: 2026-27/201
ದಿನಾಂಕ : 17-04-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು 2195.00 ಲಕ್ಷ ಮೊತ್ತದಲ್ಲಿ ಒಟ್ಟು 11 ಕಾಮಗಾರಿಗೆ (ಕನಿಷ್ಠ ಮೊತ್ತ ರೂ: 100.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ: 900.00 ಲಕ್ಷ) ಕೆಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿ (kppp) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯು-1, 3, ಹಾಗೂ 4ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http:// www. kppp. Karnataka. gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No: Part-1 : 32770, 32773-SC, 32781-Category-I, 32783-SC, 32780-Category-2A, 32763-SC, 32765-SC, 31697/call-2, 35034

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : 27-04-2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 29-04-2026 ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30-04-2026. ಆರ್ಥಿಕ ಬಿಡ್ ತೆರೆಯುವ ದಿನಾಂಕ : 02-05-2026.

Work Indent No : Part-2 : 34882, 33917

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : 02-05-2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 04-05-2026 ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05-05-2026. ಆರ್ಥಿಕ ಬಿಡ್ ತೆರೆಯುವ ದಿನಾಂಕ : 06-05-2026.

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ,
ವಾಸಾಸಂಇ/ಗದಗ/ಕೆಎಸ್‌ಎಂಸಿಎ/31/2026-27 ಗದಗ

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470 / 27935412
Email: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/01/2026-27 ದಿನಾಂಕ: 18.04.2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಶ್ರೀ ಎಂ. ಕೃಷ್ಣಾರೆಡ್ಡಿ ಬಿನ್ ಲೇ. ಮುನಿರೆಡ್ಡಿ ಇವರು ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಮುತ್ಸಂದ್ರ ಗ್ರಾಮದ ಸ.ನಂ. 142/1 ರ ಪೈಕಿ 37 1/2 ಗುಂಟೆ ವಿಸ್ತೀರ್ಣದ ಜಮೀನನ್ನು **"ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು/ ಬರುತ್ತಿದ್ದು, "ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ/ ಇತರರಿಗೆ/ ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-,
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ವಾಸಾಸಂಇ/ಬಾಪ್ರ/ಬೆಗ್ರಾ/266/2026-27 ಹೊಸಕೋಟೆ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಸಂ:ಕಾಇಂ/ಕಾನೀನಿನಿ/ಹಾನಾವಿ/ಪಿಬಿ/ಟೆ.ಪ್ರ/01/2026-27/39
ದಿನಾಂಕ:06.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:01/2026-27 ದಿ:06.04.2026
(ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಈ ಕೆಳಗೆ ನಮೂದಿಸಿರುವ ಸೇವೆಗಳಿಗೆ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ/ ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ/ಕಾರ್ಮಿಕ ಇಲಾಖೆಯಲ್ಲಿ ಸೂಕ್ತ ದರ್ಜೆಯಲ್ಲಿ ನೊಂದಾಯಿಸಿ ನೋಂದಾವಣಿ ಚಾಲ್ತಿಯಲ್ಲಿರುವ ಅರ್ಹ ಗುತ್ತಿಗೆದಾರರಿಂದ ಒಟ್ಟುಮೊತ್ತ ದರದಲ್ಲಿ 07 ಸಂಖ್ಯೆಯ ಸೇವೆಗಳ ಅಂದಾಜು ಮೊತ್ತ ಕನಿಷ್ಠ **ರೂ.22.19 ಲಕ್ಷದಿಂದ ಗರಿಷ್ಠ ರೂ.33.37** ಲಕ್ಷಗಳವರೆಗೆ ಮುಂಗಡ ಠೇವಣಿ (ಇ.ಎಂ.ಡಿ) ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇ-ಪ್ರೊಕ್ಯೂರ್‌ಮೆಂಟ್ 2.0 ನಲ್ಲಿ ತಿಳಿಸಿರುವಂತೆ.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು ಈ ಕೆಳಕಂಡಂತಿವೆ:

1. ಖಾಲಿ ಟೆಂಡರ್ ಫಾರಂಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ **ದಿನಾಂಕ :15.04.2026** ರ ನಂತರ.
2. ಭರ್ತಿ ಮಾಡಿದ ಟೆಂಡರ್‌ನ್ನು ಮತ್ತು ಇ.ಎಂ.ಡಿ ಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ **ದಿನಾಂಕ:27.04.2026 ಸಂಜೆ 4.00** ಗಂಟೆಯವರೆಗೆ)
3. ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್ ಮೂಲಕ ಸ್ವೀಕೃತವಾಗುವ ಟೆಂಡರ್‌ಗಳ ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ:28.04.2026 (ಸಂಜೆ 4.10** ಗಂಟೆಯ ನಂತರ)

ಸೇವೆಗಳಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು, ಸೂಚನೆಗಳು ಮತ್ತು ನಿಬಂಧನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ 2.0 ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಕಾ.ನೀ.ನಿ.ನಿ.,
ಹಾರಂಗಿ ನಾಲಾ ವಿಭಾಗ, ಸಾಲಿಗ್ರಾಮ

DIPR/DDMYS/069/KSMCA/064/2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ವಿಭಾಗ ಕಾರ್ಯಾಲಯ, ಹಬ್ಬುವಾಡಾ-ಕಾರವಾರ, ಉತ್ತರ ಕನ್ನಡ ಜಿಲ್ಲೆ-581301.
ದೂರವಾಣಿ: 08382-228935 ಫ್ಯಾಕ್ಸ್: 229735 E-mail: eerdwsd.uk@gmail.com

ಸಂ: ಕಾನಿಇಂ/ಗ್ರಾಕುನೀನೈವಿ/ಕಾರವಾರ/PMC/ಅಲ್ಪಾವಧಿ ಟೆಂಡರ ಪ್ರಕಟಣೆ/2026-27/79 ದಿನಾಂಕ: 18/04/2026

ಅಲ್ಪಾವಧಿ ಟೆಂಡರ್ ಪ್ರಕಟಣೆ (KPP Portal ಮೂಲಕ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿ ಹಾಗೂ ಉಪವಿಭಾಗಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲು ತಾತ್ಕಾಲಿಕವಾಗಿ ಒಂದು ವರ್ಷದ (12 ತಿಂಗಳು) ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಅಗತ್ಯ ತಾಂತ್ರಿಕ ಸಿಬ್ಬಂದಿ ಸೇವೆಯನ್ನು Project Manahement Consultancy (PMC) ಮೂಲಕ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-1999 ಹಾಗೂ ನಿಯಮ-2000 ರಂತೆ ತತ್ಸಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು KPP ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರ್‌ಗಳನ್ನು ಆಹ್ವಾನಿಸಿದೆ. ಗ್ರಾ.ಕು.ನೀ. & ನೈ. ಇಲಾಖೆಯಡಿ ನೋಂದಾಯಿತ / ಎಂಪಾನೆಲ್ಡ್ ತಾಂತ್ರಿಕ ಸಂಸ್ಥೆ/ಏಜೆನ್ಸಿಗಳು ಅಥವಾ ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಲ್ಪಟ್ಟ ಮಾನವ ಸಂಪನ್ಮೂಲ ಸಂಸ್ಥೆ /ಏಜೆನ್ಸಿಗಳಿಂದ ಟೆಂಡರ್ ನಿಯಮಾವಳಿಗಳಂತೆ https://kppp.karnataka.gov.in KPP ಪೋರ್ಟಲ್‌ನಲ್ಲಿ ಪ್ರಕಟಿಸಿದಂತೆ ದಿನಾಂಕ ಮತ್ತು ಇನ್ನಿತರೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರನಲ್ಲಿ ಭಾಗವಹಿಸುವುದು. ವಿವರ ಈ ಕೆಳಗಿನಂತಿವೆ.

ವಿವರ: INDENT NUMBER: RWSSD/2026-27/SE0873

(1) ಟೆಂಡರ್ ದಾಖಲಾತಿಗಳನ್ನು KPP ಪೋರ್ಟಲ್ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ: 19/04/2026 ರಿಂದ 28/04/2026 ರ 16.30 ಗಂಟೆಯವರೆಗೆ (2) ಟೆಂಡರುಗಳನ್ನು KPP ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 28/04/2026 ರ 16.30 ಗಂಟೆಯವರೆಗೆ (3) ಟೆಂಡರಗಳನ್ನು ತೆರೆಯುವ ದಿನಾಂಕ: 29/04/2026 ರಂದು 17.00 ಗಂಟೆಯ ನಂತರ. ಉಳಿದ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ಗ್ರಾ. ಕು. ನೀ. ಮತ್ತು ನೈ. ವಿಭಾಗ,
ಕಾರವಾರ (ಉ. ಕ. ಜಿಲ್ಲೆ)

DIPR/KWR/KSMCA/60/26-27 dt.18.04.2026

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ.
ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ. ದೂರವಾಣಿ: 08426-281027.
ಇ-ಮೇಲ್: dam_division@rediffmail.com

ಸಂ:ಕೃಭಾಜನಿನಿ/ಆವಿಆ/ಪಿಬಿ-I/2025-26/84 ದಿನಾಂಕ:16.04.2026

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Item Rate & Percentage basis from the eligible contractors for the work indents of **Two Cover** – (1) I .No. 2782– 25.01 Lakhs (2) I. No. SE0277—135.50 Lakhs ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.

1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ ಕೊನೆಯ ದಿನಾಂಕ: **17.04.2026 ರಿಂದ 27.04.2026** ಸಾಯಂಕಾಲ 5.00 ಘಂಟೆಯವರೆಗೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ **Two Cover: 29.04.2026 ಮುಂಜಾನೆ 11.00 ಘಂಟೆಗೆ.**
3. ಪೂರ್ವಭಾವಿ ಸಭೆ I.No. SE0277—135.50 Lakh **24.04.2026 ಮುಂಜಾನೆ 11.00 ಘಂಟೆಗೆ.**
4. ಆರ್ಥಿಕ ಬಿಡ್ ತೆರೆಯುವ ದಿನಾಂಕ **Two Cover : 04.05.2026 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ.
ವಾಸಾಸಂಇ/ವಿಜಯಪುರ/41/ಕೆಎಸ್‌ಎಂಸಿಎ/2026-27

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮಂಡ್ಯ.
ಸಿ.ಮಿಸ್. ನಂ. 13/2026.

ಅರ್ಜಿದಾರರು : 1) ಮೊಹಮ್ಮದ್ [illegible], ವಯಸ್ಸು 83 ವರ್ಷ, 2) [illegible], ವಯಸ್ಸು 48 ವರ್ಷ, 3) [illegible] ವಯಸ್ಸು 43 ವರ್ಷ, 4) [illegible] ವಯಸ್ಸು 19 ವರ್ಷ, 1ರಿಂದ 4 ರವರ ವಾಸ: ಮ: ಮನೆ ನಂ: 650/13, 2ನೇ ತಿರುವು, [illegible], ಮಂಡ್ಯ.

ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು ನಗರಸಭೆ ಮಂಡ್ಯ.

ಸಾರ್ವಜನಿಕ ಪ್ರಕಟಣೆ

1 ರಿಂದ 4 ರವರು ಈ ಘನ ನ್ಯಾಯಾಲಯದಲ್ಲಿ ನೇ ಅರ್ಜಿದಾರರ ಹೆಂಡತಿ 2 ಮತ್ತು 3ನೇ ಅರ್ಜಿದಾರರ ಮಗ ಮತ್ತು 4ನೇ ಅರ್ಜಿದಾರರ ಅಜ್ಜನಾದ ಮೃತ [illegible] ಕುಮಾರ್ ಎ. ರವರು ದಿನಾಂಕ 18.08.2022 ರಂದು 650/13, 2ನೇ ತಿರುವು [illegible], ಮಂಡ್ಯ ನಗರದ ಅವರ ಸ್ವಗೃಹದಲ್ಲಿ ಮೃತರಾಗಿರುತ್ತಾರೆ. [illegible] ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯು ವಿಚಾರಣೆಯು ದಿನಾಂಕ : 27.05.2026 ರಂದು ಬೆಳಿಗ್ಗೆ 11 ಗಂಟೆಗೆ ಘನ ನ್ಯಾಯಾಲಯದಲ್ಲಿ ವಿಚಾರಣೆಗೆ ಇದ್ದು, [illegible] ದಿನಾಂಕ: 16/04/26 [illegible].

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು, ಪ್ರಧಾನ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ. ಮಂಡ್ಯ.
ಅರ್ಜಿದಾರರ ಪರ ವಕೀಲರು : [illegible] ವಕೀಲರು.

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹ ವಾದವು. ಆದರೆ ಅದರಲ್ಲಿ ಪ್ರತಿಪಾದಿತ ವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

IN THE COURT OF THE HON'BLE 1ST ADDITIONAL JUNIOR CIVIL JUDGE & JMFC AT CHIKKABALLAPUR.
Crl. Misc. No.33/2026.

BETWEEN: 1. Smt. JAYALAKSHMAMMA D/o Late Channarayappa, W/o K Rangappa, Aged about 71 years, **2. Sri. V NARAYANASWAMY**, S/o Late Venkatarayappa, H/o Late Bhagyalakshmi C Aged about 77 years, PETITIONERS ARE R/at Patrenahalli Village, Kasaba Hobli, Chickballapur (T) & (D). ...PETITIONERS
AND : THE TAHSILDHAR, CHICKBALLAPUR TALUK. ...RESPONDENT

(DRAFT PAPER PUBLICATION)

The petitioners have filed the above petition for granting death certificate of Petitioner No. 1's Mother **Muniyamma** W/o Channarayappa died **on 04/07/2000** at Patrenahalli Village, Kasaba Hobli, Chikkaballapur Taluk and District. Any person has any right or interest may appear before this Hon'ble Court **on : 13.05.2026** at 11 am in person or through pleader to file your objections if any. Given under my hand and seal of the court on the day of 4/4/2026. Take notice that in default or your appearance on the date before mentioned in the petition, it will be heard and determine ex-parte.

By Order of the Court, Sheristhedar, Civil Judge(Junior Division) Chickballapur.

IN THE COURT OF THE PRINCIPAL DISTRICT AND SESSIONS JUDGE AT CHICKBALLAPUR.
P & SC No.21/2026

Petitioner : Sri. Muniraju, D/o Late Gopalappa, Aged about 53 years. R/a Behind Cocoon market, Vapasandra, Ward no.2, Chickballapur town - 562101.
-V/S-
Respondent :- Nil-

PAPER PUBLICATION

The pettitioner has filed this petition for grant of probate certificate under section 276 of Indian Succession Act, to issue probate certificate, with respect to Registered will deed dated 05-02-2025 vide no.107/2024-25 executed by Gopalappa in favour of Muniraju, registered in the office of the Sub-Registrar, Chickballapur, as document with respect to the schedule property. Any interested party may appear before the Hon'ble court in person or duly instructed by her advocate **on.06.06.2026** at 11.00 a.m. If he/she failed to appear before the Hon'ble couro on such date the Hon'ble court will decide the matter according to law.

SCHEDULE : Property bearing assessment no. 3433/203/3 measuring East-West 34 North-South 30 feet totally 1020 Square feet situated at Ward no.2, Vapasandra, Chickballapur town bounded on: feet East by : Road, West by : kathano.959/867 Kiran Viktar house, North by : Parvathamma house, South by : Muniramaiah vacant site. Given by the Hon'ble Court with seal and signature 08.04.2026.

By order, Chief Administrative Officer, Prl. District and Session Court Chickballapur.
Advocate for Petitioner : **A.M.Chickeerappa** Advocate, Chickballapur. Date: 08.04.2026.

IN THE COURT OF THE PRINCIPAL CIVIL JUDGE & JMFC AT CHICKBALLAPUR
Crl.Misc.No.549/2025

PETITIONERS: 1. Smt. Akkayamma, W/o Venkatappa, Aged about 68 years, **2. Sri. Siddappa,** S/o Late. Venkatappa, Aged about 55 years, **3. Sri. Narayanaswamy,** S/o Late. Venkatappa, Aged about 50 years, **4. Sri. Muniraju,** S/o Late. Venkatappa, Aged about 48 years, **5. Sri. Gangadhara,** S/o Late. Venkatappa, Aged about 42 years, **6. Smt. Amaravathi,** D/o Late. Venkatappa, W/o Peerappa, Aged about 38 years, All are residing at Nallakadirenahalli village, Nandi Hobli, Chickballapur Town. **-V/S-**
RESPONDENT : The City Municipal Commissioner, Registrar of Births and Deaths, Chickballapur Taluk.

DRAFT PAPER PUBLICATION

The petitioners has filed the above petition for grant of death certificate of 1st petitioner's mother-in-law and petitioners No.2 to 6's grandmother Gubbalamma W/o Venkatarayappa was died on 09-10-1983, their residence at Chickballapur Town. Any person has any right or interest may appear before this Hon'ble Court **on 11.05.2026.. at 11. A.M** in person or through pleader to file your objections if any. Take notice that in default of your appearance on the date before mentioned in the petition, it will be heard determine ex-parte. 04/04/2026

By order of the Court
Sheristhedar, Prl. Civil Judge & JMFC Chickballapur
Advocate for service:- **Muniraju. M** Advocate, Chickballapur -562101

IN THE COURT OF THE HON'BLE 1ST ADDITIONAL JUNIOR CIVIL JUDGE & JMFC AT CHIKKABALLAPUR.
Crl. Misc. No.32/2026.

BETWEEN: 1. Smt. JAYALAKSHMAMMA D/o Late Channarayappa, W/o K Rangappa, Aged about 71 years, **2. Sri. V NARAYANASWAMY**, S/o Late Venkatarayappa, H/o Late Bhagyalakshmi C Aged about 77 years, PETITIONERS ARE R/at Patrenahalli Village, Kasaba Hobli, Chickballapur (T) & (D). ...PETITIONERS
AND : THE TAHSILDHAR, CHICKBALLAPUR TALUK. ...RESPONDENT

(DRAFT PAPER PUBLICATION)

The petitioners have filed the above petition for granting death certificate of Petitioner No. 1's father Channarayappa S/o Appayyappa died **on 22/12/1998** at Patrenahalli Village, Kasaba Hobli, Chikkaballapur Taluk and District. Any person has any right or interest may appear before this Hon'ble Court **on : 13.05.2026** at 11 am in person or through pleader to file your objections if any. Given under my hand and seal of the court on the day of 4/4/2026. Take notice that in default or your appearance on the date before mentioned in the petition, it will be heard and determine ex-parte.

By Order of the Court, Sheristhedar, Civil Judge(Junior Division) Chickballapur.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ಬಳ್ಳಾರಿ.

ಐಎಫ್‌ಬಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್-4/289/2026-27 ದಿನಾಂಕ : 17-04-2026

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿ)ರ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತಿಗೆದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತಿಗೆದಾರರು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ **https://kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಅಥವಾ ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹೀರಾತು ಹೊರಡಿಸಲಾಗುವುದಿಲ್ಲ.

ಕ್ರ ಸಂ	ಕಾಮಗಾರಿಯ ವಿವರ	ಕಾಮಗಾರಿ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
	ಲೆಕ್ಕ ಶೀರ್ಷಿಕೆ : 3054-(ಯೋಜನೇತರ)-ರಾಜ್ಯ ಹೆದ್ದಾರಿಗಳ ನಿರ್ವಹಣೆ :	
1)	PWD/2026-27/RD/WORK_INDENT35694	200.00
	ಲೆಕ್ಕ ಶೀರ್ಷಿಕೆ : 5054-ಕೆಆರ್‌ಡಿಸಿಎಲ್-ಬಂಡವಾಳ ವೆಚ್ಚ :	
2)	PWD/2025-26/BR/WORK_INDENT35171	100.00

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.
ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **21-04-2026 ರಂದು 12.00 ಗಂಟೆಯ ವರೆಗೆ.**
ಆ)ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **ಕ್ರಮ ಸಂಖ್ಯೆ-1 ಕಾಮಗಾರಿ – 27-04-2026 ರಂದು 16.00 ಗಂಟೆಯ ವರೆಗೆ. ಕ್ರಮ ಸಂಖ್ಯೆ-2 ಕಾಮಗಾರಿ – 02-05-2026ರಂದು 16.00 ಗಂಟೆಯ ವರೆಗೆ**
ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **ಕ್ರಮ ಸಂಖ್ಯೆ-1 ಕಾಮಗಾರಿ – 27-04-2026 ರಂದು 16.30 ಗಂಟೆಗೆ. ಕ್ರಮ ಸಂಖ್ಯೆ-2 ಕಾಮಗಾರಿ – 04-05-2026ರಂದು 11.00 ಗಂಟೆಗೆ**

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/65 ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಬೆಂಅಪ್ರಾ/ನಯೋಸ/CLU-491/25-26/285/2026-27 ದಿನಾಂಕ: 18.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಎಂ.ಅಶೋಕ್ ಮತ್ತು ಇತರರು	ಆನೇಕಲ್	ಸರ್ಜಾಪುರ	ನೆಕ್ಕುಂದಿ ದೊಮ್ಮಸಂದ್ರ	64/1	0-04	ವ್ಯವಸಾಯ	ವಸತಿ
2					64/2	0-15		
3					64/3ರ ಪೈಕಿ	0-05		
4					64/5ರ ಪೈಕಿ	0-08.50		
5					79/3	0-09		
6					79/4	0-03		
7					79/5	0-05		
8					79/6	0-03		
9					79/8	0-19		
10					79/9ರ ಪೈಕಿ	0-12		
11					79/10	0-06		
12					79/11	0-05.75		
13					79/12	0-04		
					ಒಟ್ಟು	2-19.25		

ಷರಾ: ಪ್ರಶ್ನಿತ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಈ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಸ್ಥಾಪನೆ: 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ಕಛೇರಿ ☎ 26678572 : 26600512 : 26609066 : 57765582
ವೆಬ್: bccbl.co.in, ಇ-ಮೇಲ್ ಐಡಿ : recovery@bccbl.co.in

ನಿಯಮ 8(1) **ಸ್ವಾಧೀನ ಸೂಚನೆ** (ಸ್ಥಿರ ಆಸ್ತಿಗಾಗಿ)(ಸಾಂಕೇತಿಕವಾಗಿ)

ಕೆಳ ಸಹಿದಾರರು ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ., ನ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆರ್ಫೇಸಿ) ಆಕ್ಟ್ 2002 ರ ಅನ್ವಯ ಮತ್ತು 2002 ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ನಿಯಮ 9 ಅನ್ನು ಓದಿಕೊಂಡಂತೆ ಪ್ರಕರಣ 13 (2) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಸಾಲಗಾರರುಗಳು / ಜಾಮೀನು ಬದ್ಧ ಉತ್ತರಾಧಿಕಾರಿಗಳಾದವರಿಗೆ ಸಾಲವನ್ನು ಮರು ಪಾವತಿಸಲು ತಗಾದೆ ಸೂಚನೆಯನ್ನು ನೀಡಲಾಗಿತ್ತು. ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರುಪಾವತಿ ಮಾಡಬೇಕಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರುಪಾವತಿ ಮಾಡದಿಲ್ಲವಾದ್ದರಿಂದ ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸದರಿ ನಿಯಮದ ನಿಯಮ 9 ನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ 13 (4) ರನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೆಳಕಂಡ ದಿನಾಂಕಗಳಂದು ವಿವರಿಸಲಾಗಿರುವ ಸ್ವತ್ತುಗಳನ್ನು ಕೆಳಸಹಿದಾರರು ವಶಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರುಗಳಿಗೆ ಜಾಮೀನು ಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರು ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದ ಅದರೆ ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಬಾಕಿ ಇರುವ ಮೊತ್ತ ಮತ್ತು ಅದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಸ್ಥಿರ ಆಸ್ತಿಗಳ ವಿವರಣೆ

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊತ್ತ	ಸ್ಥಿರಾಸ್ತಿಗಳ ವಿವರ ಮತ್ತು ಅಳತೆ
ಜಯನಗರ ಶಾಖೆ:-			
01	1. ಶ್ರೀ. ಬಿ. ರಾಮಸ್ವಾಮಿ ಅಹ್ಮದ್ (ಮೃತ) ಜಾಮೀನುಬದ್ಧ ಉತ್ತರಾಧಿಕಾರಿಗಳು :- 1a) ಶ್ರೀ. ಜಹೀರ್ ಅಹ್ಮದ್ (ಮಗ), 1b) ಶ್ರೀಮತಿ. ಉಮ್ಮೀರಾ ಫಾತಿಮಾ (ಮಗಳು), 1c) ಶ್ರೀಮತಿ ಉಮ್ಮೆ ಸಲೀಮ(ಮಗಳು)& 2) ಶ್ರೀಮತಿ. ಜಹಾನ್ ಬಿ ಅಹಮದ್	ಬೇಡಿಕೆ ಸೂಚನೆ ದಿನಾಂಕ : 2.12.2025 ಸ್ವಾಧೀನತೆ ನೋಟೀಸ್ ದಿನಾಂಕ : 13.04.2026 ಬಾಕಿ ಇರುವ ಮೊತ್ತ : ರೂ.70,33,120/- ದಿನಾಂಕ : 13.04.2026 ಕ್ಕೆ ಇದ್ದಂತೆ	ಆಸ್ತಿ ಮತ್ತು ಅಳತೆ :- ನಂ.7/12, 15ನೇ ಮುಖ್ಯ ರಸ್ತೆ, ರಾಜ್ಯಾಜಿ ಜಯೆಂಟ್ಸ್ ನಗರ, ಬಿಟಿಎಂ ಲೇಔಟ್ಸ್ ಬಿಬಿಎಂಪಿ ವಾರ್ಡ್ ಸಂಖ್ಯೆ 65, ಪಿಐಡಿ ಸಂಖ್ಯೆ 65-102-7-12, ಬೆಂಗಳೂರು. ಅಳತೆ:- ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ & ಉತ್ತರದಿಂದ ದಕ್ಷಿಣಕ್ಕೆ: 30 ಅಡಿ. ಪೂರ್ವಕ್ಕೆ: ರಸ್ತೆ; ಪಶ್ಚಿಮಕ್ಕೆ: ಆಸ್ತಿ ಸಂಖ್ಯೆ 142; ಉತ್ತರಕ್ಕೆ: ಆಸ್ತಿ ಸಂಖ್ಯೆ 156; ದಕ್ಷಿಣಕ್ಕೆ: ಆಸ್ತಿ ಸಂಖ್ಯೆ 158
02	ಶ್ರೀ. ವಿಜಯ ಕುಮಾರ್. ಪಿ	ಬೇಡಿಕೆ ಸೂಚನೆ ದಿನಾಂಕ : 28.01.2026 ಸ್ವಾಧೀನತೆ ನೋಟೀಸ್ ದಿನಾಂಕ :13.04.2026 ಬಾಕಿ ಇರುವ ಮೊತ್ತ : ರೂ. 40,18,451/- ದಿನಾಂಕ : 13.04.2026ಕ್ಕೆ ಇದ್ದಂತೆ	ಆಸ್ತಿ ಮತ್ತು ಅಳತೆ :- ಹೊಸ ಪುರಸಭೆ ಸಂಖ್ಯೆ.819, ಹಳೆಯ ಸಂಖ್ಯೆ.336, ಯುಡಿಯೂರಿನ ರಚನೆಯಾದ ಸಿ. ಸಂಖ್ಯೆ.9215 & 56, 9ನೇ ಅಡ್ಡ ರಸ್ತೆ, ನಾಗಸಂದ್ರ ಲೇಔಟ್, ಶಾಸ್ತ್ರಿನಗರ, ಭರತನಗರ 2ನೇ ಹಂತ, ಬಿಬಿಎಂಪಿ ವಾರ್ಡ್ ಸಂಖ್ಯೆ.59, ಯುಡಿಯೂರಿನ ಹೊಸ ವಾರ್ಡ್ ಸಂಖ್ಯೆ.167, ಪಿಐಡಿ ಸಂಖ್ಯೆ.59-42-819, ಬೆಂಗಳೂರು. ಅಳತೆ:- ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ & ಉತ್ತರದಿಂದ ದಕ್ಷಿಣಕ್ಕೆ: 55 ಅಡಿ. ಪೂರ್ವಕ್ಕೆ: ಸೈಟ್ ಸಂಖ್ಯೆ 337; ಪಶ್ಚಿಮಕ್ಕೆ: ಸೈಟ್ ಸಂಖ್ಯೆ 335; ಉತ್ತರಕ್ಕೆ: ರಸ್ತೆ; ದಕ್ಷಿಣಕ್ಕೆ: ಸೈಟ್ ಸಂಖ್ಯೆ 378
ಇಂದಿರಾನಗರ ಶಾಖೆ:-			
03	ಶ್ರೀಮತಿ ಲಲಿತಾ. ಎ ವಾರಸುದಾರರು:- 1.ಬಾಲಾಜಿ(ಮಗ) 2.ಕುಮಾರ್ ಎ(ಮಗ) 3.ಸರವಣನ್ ಎ(ಮಗ)	ಬೇಡಿಕೆ ಸೂಚನೆ ದಿನಾಂಕ : 12.01.2026 ಸ್ವಾಧೀನತೆ ನೋಟೀಸ್ ದಿನಾಂಕ :13.04.2026 ಬಾಕಿ ಇರುವ ಮೊತ್ತ : ರೂ. 35,32,183/- ದಿನಾಂಕ : 13.04.2026ಕ್ಕೆ ಇದ್ದಂತೆ	ಆಸ್ತಿ ಅಳತೆ :-ನಂ.7/32, ಎ.ಕೆ. ಕಾಲೋನಿ, ದೊಮ್ಮಲೂರು, ದೊಮ್ಮಲೂರು ಬಿಬಿಎಂಪಿ ವಾರ್ಡ್ ಸಂಖ್ಯೆ 72, ಪಿಐಡಿ ಸಂಖ್ಯೆ 72-14-7/32, ಬೆಂಗಳೂರು. ಅಳತೆ:ಪೂರ್ವದಿಂದ ಪಶ್ಚಿಮಕ್ಕೆ: 20 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 40 ಅಡಿ. ಪೂರ್ವಕ್ಕೆ :ಸೈಟ್ ಸಂಖ್ಯೆ 7/31, ಪಶ್ಚಿಮಕ್ಕೆ:ಸೈಟ್ ಸಂಖ್ಯೆ 7/33; ಉತ್ತರಕ್ಕೆ:ರಸ್ತೆ; ದಕ್ಷಿಣಕ್ಕೆ :ಸೈಟ್ ಸಂಖ್ಯೆ 7/3
ಶಾಂತಿನಗರ ಶಾಖೆ:-			
04	ಶ್ರೀ. ಫಯಾಜ್ ಪಾಷಾ. ವಾರಸುದಾರರು:- 1. ಅಮೀರುನ್ನೀಸಾ	ಬೇಡಿಕೆ ಸೂಚನೆ ದಿನಾಂಕ : 02.02.2026 ಸ್ವಾಧೀನತೆ ನೋಟೀಸ್ ದಿನಾಂಕ : 13.04.2026 ಬಾಕಿ ಇರುವ ಮೊತ್ತ : ರೂ. 14,97,841/- ದಿನಾಂಕ : 13.04.2026 ಕ್ಕೆ ಇದ್ದಂತೆ	ಆಸ್ತಿ ಮತ್ತು ಅಳತೆ: - ಸಂಖ್ಯೆ 250, ತಿಮ್ಮಯ್ಯ ರಸ್ತೆ, ಭಾರತೀನಗರದ ಬಿಬಿಎಂಪಿ ವಾರ್ಡ್ ಸಂಖ್ಯೆ 80, ಪಿಐಡಿ ಸಂಖ್ಯೆ 80-11-250, ಬೆಂಗಳೂರು. ಅಳತೆ:ಪೂರ್ವದಿಂದ ಪಶ್ಚಿಮಕ್ಕೆ: 36.6 ಅಡಿ & ಉತ್ತರದಿಂದ ದಕ್ಷಿಣಕ್ಕೆ: 10.3 ಅಡಿ. ಪೂರ್ವಕ್ಕೆ: ಖಾಸಗಿ ಆಸ್ತಿ; ಪಶ್ಚಿಮಕ್ಕೆ :[illegible] ರಸ್ತೆ; ಉತ್ತರಕ್ಕೆ: [illegible]; ದಕ್ಷಿಣಕ್ಕೆ: ಅಡ್ಡ ರಸ್ತೆ
ಕೋರಮಂಗಲ ಶಾಖೆ			
05	ಅಮ್ಮಯ್ಯ	ಬೇಡಿಕೆ ಸೂಚನೆ ದಿನಾಂಕ : 27.01.2026 ಸ್ವಾಧೀನತೆ ನೋಟೀಸ್ ದಿನಾಂಕ : 13.04.2026 ಬಾಕಿ ಇರುವ ಮೊತ್ತ : ರೂ. 29,35,2026/- ದಿನಾಂಕ : 13.04.2026 ಕ್ಕೆ ಇದ್ದಂತೆ	ಆಸ್ತಿ ಮತ್ತು ಅಳತೆ: -ಹೊಸ ನಂ.1, ಹಳೆಯ ನಂ. 229, 8ನೇ ಕ್ರಾಸ್, ಮಡಿವಾಳ ಹಳ್ಳಿ 6ನೇ ಬಿಬಿ, ಜಯನಗರದ ಬಿಬಿಎಂಪಿ ವಾರ್ಡ್ ಸಂಖ್ಯೆ 58, ಪಿಐಡಿ ಸಂಖ್ಯೆ 58-157-1, ಬೆಂಗಳೂರು. ಅಳತೆ:ಪೂರ್ವದಿಂದ ಪಶ್ಚಿಮಕ್ಕೆ: 20 ಅಡಿ & ಉತ್ತರದಿಂದ ದಕ್ಷಿಣಕ್ಕೆ: 25 ಅಡಿ. ಪೂರ್ವಕ್ಕೆ :ಸೈಟ್ ಸಂಖ್ಯೆ 230; ಪಶ್ಚಿಮಕ್ಕೆ :ರಸ್ತೆ; ಉತ್ತರಕ್ಕೆ :ಸೈಟ್ ಸಂಖ್ಯೆ 228; ದಕ್ಷಿಣಕ್ಕೆ :ರಸ್ತೆ

ಸ್ಥಳ : ಬೆಂಗಳೂರು
ದಿನಾಂಕ : 18.04.2026

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನಗರದಲ್ಲಿದ್ದಾರೆ 88.95 ಲಕ್ಷ ಮತದಾರರು

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ವಾರ್ಡ್‌ವಾರು ಅಂತಿಮ ಮತದಾರರ ಪಟ್ಟಿ ಬಿಡುಗಡೆಯಾಗಿದೆ. ನಗರದಲ್ಲಿ ಒಟ್ಟು 88.95 ಲಕ್ಷ ಮತದಾರರಿದ್ದಾರೆ.

ಜಿಬಿಎ ವ್ಯಾಪ್ತಿಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಅಂತಿಮ ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಮಾರ್ಚ್ 9ರಂದು ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಬಿಡುಗಡೆಗೊಳಿಸಲಾಗಿತ್ತು. ಅದರಲ್ಲಿದ್ದ ಲೋಪದೋಷಗಳನ್ನು ಸರಿಪಡಿಸಿ, ಮಾರ್ಪಾಡುಗಳು ಮಾಡಿ ಅಂತಿಮ ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

ಜಿಬಿಎ ವ್ಯಾಪ್ತಿಯಲ್ಲಿ ಬೆಂಗಳೂರು ಕೇಂದ್ರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ ಮತ್ತು ಬೆಂಗಳೂರು ಪಶ್ಚಿಮ ನಗರ ಪಾಲಿಕೆಗಳು ಸೇರಿದಂತೆ ಒಟ್ಟು 5 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 369 ವಾರ್ಡ್‌ಗಳಿಂದ ಒಟ್ಟು 88,95,361 ಮತದಾರರಿದ್ದಾರೆ. ಅದರಲ್ಲಿ 45,71,169 ಪುರುಷರು, 43,22,557 ಮಹಿಳೆಯರು ಹಾಗೂ 1,635 ಇತರೆ ಮತದಾರರಿದ್ದಾರೆ ಎಂದು ತಿಳಿಸಿದರು.

ಎರಡು ಸಾವಿರ ಮತದಾರರು ಹೆಚ್ಚಳ: 369 ವಾರ್ಡ್‌ನಿಂದ 8,023 ಮತಪಟ್ಟಿಗಳು ಬರಲಿವೆ. ಕರಡು ಮತಪಟ್ಟಿಗಿಂತ ಅಂತಿಮ ಮತದಾರರ ಪಟ್ಟಿಯಲ್ಲಿ 2,833 ಮತದಾರರು ಹೆಚ್ಚಾಗಿದ್ದಾರೆ. ಬೆಂಗಳೂರು ದಕ್ಷಿಣ ನಗರಪಾಲಿಕೆಯ ಸುಬ್ರಮಣ್ಯಪುರ ವಾರ್ಡ್ ಸಂಖ್ಯೆ 51 ರಲ್ಲಿ ಅತಿ ಹೆಚ್ಚು 53,660 ಮತದಾರರಿದ್ದರೆ, ಬೆಂಗಳೂರು ಪೂರ್ವ ನಗರಪಾಲಿಕೆಯ ವಿಜ್ಞಾನನಗರ ವಾರ್ಡ್ ಸಂಖ್ಯೆ 24-ರಲ್ಲಿ ಅತಿ ಕಡಿಮೆ 12,897 ಮತದಾರರನ್ನು ಹೊಂದಿದೆ ಎಂದು ಮಾಹಿತಿ ನೀಡಿದರು. ಮತದಾರರು ವಾರ್ಡ್‌ವಾರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಆನ್‌ಲೈನ್‌ನಲ್ಲಿ ಎಪಿಕ್ ಸಂಖ್ಯೆ ಅಥವಾ ಅವರ ಹೆಸರಿನ ಮೂಲಕ ಹುಡುಕಲು ವ್ಯವಸ್ಥೆಯನ್ನು ಕಲ್ಪಿಸಿದೆ. ಜಿಬಿಎ ಅಧಿಕೃತ ಜಾಲತಾಣ https://gba.karnataka.gov.in ನಲ್ಲಿ ಪಿಡಿಎಫ್ ಆವೃತ್ತಿ ಅಪ್‌ಲೋಡ್ ಮಾಡಲಾಗಿದೆ ಎಂದರು. ಗೋಷ್ಠಿಯಲ್ಲಿ ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸುಷ್ಮಾ ಗೋಡಬೋಲೆ ಉಪಸ್ಥಿತರಿದ್ದರು.



ಹೆಸರು ಸೇರಿಸಲು ಅವಕಾಶ

ಒಂದು ವೇಳೆ ಅಂತಿಮ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗದಿದ್ದಲ್ಲಿ ಪೂರಕ ಪಟ್ಟಿಗಳಲ್ಲಿ ಹೆಸರನ್ನು ಸೇರಿಸಿಕೊಳ್ಳಬಹುದಾಗಿರುತ್ತದೆ. ಎಲ್ಲಾ ಅರ್ಹ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲು ಹಾಗೂ ದೋಷ ರಹಿತ ಮತದಾರರ ಪಟ್ಟಿಯನ್ನು ತಯಾರಿಸಲು ಅವಶ್ಯವಿರುವ ಎಲ್ಲಾ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ ಎಂದು ಮಹೇಶ್ವರ್ ರಾವ್ ಹೇಳಿದರು.

ನಗರ ಪಾಲಿಕೆ ಸಹಾಯವಾಣಿ ಸಂಖ್ಯೆ

- ಕೇಂದ್ರ : 080-22975803
- ಉತ್ತರ : 080-22975936
- ದಕ್ಷಿಣ : 9480685704
- ಪೂರ್ವ : 9480685706
- ಪಶ್ಚಿಮ : 9480685703

ಸನ್ಮಾನ



ನಗರ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುಸ್ಥಿರ ಇಂಧನ: ಭಾರತದ ಕಾರ್ಯಸೂಚಿ-2047ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭುಬಕ್ರು, ಸಿಎಂ ಸಿದ್ದರಾಮಯ್ಯ, ಇಂಧನ ಸಚಿವ ಕೆ.ಜೆ. ಜಾರ್ಜ್ ಇದ್ದರು.

ಕಿರುಸುದ್ದಿ

ಲೋಕಾ ಬಲೆಗೆ ಪಿಡಿಒ, ಯೂಟ್ಯೂಬರ್

• **ಬೆಂಗಳೂರು:** ನಿವೇಶನದ ಖಾತೆ ಮಾಡಿಕೊಡಲು ಲಂಚ ಸ್ವೀಕರಿಸುತ್ತಿದ್ದಾಗ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲೂಕಿನ ಕಳಲುಘಟ್ಟ ಗ್ರಾಮ ಪಂಚಾಯಿತಿ ಪಿಡಿಒ ಹಾಗೂ ಯೂಟ್ಯೂಬರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಕಳಲುಘಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗೀತಾಮಣಿ, ಹಾಗೂ ಸ್ಥಳೀಯ ಖಾಸಗಿ ವಾಹಿನಿ ಪ್ರತಿನಿಧಿ ಗಂಗಾಧರ್ 1ಲಕ್ಷ ರೂ. ಲಂಚದ ಹಣದ ಸಮೇತ ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಲೋಕಾಯುಕ್ತ ಡಿವೈಎಸ್‌ಪಿ ಗೌತಮ್ ನೇತೃತ್ವದಲ್ಲಿ ದಾಳಿ ನಡೆದಿದ್ದು, ಸದ್ಯ ಗೀತಾಮಣಿ ಹಾಗೂ ಗಂಗಾಧರ್ ನನ್ನು ವಶಕ್ಕೆ ಪಡೆದುಕೊಂಡು ವಿಚಾರಣೆಗೊಳಪಡಿಸಿದ್ದಾರೆ. ಪಿಡಿಒ ಗೀತಾಮಣಿ ಅವರು 1,50,000 ರೂ.ಗೆ ಬೇಡಿಕೆ ಇಟ್ಟಿದ್ದು, ಈ ಹಣವನ್ನು ಯುಟ್ಯೂಬರ್ ಗಂಗಾಧರ್‌ಗೆ ನೀಡುವಂತೆ ಸೂಚಿಸಿದ್ದರು. ಈ ವಿಚಾರವನ್ನು ಗೀತಾಮಣಿ, ಗಂಗಾಧರ್ ಗೆ ಹೇಳಿದ್ದರು. ಡೀಲ್ ನಂತೆ ಫೈಜಲ್ ನಿಂದ ಗಂಗಾಧರ್ 1,20,000 ಪಡೆಯುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಬೆಂಗಳೂರು ಗ್ರಾಮಾಂತರ ಲೋಕಾಯುಕ್ತ ಅಧಿಕಾರಿಗಳು ಪಿಐ ಉಮಾ ಮಹೇಶ್, ಹಾಗೂ ಎಸ್.ಪಿ ಮಹಾಂತೇಶ್ವರ ಜಿದ್ದಿ ತಂಡ ದಾಳಿ ಮಾಡಿದ್ದು, ರೆಡ್ ಹ್ಯಾಂಡ್ ಆಗಿ ಹಿಡಿದಿದ್ದಾರೆ.

50ಕ್ಕೂ ಹೆಚ್ಚು ಅಧಿಕಾರಿಗಳಿಗೆ ವಂಚನೆ

• **ಬೆಂಗಳೂರು:** ಮಹಿಳಾ ಕಸ್ಟಮ್ಸ್ ಅಧಿಕಾರಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದಲ್ಲಿ ಪುಲಿಕೇಶಿನಗರ ಪೊಲೀಸರಿಂದ ಬಂಧಿತನಾಗಿರುವ ಕೃಪಲಾ ಎಂಬಾತನ ವಿಚಾರಣೆ ವೇಳೆ ಬೆಚ್ಚಿಬೀಳಿಸುವ ಸತ್ಯಗಳು ಹೊರಬಂದಿವೆ. ಈತ ಸುಮಾರು 50ಕ್ಕೂ ಹೆಚ್ಚು ಅಧಿಕಾರಿಗಳನ್ನು ಇದೇ ರೀತಿ ಪ್ರೀತಿ ಮತ್ತು ಮದುವೆ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್ ಮಾಡಿರುವುದು ಬೆಳಕಿಗೆ ಬಂದಿದೆ. ಆರೋಪಿಯು ಮಹಿಳಾ ಅಧಿಕಾರಿಗಳ ಜತೆ ಸಲುಗೆ ಬೆಳೆಸಿ ದೈಹಿಕ ಸಂಪರ್ಕ ಮಾಡಿ ನಂತರ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ಆ ಮೂಲಕ ತನ್ನ ಕೃತ್ಯಗಳಿಗೆ ಬಳಸಿಕೊಳ್ಳುತ್ತಿದ್ದ ಎಂಬ ಆರೋಪವಿದೆ. ಆರೋಪಿ ಕೃಪಲಾನಿ ಪ್ರಮುಖವಾಗಿ ಜಿಎಸ್‌ಟಿ ಮತ್ತು ಕಸ್ಟಮ್ಸ್ ವಿಭಾಗದ ಮಹಿಳಾ ಅಧಿಕಾರಿಗಳನ್ನು ಟಾರ್ಗೆಟ್ ಮಾಡುತ್ತಿದ್ದ. ಆರಂಭದಲ್ಲಿ ಕೆಲಸದ ನಿಮಿತ್ತ ಅಧಿಕಾರಿಗಳೊಂದಿಗೆ ಸಲುಗೆ ಬೆಳೆಸುತ್ತಿದ್ದ ಈತ, ಬಳಿಕ ಡಿನ್ನರ್, ಲಂಚ್ ಎಂದು ಆಪ್ತನಾಗುತ್ತಿದ್ದನು. ನಂತರ ಪ್ರೀತಿ ಮತ್ತು ಮದುವೆಯ ನಾಟಕವಾಡಿ ದೈಹಿಕ ಸಂಪರ್ಕ ಬೆಳೆಸುತ್ತಿದ್ದ. ನಂತರ ಅದನ್ನೇ ಬಂಡವಾಳವಾಗಿಸಿಕೊಂಡು ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡಲು ಆರಂಭಿಸುತ್ತಿದ್ದ. ಜತೆಗೆ ಮಹಿಳಾ ಅಧಿಕಾರಿಗಳೊಂದಿಗೆ ಲೈಂಗಿಕ ಸಂಪರ್ಕದ ನಂತರ ವಿಡಿಯೋ ಅಥವಾ ಫೋಟೋಗಳನ್ನಿಟ್ಟುಕೊಂಡು ಬೆದರಿಕೆ ಹಾಕುತ್ತಿದ್ದ ಎಂಬ ಆರೋಪವಿದೆ.

ವಿಚಾರಣೆಯಲ್ಲೂ ಮುಂದುವರೆದ ಉದ್ಧಟತನ: ವಿಚಾರಣೆ ನಡೆಯುತ್ತಿರುವಾಗಲೂ ಈತನ ಉದ್ಧಟತನ ಮುಂದುವರಿದಿದ್ದು, ಮೆಡಿಕಲ್ ಟೆಸ್ಟ್ ಮಾಡಿಸುವ ವೇಳೆ ಆಸ್ಪತ್ರೆಯಲ್ಲಿ ರಂಪಾಟ ಮಾಡಿರುವ ಆರೋಪಿ, ಪೊಲೀಸರ ಮೊಬೈಲ್ ಕಸಿದುಕೊಂಡು ಅವಾಚ್ಯವಾಗಿ ನಿಂದಿಸಿ ಪ್ರಾಣ ಬೆದರಿಕೆ ಹಾಕಿದ್ದಾನೆ. ಈ ಸಂಬಂಧ ವಿ.ವಿ. ಪುರ ಪೊಲೀಸ್ ಠಾಣೆಯಲ್ಲಿ ಆತನ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಮೈದುನನ ಅಪಹರಣ: ಅಕ್ಕ, ಭಾವ ಸೇರಿ ಮೂವರ ಸೆರೆ

• **ಬೆಂಗಳೂರು:** ಸಾಲದ ಹಣ ವಾಪಸ್ ನೀಡದಿದ್ದಕ್ಕೆ ತಂಗಿ ಹಾಗೂ ಮೈದುನನ್ನು ಅಪಹರಿಸಿ ಹಲ್ಲೆ ಮಾಡಿದ ಅಕ್ಕ, ಭಾವ ಸೇರಿದಂತೆ ಮೂವರು ಆರೋಪಿಗಳನ್ನು ಹೆಬ್ಬಗೋಡಿ ಪೊಲೀಸರು ಬಂಧಿಸಿದ್ದಾರೆ. ಹಲ್ಲೆಗೊಳಗಾದ ವೃಷ್ಟಿ ಎಂಬಾಕೆ ನೀಡಿದ ದೂರಿನ ಮೇರೆಗೆ ಸಹೋದರಿ ಪ್ರಫುಲ್ಲಾ, ಭಾವ ಸಲೀಂ ಶೇಕ್, ಈತನ ಸಹಚರ ಬರೇಶ್ ಎಂಬಾರನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೊಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದರು. ಹೆಬ್ಬಗೋಡಿಯ ಅನಂತನಗರದಲ್ಲಿ ವಾಸವಾಗಿರುವ ದೂರುದಾರ ಮಹಿಳೆ ಹಾಗೂ ಪತಿ ಅಭಿಜಿತ್ ಅವರ ಮನೆಗೆ ಏ.14ರ ರಾತ್ರಿ ಆರೋಪಿಗಳು ಬಂದು ಏಕಾಏಕಿ ಹಲ್ಲೆ ನಡೆಸಿದ್ದಾರೆ. ಹಣಕಾಸಿನ ವ್ಯವಹಾರ ಸಂಬಂಧ ಪೊಲೀಸ್ ಠಾಣೆಗೆ ಕರೆದೊಯ್ಯುವುದಾಗಿ ಹೇಳಿ ಕಾರಿನಲ್ಲಿ ಕೂರಿಸಿ ಅಪಹರಿಸಿದ್ದರು. ಮಾರ್ಗ ಮಧ್ಯೆ ಕಾರಿನಿಂದ ಇಳಿದು ಪರಾರಿಯಾಗಲು ಯತ್ನಿಸಿದರೂ ಹಲ್ಲೆ ಮಾಡಿ ನಾಗರಬಾವಿಯಲ್ಲಿ ಮನೆಗೆ ಕರೆದೊಯ್ದು ಗೃಹಬಂಧನದಲ್ಲಿ ಇರಿಸಿದ್ದರು ಎಂದು ಪೊಲೀಸರು ಹೇಳಿದರು. ಈ ಮೊದಲೇ ಸಂಚು ರೂಪಿಸಿದಂತೆ, ಏ.14ರಂದು ದಂಪತಿ ಅಪಹರಿಸಿದ್ದ ಆರೋಪಿಗಳು, ಮಾರ್ಗ ಮಧ್ಯೆ ಚಲಿಸುತ್ತಿರುವ ಕಾರಿನಿಂದ ಇಳಿಯಲು ಯತ್ನಿಸಿದ ಅಭಿಜಿತ್ ಎದೆಭಾಗಕ್ಕೆ ಕಾರಿನ ಕೀ ನಿಂದ ಚುಚ್ಚಿಗಾಯಪಡಿಸಿದ್ದರು. ನಾಗರಭಾವಿಯಲ್ಲಿರುವ ಮನೆಗೆ ಕರೆದೊಯ್ದು ದಂಪತಿಯ ಮೊಬೈಲ್ ಕಸಿದು ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿದ್ದಾರೆ. ಈ ಕುರಿತು ಪೊಲೀಸರಿಗೆ ದೂರು ನೀಡಿದರೆ ಜೀವಂತ ಬಿಡುವುದಿಲ್ಲ ಎಂದು ಬ್ಲಾಕ್ ಮೇಲ್ ಮಾಡಿದ್ದರು ಎಂದು ದೂರಿನಲ್ಲಿ ಮಹಿಳೆ ತಿಳಿಸಿದ್ದಾರೆ. ಅಭಿಜಿತ್ ಮೊಬೈಲ್ ಸ್ವಿಚ್ ಆಫ್ ಬಂದ ಹಿನ್ನೆಲೆಯಲ್ಲಿ ಮನೆಗೆ ಹೋದಾಗ ಕಾಣದಿರುವುದನ್ನು ಕಂಡು ಸಹೋದರಿ ಕೂಡಲೇ ಹೆಬ್ಬಗೋಡಿ ಪೊಲೀಸರಿಗೆ ದೂರು ನೀಡಿದ್ದಾರೆ.

ಸುಸ್ಥಿರ ಇಂಧನ: ಭಾರತದ ಕಾರ್ಯಸೂಚಿ-2047ರ ಅಂತಾರಾಷ್ಟ್ರೀಯ ಮಟ್ಟದ ಸಮ್ಮೇಳನ

ಆರ್ಥಿಕ ಪ್ರಗತಿ, ಪರಿಸರ ಸಂರಕ್ಷಣೆ ಮುಖ್ಯ

• **ಬೆಂಗಳೂರು:** ಭಾರತದಂತಹ ಬೆಳೆಯುತ್ತಿರುವ ದೇಶಕ್ಕೆ ಆರ್ಥಿಕ ಪ್ರಗತಿ ಮತ್ತು ಪರಿಸರ ರಕ್ಷಣೆ ಎರಡೂ ಅಷ್ಟೇ ಮುಖ್ಯ. ಇವೆರಡರಲ್ಲಿ ಒಂದನ್ನು ಮಾತ್ರ ಆರಿಸಿಕೊಳ್ಳಲು ಸಾಧ್ಯವಿಲ್ಲ, ಬದಲಾಗಿ ಎರಡನ್ನೂ ಜತೆಯಾಗಿ ತೆಗೆದುಕೊಂಡು ಹೋಗುವ ವ್ಯವಸ್ಥೆಯ ಅಳವಡಿಸಿಕೊಳ್ಳಬೇಕಾಗಿದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಸ್ಟಿಸ್ ಸೂರ್ಯಕಾಂತ್ ಹೇಳಿದರು.

ನಗರ ಖಾಸಗಿ ಹೋಟೆಲ್‌ನಲ್ಲಿ ಕಾಮನ್‌ವೆಲ್ತ್ ಲೀಗಲ್ ಎಜುಕೇಶನ್ ಅಸೋಸಿಯೇಷನ್ ಮತ್ತು ಕರ್ನಾಟಕ ಸರ್ಕಾರ ಜಂಟಿಯಾಗಿ ಆಯೋಜಿಸಿರುವ ಸುಸ್ಥಿರ ಇಂಧನ: ಭಾರತದ ಕಾರ್ಯಸೂಚಿ -2047 ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿ, ಅಭಿವೃದ್ಧಿಶೀಲ ರಾಷ್ಟ್ರವೊಂದಕ್ಕೆ ಪರಿಸರ ರಕ್ಷಣೆ ಮತ್ತು ಆರ್ಥಿಕ ಪ್ರಗತಿಯು ಒಂದನ್ನೊಂದು ಬಿಟ್ಟು ಆಯ್ಕೆ ಮಾಡುವಂತಹ ವಿಷಯಗಳಲ್ಲ ಎಂದು ಪ್ರತಿಪಾದಿಸಿದರು. 2047ರ ವಿಕಸಿತ ಭಾರತಕ್ಕಾಗಿ ಇಂಧನ ನ್ಯಾಯದ ದೃಷ್ಟಿಕೋನವನ್ನು ಮಂಡಿಸಿದ ಅವರು, ಶುದ್ಧ ಗಾಳಿ, ಶುದ್ಧ ನೀರು ಮತ್ತು ನವೀಕರಿಸಬಹುದಾದ ಭವಿಷ್ಯದೊಂದಿಗೆ ರಾಜಿ ಮಾಡಿಕೊಳ್ಳದೆ ದೇಶವು ಬೆಳೆಯಲು ಅನುವು ಮಾಡಿಕೊಡುವ ನೈತಿಕ ವಾಸ್ತುಶಿಲ್ಪವೇ ಇಂಧನ ನ್ಯಾಯ ಎಂದರು.

ಭಾರತದ ಸಂವಿಧಾನವು ಅಂತರ್ಗತವಾಗಿ ಸಮತೋಲನಕ್ಕೆ ಉತ್ತೇಜನ ನೀಡುತ್ತದೆ. ಅಭಿವೃದ್ಧಿ ಮತ್ತು ಸ್ವಚ್ಛ ಪರಿಸರದ ಹಕ್ಕುಗಳೆರಡೂ ಸಂವಿಧಾನದ ಆರ್ಟಿಕಲ್ 21 ರ ವ್ಯಾಪ್ತಿಯಲ್ಲಿ ಬರುತ್ತವೆ. ಪರಿಸರ ಸಂರಕ್ಷಣೆಯನ್ನು ಅಭಿವೃದ್ಧಿಯ ಅಡಿಪಾಯವಾಗಿ ಸಂಯೋಜಿಸುವಂತಹ ಹೊಸ ಮಾದರಿಯನ್ನ ಅನುಷ್ಠಾನಗೊಳಿಸುವ ಅಗತ್ಯ ಹೆಚ್ಚಾಗಿದೆ ಎಂದು ಹೇಳಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಭಾರತದ ಇಂಧನ ವಲಯದಲ್ಲಿ ನವೀಕೃತ ಇಂಧನದ ಪ್ರಾಮುಖ್ಯತೆಯ ಬಗ್ಗೆ ಬೆಳಕು ಚೆಲ್ಲಿದ ಅವರು, ನಾಗರೀಕರ ಜೀವನಮಟ್ಟವನ್ನು ಸುಧಾರಿಸಲು ಮತ್ತು ಆಧುನಿಕ ಮೂಲಸೌಕರ್ಯಗಳನ್ನು ನಿರ್ಮಿಸಲು ಮುಂದಿನ ಎರಡು ದಶಕಗಳಲ್ಲಿ ರಾಷ್ಟ್ರೀಯ ಇಂಧನ ಬಳಕೆಯು ಸುಮಾರು ನಾಲ್ಕು ಪಟ್ಟು ಬೆಳೆಯಬೇಕಾಗಿದೆ ಎಂದು ವಿವರಿಸಿದರು.

ನವೀಕರಿಸಬಹುದಾದ ಇಂಧನ ಮೂಲಗಳಿಂದಲೇ ರಾಜ್ಯದ ಶೇ. 70 ರಷ್ಟು ಸ್ಥಾಪಿತ ಸಾಮರ್ಥ್ಯ ಉತ್ಪಾದನೆಯಾಗುತ್ತಿದ್ದು, ಈ ಪರಿವರ್ತನೆಯಲ್ಲಿ ಕರ್ನಾಟಕವು ದೇಶದಲ್ಲೇ ಮುಂಚೂಣಿಯಲ್ಲಿದೆ. ಮುಂದಿನ ದಿನಗಳಲ್ಲಿ, ಅಂದರೆ 230 ರ ವೇಳೆಗೆ ಪ್ರಸ್ತುತ ಇರುವ 38 ಗಿಗಾವ್ಯಾಟ್ ಉತ್ಪಾದನೆಯಿಂದ 60 ಗಿಗಾವ್ಯಾಟ್ ಉತ್ಪಾದನೆಯನ್ನು ಸಾಧಿಸುವ ಮಹತ್ವಾಕಾಂಕ್ಷೆಯ ಗುರಿಯನ್ನು ರಾಜ್ಯ ಹೊಂದಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಹಾಗೂ ಸಮ್ಮೇಳನದ ಆಯೋಜನಾ ಸಮಿತಿಯ ಅಧ್ಯಕ್ಷ ಡಿ.ಕೆ. ಸಿಂಗ್ , ಇಂಧನ ಸಚಿವ ಕೆ.ಜೆ. ಜಾರ್ಜ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಸಿಎಲ್‌ಇಎ ಅಧ್ಯಕ್ಷ ಪ್ರೊ. ಡಾ. ಎಸ್. ಶಿವಕುಮಾರ್, ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಉಪಸ್ಥಿತರಿದ್ದರು.

ಕಾನೂನು ವ್ಯವಸ್ಥೆ ಚುರುಕಾಗಬೇಕಿದೆ

ಇಂಧನ ಕ್ಷೇತ್ರ ಮತ್ತು ಪರಿಸರ ಸಂರಕ್ಷಣೆಯ ನಡುವಿನ ಸಮತೋಲನದ ಬಗ್ಗೆ ಮಾತನಾಡುತ್ತಾ, ಜಾಗತಿಕ ತಾಪಮಾನ ಏರಿಕೆಯ ಸವಾಲುಗಳನ್ನು ಎದುರಿಸಲು ಕಾನೂನು ವ್ಯವಸ್ಥೆಯು ಚುರುಕಾಗಬೇಕಿದೆ. ಸುಸ್ಥಿರ ಇಂಧನ ನೀತಿಗಳು ಕೇವಲ ಕಾಗದದ ಮೇಲೆ ಇರಬಾರದು, ಅವುಗಳ ಪರಿಣಾಮಕಾರಿ ಜಾರಿಗೆ ನ್ಯಾಯಾಂಗವು ಬೆನ್ನೆಲುಬಾಗಿ ನಿಲ್ಲಲಿದೆ. ತಾಂತ್ರಿಕ ಆವಿಷ್ಕಾರಗಳಿಗೆ ಪೂರಕವಾಗಿ ನಮ್ಮ ಕಾನೂನು ಸಂಹಿತೆಗಳನ್ನು ನಾವು ಕಾಲಕಾಲಕ್ಕೆ ನವೀಕರಿಸಿಕೊಳ್ಳಬೇಕೆಂದು ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಭಕ್ರು ತಿಳಿಸಿದರು.

ಸುಜಾತಾ ಸಾಹಸಕ್ಕೆ ಹೆಬ್ಬಾಳ್ಕರ್ ಪ್ರಶಂಸೆ

• **ಬೆಂಗಳೂರು:** ಮೈಸೂರಿನ ಸಿದ್ಧಾರ್ಥನಗರದ ಮನೆಯೊಂದರಲ್ಲಿ ಚಿರತೆ ಮಂಚದಡಿ ಅಡಗಿದ್ದ ವೇಳೆ ಪ್ರಾಣದ ಹಂಗು ತೊರೆದು ವೃದ್ಧ ಅತ್ತೆಯನ್ನು ಸುರಕ್ಷಿತವಾಗಿ ಹೊರಗೆ ಕರೆತಂದ ಸೊಸೆ ಸುಜಾತಾ ಅವರ ಸಾಹಸಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಮಾತನಾಡಿರುವ ಅವರು, ಈ ಘಟನೆ ಆಕಸ್ಮಿಕವಾದರೂ, ಅದು ಮಹಿಳೆಯೊಬ್ಬರ ಅಪ್ರತಿಮ ಧೈರ್ಯ ಮತ್ತು ಅತ್ತೆ-ಸೊಸೆಯ ಪವಿತ್ರ ಬಾಂಧವ್ಯಕ್ಕೆ ಹಿಡಿದ ಕೈಗನ್ನಡಿ ಎಂದು ಸಚಿವರು ಬಣ್ಣಿಸಿದ್ದಾರೆ. ತಮ್ಮ ಮನೆಯ ಮಂಚದಡಿ ಚಿರತೆ ಅಡಗಿರುವುದು ತಿಳಿಯುತ್ತಿದ್ದಂತೆಯೇ, ಪ್ರಾಣದ ಹಂಗು ತೊರೆದು ಕೊಠಡಿಗೆ ನುಗ್ಗಿ, ವಯಸ್ಸಾದ ಅತ್ತೆಯನ್ನು ಅಪ್ಪಿಕೊಂಡು ಸುರಕ್ಷಿತವಾಗಿ ಹೊರಗೆ ಕರೆತಂದ ಸುಜಾತಾ ಅವರ ಸಾಹಸ ನಿಜಕ್ಕೂ ರೋಮಾಂಚನಕಾರಿ. ಸಾಕ್ಷಾತ್ ಮೃತ್ಯುವಿನ ದವಡೆಯಿಂದ ಅತ್ತೆಯನ್ನು ರಕ್ಷಿಸಿದ ಅವರ ಸಮಯಪ್ರಜ್ಞೆ ಇಡೀ ಮಹಿಳಾ ಕುಲಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದಿದ್ದಾರೆ.

ಮಂಚದಡಿಯಲ್ಲಿ ಅಡಗಿದ ಚಿರತೆ: ಅತ್ತೆ ಸುರಕ್ಷತೆಗೆ ಹೋರಾಡಿದ ಸೊಸೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆಯಾಗಿ, ಸುಜಾತಾ ಅವರ ಈ ಅಸಾಧಾರಣ ಶೌರ್ಯವನ್ನು ನಾನು ಮನತುಂಬಿ ಶ್ಲಾಘಿಸುತ್ತೇನೆ. ಅವರ ಈ ಸಾಹಸವನ್ನು ಗೌರವಿಸಲು ಮುಂದಿನ ವರ್ಷದ ಕಿತ್ತೂರು ರಾಣಿ ಚೆನ್ನಮ್ಮ ಸಾಹಸ ಪ್ರಶಸ್ತಿಗೆ ಅವರ ಹೆಸರನ್ನು ಪರಿಗಣಿಸಲು ನಮ್ಮ ಇಲಾಖೆಗೆ ಈಗಾಗಲೇ ಸೂಚಿಸಿದ್ದೇನೆ ಎಂದರು. ಧೈರ್ಯವಂತ ಮಹಿಳೆಯರೇ ಈ ನಾಡಿನ ನಿಜವಾದ ಶಕ್ತಿ. ಸುಜಾತಾ ಅವರ ಈ ಶೌರ್ಯದ ಗಾಥೆ ಮನೆಮನಗಳಿಗೆ ತಲುಪಲಿ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

₹39 ಕೋಟಿ ವೆಚ್ಚದ ಮಾದಕವಸ್ತು ವಶ

• **ಬೆಂಗಳೂರು:** ಮಾದಕ ದ್ರವ್ಯ ನಿಯಂತ್ರಣ ಮಂಡಳಿ ಶುಕ್ರವಾರ ನಗರದಲ್ಲಿ ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ವಿವಿಧ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾಗಿದ್ದ ಸುಮಾರು 38 ಕೋಟಿ ರೂ. ಮೌಲ್ಯದ ಮಾದಕ ವಸ್ತುಗಳನ್ನು ವೈಜ್ಞಾನಿಕವಾಗಿ ನಾಶಪಡಿಸಿದೆ.

ಒಟ್ಟು 13 ಪ್ರಕರಣಗಳಿಗೆ ಸಂಬಂಧಿಸಿದ 128.75 ಕೆ.ಜಿ. ತೂಕದ ನಿಷೇಧಿತ ವಸ್ತುವನ್ನು ನಾಶ ಮಾಡಲಾಗಿದೆ. ಇದರಲ್ಲಿ ಗಾಂಜಾ, ಹೈಡ್ರೋಪೋನಿಕ್ ಗಾಂಜಾ, ಕೊಕೇನ್, ಮೆಥಾಂಫೆಟಮೈನ್, ಎಂಡಿಎಂಎ ಮತ್ತು ಟಿಎಚ್‌ಸಿ ಸೇರಿವೆ. ಹೊಸಕೋಟೆಯ ಸೆಂಚುರಿ ರಿಫೈನರಿಸ್ ಘಟಕದಲ್ಲಿ ಪರಿಸರಸ್ನೇಹಿ ವಿಧಾನದ ಮೂಲಕ ಈ ವಸ್ತುಗಳನ್ನು ಸುಟ್ಟು ಹಾಕಲಾಯಿತು.

ಮಾದಕ ವಸ್ತು ವಿಲೇವಾರಿ ಸಮಿತಿಯ ಅಧ್ಯಕ್ಷರಾದ ಸಚಿನ್ ಘೋರ್ಪಡೆ ಅವರ ನೇತೃತ್ವದಲ್ಲಿ ಈ ಪ್ರಕ್ರಿಯೆ ನಡೆಯಿತು. ಸಮಿತಿಯ ಸದಸ್ಯರಾದ ರಾಜಾ ಇಮಾಮ್ ಕಾಸಿಂ, ಅರವಿಂದ್ ಎಂ.ಆರ್.ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರತಿನಿಧಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ವರ್ಷದ ಎರಡನೇ ದೊಡ್ಡ ಕಾರ್ಯಾಚರಣೆ

2026ನೇ ಸಾಲಿನಲ್ಲಿ ಎನ್‌ಸಿಬಿ ನಡೆಸಿದ ಎರಡನೇ ಪ್ರಮುಖ ವಿಲೇವಾರಿ ಡ್ರೈವ್ ಇದಾಗಿದೆ. ಇದಕ್ಕೂ ಮುನ್ನ ಫೆಬ್ರವರಿ 5ರಂದು ಸುಮಾರು 11ಕೋಟಿ ರೂ. ಮೌಲ್ಯದ 1607 ಕೆ.ಜಿ ಮಾದಕ ವಸ್ತುವನ್ನು ನಾಶಪಡಿಸಲಾಗಿತ್ತು. ಈ ವರ್ಷದಲ್ಲಿ ಈವರೆಗೆ ಒಟ್ಟು 1735 ಕೆ.ಜಿ ಮಾದಕ ದ್ರವ್ಯಗಳನ್ನು ಎನ್‌ಸಿಬಿ ಬೆಂಗಳೂರು ಘಟಕ ಯಶಸ್ವಿಯಾಗಿ ನಾಶಪಡಿಸಿದೆ.

ರೈತರಿಗೆ ಆರ್ಥಿಕ ಆಸರೆ



• **ಯಲಹಂಕ:** ರೈತನೆಂಬ ಭಾಗ್ಯವಂತನ ಬದುಕಿಗೆ ಹೈನುಗಾರಿಕೆ ಆಸರೆಯಿದ್ದಂತೆ ಎಂದು ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕ ಸತೀಶ್ ಕಡತನಮಲೆ ಅಭಿಪ್ರಾಯಪಟ್ಟರು.

ಬೆಂಗಳೂರು ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯ ಯಲಹಂಕ ಕ್ಷೇತ್ರದ ದಾಸನಪುರ ಹೋಬಳಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಹಾಲು ಉತ್ಪಾದಕರಿಗೆ ಮ್ಯಾಟ್ ಮತ್ತು ವೈದ್ಯಕೀಯ ವೆಚ್ಚದ ಚೆಕ್ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಬೆಂಗಳೂರು ಹಾಲು ಒಕ್ಕೂಟದ ಹೊಸ ಆಡಳಿತ ಮಂಡಳಿಯ ಸಮರ್ಥ ಕಾರ್ಯವೈಖರಿ ಯಿಂದಾಗಿ ಹಾಲು ಒಕ್ಕೂಟವು ಲಾಭದ ಹಾದಿಯಲ್ಲಿ ಸಾಗುತ್ತಿದ್ದು, ಲಾಭಾಂಶವನ್ನು ಹಾಲು ಉತ್ಪಾದಕರು, ಸಿಬ್ಬಂದಿ, ಸಹಕಾರ ಸಂಘಗಳಿಗೆ ಹಂಚುವ ಮೂಲಕ ಅವರ ಹಿತಕಾಯುವ ಕೆಲಸ ಮಾಡಿದೆ ಎಂದರು.

ಹಾಲು ಉತ್ಪಾದಕ ರೈತರ ಹಿತರಕ್ಷಣೆಯ ದಿಸೆಯಲ್ಲಿ ಬಮೂಲ್ ವಿಮೆ, ರಾಸುಗಳ ಖರೀದಿಗೆ ನೆರವು, ದೊಡ್ಡಮಟ್ಟದಲ್ಲಿ ಹೈನುಗಾರಿಕೆ ಮಾಡಲು ಸಾಲ ಯೋಜನೆ ಸೇರಿದಂತೆ ಹಲವು ಜನೋಪಯೋಗಿ ಯೋಜನೆಗಳನ್ನು ರೂಪಿಸಿದೆ. ಒಟ್ಟಿನಲ್ಲಿ ಹಾಲು ಉತ್ಪಾದಕ ರೈತನೆಂಬ ಭಾಗ್ಯವಂತನ ಬದುಕಿಗೆ ಹೈನುಗಾರಿಕೆ ಆಸರೆಯಾಗಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಒಕ್ಕೂಟ ಕೈಗೊಂಡಿದೆ. ಹೈನುಗಾರಿಕೆಯಲ್ಲಿ ತೊಡಗಿರುವ ರೈತರ ಹಿತವನ್ನು ಕಾಪಾಡಲು ಬಮೂಲ್ ಒಕ್ಕೂಟವು ಬದ್ಧವಾಗಿದ್ದು, ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಅಗತ್ಯ ಪ್ರೋತ್ಸಾಹ, ಸಹಕಾರವನ್ನು ಒಕ್ಕೂಟವು ನೀಡುತ್ತಿದೆ. ರೈತರು ಮತ್ತು ಗ್ರಾಹಕರ ಹಿತ ಕಾಪಾಡುವುದೇ ನಮ್ಮ ಧ್ಯೇಯವಾಗಿದೆ ಎಂದರು.

ಸರ್ಕಾರದ ನಡೆಗೆ ಜನರ ವಿರೋಧ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಪಂಚ ಪಾಲಿಕೆಗಳ ಚುನಾವಣೆ ನಡೆಸಲು ಕಾಲಾವಕಾಶ ನೀಡುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಪತ್ರ ಬರೆದ ಸರ್ಕಾರದ ನಡೆಯ ವಿರುದ್ಧ ಸಾರ್ವಜನಿಕ ವಲಯದಲ್ಲಿ ವಿರೋಧ ವ್ಯಕ್ತವಾಗಿದೆ. ಬಿಜೆಪಿ ಸೇರಿದಂತೆ ನಾಗರಿಕ ಸಂಘಟನೆಗಳು ಆಕ್ರೋಶ ಹೊರಹಾಕಿದ್ದು, ಜಿಬಿಎ ಚುನಾವಣೆ ಮುಂದೂಡುವುದು ಸರ್ಕಾರದ ತಂತ್ರವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿವೆ. ಜಿಬಿಎ ಚುನಾವಣೆ ಮುಂದೂಡುವ ವಿಚಾರವಾಗಿ ಸರ್ಕಾರದ ವಿರುದ್ಧ ವಿಧಾನಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಜೂನ್ ಅಂತ್ಯದೊಳಗೆ ಜಿಬಿಎ ಚುನಾವಣೆ ಮಾಡಿ ಮುಗಿಸುವಂತೆ ರಾಜ್ಯ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ಈ ಹಿಂದೆಯೇ ಸುಪ್ರೀಂಕೋರ್ಟ್ ನಿರ್ದೇಶಿಸಿತ್ತು. ಆದರೆ ಸದ್ಯ ಜಿಬಿಎ ಚುನಾವಣೆ ಅವಧಿಯನ್ನು ಮುಂದೂಡುವಂತೆ ಸರ್ಕಾರವೇ ಆಯೋಗಕ್ಕೆ ಪತ್ರ ಬರೆದಿದೆ. ಕಾಂಗ್ರೆಸ್‌ನಲ್ಲಿ ಒಳಬೇಗುದಿ ಹೆಚ್ಚಾಗಿದೆ. ಇನ್ನು ಮುಂದೆ ಕಾಂಗ್ರೆಸ್ ಅಧಿಕಾರಕ್ಕೆ ಬರಲ್ಲ ಅಂತ ಅವರಿಗೆ ಗೊತ್ತಿದೆ. ಅದಕ್ಕೆ ಜಿಬಿಎ ಚುನಾವಣೆ ಮುಂದೂಡಿ ಅಂತ ಚುನಾವಣಾ ಆಯೋಗಕ್ಕೆ ಹೇಳಿದ್ದಾರೆ. ಚುನಾವಣೆಯಲ್ಲಿ ಸೋಲಾಗುವುದನ್ನು ತಪ್ಪಿಸಲು ಹೀಗೆ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚಾಲಕರ ನೆರವಿಗೆ ನಿಲ್ಲಲು ಸರಕಾರಕ್ಕೆ ಆಗ್ರಹ

ಆಟೋ ಚಾಲಕರ ಬೃಹತ್ ಪ್ರತಿಭಟನೆ

• **ಬೆಂಗಳೂರು:** ರಾಜ್ಯ ಸರ್ಕಾರ ಸಂಕಷ್ಟದಲ್ಲಿರುವ ಬಡ ಆಟೋ ಚಾಲಕರ ಕುಟುಂಬಗಳಿಗೆ ಕೂಡಲೇ ಸಹಾಯಧನವನ್ನು ಬಿಡುಗಡೆ ಮಾಡಬೇಕೆಂದು ಆಮ್ ಆದ್ಮಿ ಪಕ್ಷ ಒತ್ತಾಯಿಸಿತು.

ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಪಕ್ಷದ ಆಟೋ ಘಟಕದ ಅಧ್ಯಕ್ಷ ಆಯುಬ್ ಖಾನ್ ಮಾತನಾಡಿ, ಕಳೆದ ಒಂದು ತಿಂಗಳಿನಿಂದ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಕೊಲ್ಲಿ ಯುದ್ಧದ ಪರಿಣಾಮದಿಂದ ಎಲ್ ಪಿ ಜಿ ಬಂಕ್‌ಗಳಲ್ಲಿ ಸಾಕಷ್ಟು ಅನಿಲ ಕೊರತೆ ಉಂಟಾಗಿದೆ. ಆಟೋ ಚಾಲಕರುಗಳು ಪ್ರತಿ ದಿವಸದ ತಮ್ಮ ದುಡಿಮೆಗೆ ಕೊಡಲಿ ಏಟು ಬಿದ್ದಿದೆಂದು ಆತಂಕಪಟ್ಟರು.

ಚಾಲಕರುಗಳು ದೈನಂದಿನ ತಮ್ಮ ಸಂಸಾರಗಳನ್ನು ನಡೆಸಲಾಗದೆ ಬೀದಿಗೆ ಬೀಳುತ್ತಿದ್ದಾರೆ. ಈ ದುಸ್ಥಿತಿಯಲ್ಲಿ ರಾಜ್ಯ ಸರ್ಕಾರವು ಉಪಚುನಾವಣೆ ಹಾಗೂ ಮುಖ್ಯಮಂತ್ರಿ ಬದಲಾವಣೆಯ ರಾಜಕೀಯದಲ್ಲಿ ಆಟೋ ಚಾಲಕರು ಸಂಕಷ್ಟವನ್ನು ಅರಿಯದೆ ಕಣ್ಮುಚ್ಚಿ ಕುಳಿತಿರುವುದು ನಿಜಕ್ಕೂ ಬೇಸರದ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದರು. 15 ಸಾವಿರ ರೂ. ಸಹಾಯಧನ ಬಿಡುಗಡೆ ಮಾಡಬೇಕು. ಅನೇಕ ಸಮಾಜ ಸೇವಕರುಗಳು, ಚಿತ್ರನಟರುಗಳು ಮುಂದೆ ಬಂದು ತಮ್ಮ ಕೈಲಾದಷ್ಟು ಚಾಲಕರುಗಳಿಗೆ ನೆರವನ್ನು ನೀಡುತ್ತಿದ್ದಾರೆ. ಆದರೆ ಸರ್ಕಾರವು ಇತ್ತ ಕಡೆ ಗಮನವನ್ನೇ ಹರಿಸುತ್ತಿಲ್ಲ, ಅನೇಕ ಆಟೋ ಸಂಘಟನೆಗಳು ಮನವಿಗಳನ್ನು ನೀಡಿದ್ದಾರೆ ಹಾಗೂ ಪ್ರತಿಭಟನೆಯನ್ನು ಮಾಡಿದ್ದಾರೆ. ಆದರೂ ಸಹ ಸರ್ಕಾರದ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳಿಗೆ ಕಣ್ಣು, ಕಿವಿ ಕೇಳಿಸದಂತಾಗಿದೆ. ಕೂಡಲೇ ಸಂಕಷ್ಟದಲ್ಲಿರುವ ಈ ಆಟೋ ಚಾಲಕ ವರ್ಗಕ್ಕೆ ಕೂಡಲೇ 15 ಸಾವಿರ ರೂ. ಗಳ ಸಹಾಯಧನವನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.



ಪ್ರತಿಭಟನೆಯಲ್ಲಿ ವಿವಿಧ ಆಟೋ ಸಂಘಟನೆಗಳ ಮುಖಂಡರುಗಳು ಭಾಗವಹಿಸಿ ತಮ್ಮ ಸಹಮತ ವ್ಯಕ್ತಪಡಿಸಿದರು. ಪಕ್ಷದ ಮುಖಂಡರಾದ ಜಗದೀಶ್ ಚಂದ್ರ, ಲಕ್ಷ್ಮಿಕಾಂತ್ ರಾವ್, ಜಗದೀಶ್ ವಿ.ಸದಂ, ಸಂಚಿತ್ ಸಹ್ವಾನಿ, ಉಷಾಮೋಹನ್, ಪುಟ್ಟಪ್ಪ ಗೌಡ, ಇರ್ಷಾದ್, ಶಶಿಧರ್ ಆರಾಧ್ಯ, ಮುನೇಶ್ ಕುಮಾರ್, ಚೆನ್ನಪ್ಪ ಗೌಡ ಸೇರಿದಂತೆ ಇತರರಿದ್ದರು.

ಗಣತಿಗೆ ಗೈರಾದರೆ ಕ್ರಿಮಿನಲ್ ಪ್ರಕರಣ

• **ಬೆಂಗಳೂರು:** ಭಾರತದ ರಾಷ್ಟ್ರೀಯ ಜನಗಣತಿ-2027 ಕಾರ್ಯದ ಅಂಗವಾಗಿ ಗಣತಿದಾರರು ಮತ್ತು ಮೇಲ್ವಿಚಾರಕರಾಗಿ ನೇಮಕಗೊಂಡಿರುವ ಎಲ್ಲಾ ಅಧಿಕಾರಿ ಮತ್ತು ನೌಕರರು ಜನಗಣತಿ ಕಾರ್ಯಕ್ಕೆ ಗೈರು ಹಾಜರಾದಲ್ಲಿ ಕ್ರಿಮಿನಲ್ ಮೊಕದ್ದಮೆಗೆ ಕ್ರಮ ಕೈಗೊಳ್ಳಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಪಾಲಿಕೆಗಳು ಮುಂದಾಗಿವೆ.

ಜನಗಣತಿಗೆ ನಿಯೋಜಿತ ಎಲ್ಲಾ ಅಧಿಕಾರಿ ಮತ್ತು ನೌಕರರಿಗೆ ಎರಡು ಬಾರಿ ತರಬೇತಿಯನ್ನು ನೀಡಲಾಗಿದ್ದು, ತರಬೇತಿಗೆ ಗೈರುಹಾಜರಾಗಿರುವ ಅಧಿಕಾರಿ ಮತ್ತು ನೌಕರರಿಗೆ ಈಗಾಗಲೇ ಕಾರಣ ಕೇಳಿ ಪತ್ರ ಜಾರಿಗೊಳಿಸಿದ್ದಾರೆ. ಜನಗಣತಿ ಕಾಯ್ದೆಯ 1948ರ ಸೆಕ್ಷನ್-11ರ ನಿಯಮದ ಪ್ರಕಾರ, 1000 ರೂ. ವರೆಗೆ ದಂಡ ವಿಧಿಸಲಾಗುತ್ತದೆ. ಜೊತೆಗೆ 3 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆಯನ್ನೂ ವಿಧಿಸಲು ಅವಕಾಶವಿರುತ್ತದೆ. ಗೈರುಹಾಜರಾತಿ ಅವಧಿಯನ್ನು ಡೈಸ್-ನಾನ್ ಎಂದು ಪರಿಗಣಿಸಲಾಗುವುದು.ಸೇವಾ ನಿಯಮಾವಳಿಯಂತೆ ಶಿಸ್ತು ಕ್ರಮ ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುವುದು. ಅಗತ್ಯವಿದ್ದಲ್ಲಿ ಮೊಕದ್ದಮೆ ದಾಖಲಿಸಲಾಗುವುದು ಎಂದು ಪಾಲಿಕೆಗಳ ಆಯುಕ್ತರು ಎಚ್ಚರಿಕೆ ನೀಡಿದ್ದಾರೆ. ಗಣತಿದಾರರು ಮತ್ತು ಮೇಲ್ವಿಚಾರಕರು ಕೂಡಲೇ ನೇಮಿಸಿದ ವಾರ್ಡ್ ವ್ಯಾಪ್ತಿಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ಆಯುಕ್ತರು ಸೂಚಿಸಿದ್ದಾರೆ.


ಇಂದು ನಗರದಲ್ಲಿ...

- ಸನಾತನ ವೈದಿಕ ಭವನ ಉದ್ಘಾಟನೆ
- ಸ್ಥಳ: ಎಚ್‌ಎಂಟಿ ಬಡಾವಣೆ, ವಿದ್ಯಾರಣ್ಯಪುರ ಮುಖ್ಯರಸ್ತೆ.
- ಬೆಳಗ್ಗೆ 9

- ಶತಾವಧಾನಿ ಡಾ.ಆರ್.ಗಣೇಶ್ ಅವರಿಗೆ ಅಭಿನಂದನಾ ಸಮಾರಂಭ
- ಸ್ಥಳ: ಭಾರತೀಯ ವಿದ್ಯಾ ಭವನ
- ಬೆಳಗ್ಗೆ 9.30

- ರಾಜ್ಯಮಟ್ಟದ ಕನ್ನಡ ಸಾಹಿತ್ಯ, ಸಂಗೀತ ಸಂಭ್ರಮ
- ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ
- ಬೆಳಗ್ಗೆ 11

- ಪರಮ್ ವಿಹಾರ ಸಾಂಸ್ಕೃತಿಕ ಹಬ್ಬ
- ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರ
- ಸಂಜೆ 6



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	5	4	0	1	9	+1.067
ಆರ್‌ಸಿಬಿ	6	4	2	0	8	+1.171
ರಾಜಸ್ಥಾನ	5	4	1	0	8	+0.889
ದಿಲ್ಲಿ	5	3	2	0	6	+0.310
ಗುಜರಾತ್	5	3	2	0	6	+0.018
ಹೈದರಾಬಾದ್	5	2	3	0	4	+0.576
ಲಖನೌ	5	2	3	0	4	-0.804
ಚೆನ್ನೈ	5	2	3	0	4	-0.846
ಮುಂಬೈ	5	1	4	0	2	-1.076
ಕೆಕೆಆರ್	6	0	5	1	1	-1.149

ಕಿರುಸುದ್ದಿ

10ಕೆಗೆ ಬೆಂಗಳೂರು ಸಿದ್ಧ



ಬೆಂಗಳೂರು: ಪ್ರೊಕ್ಯಾಮ್ ಇಂಟರ್ ನ್ಯಾಷನಲ್ ನಿಂದ ಪ್ರಚಾರ ಪಡೆದ ಟಿಸಿಎಸ್ ವರ್ಲ್ಡ್ 10 ಕೆ ಬೆಂಗಳೂರಿನ 18ನೇ ಆವೃತ್ತಿಯು 2026 ರ ಏಪ್ರಿಲ್ 26, ಭಾನುವಾರದಂದು ಆನ್-ಗ್ರೌಂಡ್ ಮತ್ತು ವರ್ಚುವಲ್ ರೇಸ್ ಗಳಲ್ಲಿ ದಾಖಲೆಯ 35,000ಕ್ಕೂ ಹೆಚ್ಚು ಸ್ಪರ್ಧಿಗಳನ್ನು ಸ್ವಾಗತಿಸಲು ಸಜ್ಜಾಗಿದೆ. ಒಟ್ಟು 210,000 ಡಾಲರ್ ಬಹುಮಾನದೊಂದಿಗೆ, ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ರೇಸ್ ನಲ್ಲಿ ಉಗಾಂಡಾದ ಹಾರ್ಬರ್ಟ್ ಕಿಬೆಟ್ ಮತ್ತು ಹಾಲಿ ಚಾಂಪಿಯನ್ ಸಾರಾ ಚೆಲಂಗಟ್, ಹಾಲಿ ಚಾಂಪಿಯನ್ ಮತ್ತು ಕೂಟದ ದಾಖಲೆ ಹೋಲ್ಡರ್ ಭಾರತದ ಅಭಿಷೇಕ್ ಪಾಲ್ ಮತ್ತು ಸಂಜೀವಿನಿ ಜಾಧವ್ ಸೇರಿದಂತೆ ಪ್ರಮುಖ ಅಥ್ಲೀಟ್ ಗಳು ಓಟಕ್ಕೆ ಸಜ್ಜಾಗುತ್ತಿದ್ದಾರೆ. ಕಬ್ಬನ್ ರಸ್ತೆಯಲ್ಲಿ ನಡೆಯುವ ಫ್ಲ್ಯಾಗ್ ಆಫ್ ನಲ್ಲಿ ವಿಶ್ವ ಚಾಂಪಿಯನ್ ಮತ್ತು ಒಲಿಂಪಿಕ್ ಪದಕ ವಿಜೇತೆ ಬ್ಲಾಂಕಾ ವ್ಲಾಸಿಕ್ ಅವರು ಅಂತಾರಾಷ್ಟ್ರೀಯ ಕೂಟದ ರಾಯಭಾರಿಯಾಗಿ ಅವರೊಂದಿಗೆ ಸೇರಿಕೊಳ್ಳಲಿದ್ದಾರೆ.

ಸ್ಕ್ವಾಷ್: ಚೋಟ್ರಾನಿಗೆ ಸೋಲು

ಹೊಸದಿಲ್ಲಿ: ಭಾರತದ ಭರವಸೆಯ ಸ್ಕ್ವಾಷ್ ಆಟಗಾರ ವೀರ್ ಚೋಟ್ರಾನಿ ಫ್ರೆಂಚ್‌ನ ಬಾಪ್ಟಿಸ್ಟ್ ಅವರೊಂದಿಗೆ ಸೋತ ನಂತರ ಹ್ಯಾಂಬರ್ಗ್ ಓಪನ್ ಸ್ಕ್ವಾಷ್ ಪಂದ್ಯಾವಳಿಯಿಂದ ಹೊರಬಿದ್ದರು. ಇದರೊಂದಿಗೆ ನಿರೀಕ್ಷಿತ ಟೂರ್ನಿಯಲ್ಲಿ ಭಾರತದ ಅಭಿಯಾನ ಅಂತ್ಯಗೊಂಡಿದೆ. ನಾಕೌಟ್ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಅವರು, ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕಿತ ಬಾಪಿಸ್ಟ್ ಮಾಸೊಟ್ಟಿ ಅವರನ್ನು ಎದುರಿಸಿದ್ದರು. ಶನಿವಾರದ ಪಂದ್ಯದಲ್ಲಿ 12-10, 9-11, 14-12, 9-11, 11-6 ರಿಂದ ಸೋತರು. ಪಿಎಸ್‌ಎ ಕೂಟದ ಕಂಚು ಪದಕ ಮಟ್ಟದ ಪಂದ್ಯಾವಳಿ ಇದಾಗಿದೆ. ಇಲ್ಲಿ ಗೆದ್ದವರು ಹೆಚ್ಚಿನ ಶ್ರೇಯಾಂಕ ಪಡೆಯಲಿದ್ದಾರೆ. ನಾಕೌಟ್ ಮಾದರಿಯಲ್ಲಿ ನಡೆಯುವ ಈ ಕೂಟದಲ್ಲಿ ಅದೆಲ್ಲಾ ಚೋಟ್ರಾನಿ ಉತ್ತಮ ಪ್ರದರ್ಶನವೇ ನೀಡಿದ್ದರು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲೂ ನಿರೀಕ್ಷಿತ ಪೈಪೋಟಿಯನ್ನು ನೀಡಿದ್ದಾರೆ. ಪಂದ್ಯದ ಸೆಟ್‌ಗಳಲ್ಲಿ ಹಲವು ಬಾರಿ ಅವರು ಕಂಬ್ಯಾಕ್ ಮಾಡಿದರು. ಆದಾಗ್ಯೂ ಪಂದ್ಯ ಗೆಲ್ಲಲಾಗಲಿಲ್ಲ. ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಅಭಯ್ ಸಿಂಗ್, ರಮೀತ್ ಟೆಂಡನ್, ಜೋಶ್ನಾ ಚಿನ್ನಪ್ಪಾ ಈ ಮೊದಲೇ ಹೊರಬಿದ್ದಿದ್ದಾರೆ.

ಜೂಡೋ ಚಾಂಪಿಯನ್‌ಶಿಪ್: ಇನುಂಗಾನ್ಬಿಗೆ ಕಂಚು

ಹೊಸದಿಲ್ಲಿ: ಚೀನಾದ ಒರ್ಡೋಸ್ ನಗರದಲ್ಲಿ ನಡೆದ ಏಷ್ಯನ್ ಜೂಡೋ ಚಾಂಪಿಯನ್ಶಿಪ್ 2026ರಲ್ಲಿ ಭಾರತದ ತಬೆಲ್ಲಾಂಬಮ್ ಇನುಂಗಾನ್ಬಿ ಮಹಿಳೆಯರ ಮೈನಸ್ 70 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. 27 ವರ್ಷದ ಇನುಂಗಾನ್ಬಿಯ ಈ ಸಾಧನೆಯಿಂದ ಭಾರತಕ್ಕೆ ಈ ಸ್ಪರ್ಧೆಯಲ್ಲಿ 13 ವರ್ಷಗಳ ಬಳಿಕ ಪದಕ ಸಿಕ್ಕಿದೆ. ಕಂಚಿನ ಪದಕ ಪಂದ್ಯದಲ್ಲಿ ಅವರು ಮಂಗೋಲಿಯಾದ ಲ್ಖಾಗ್ವದುಲಮ್ ಸರಾಂಚೆಶ್ಲೆಗ್ ಅವರನ್ನು 'ಇಪ್ಪೋನ್' ಮೂಲಕ ಸೋಲಿಸಿ ಜಯ ಸಾಧಿಸಿದರು. ಇದಕ್ಕೂ ಮೊದಲು 2013ರಲ್ಲಿ ಬ್ಯಾಂಕಾಕ್ನಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಅಂಗೋಮ್ ಅನಿತಾ ಚಾನು ಮಹಿಳೆಯರ ಮೈನಸ್ 52 ಕೆಜಿ ವಿಭಾಗದಲ್ಲಿ ಕಂಚು ಗೆದ್ದಿದ್ದರು. ಇನ್ನೂ ಕಾಮನ್ವೆಲ್ತ್ ಕ್ರೀಡಾಕೂಟದ ಕಂಚಿನ ಪದಕ ವಿಜೇತೆ ತುಲಿಕಾ ಮಾನ್ ಮಹಿಳೆಯರ ಪ್ಲಸ್ 78 ಕೆಜಿ ವಿಭಾಗದಲ್ಲಿ ಅಂತಿಮ ದಿನದ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.

ಬೆಂಗಳೂರು ಗೆಲುವಿನೋಟಕ್ಕೆ ದಿಲ್ಲಿ ಬ್ರೇಕ್ | ರಾಹುಲ್, ಸ್ಟಬ್ಸ್ ಅರ್ಧಶತಕ | ಮಿಲ್ಲರ್ ಮಿಂಚಿನಾಟ

ಬೆಂಗಳೂರಲ್ಲಿ ಕ್ಯಾಪಿಟಲ್ಸ್ ಕಮಾಲ್

ಪೃಥ್ವಿರಾಜ್ ಕುಲಕರ್ಣಿ

ಬೆಂಗಳೂರು: ವಾರಾಂತ್ಯದ ಮಜೆ ಸವಿಯಲು ಬಂದ ಸಮಸ್ತ ಬೆಂಗಳೂರು ಅಭಿಮಾನಿಗಳಿಗೆ ಕೊನೆ ಓವರ್ ಥ್ರಿಲ್ ಸಿಕ್ಕರೂ ಗೆಲುವಿನ ಸಂತಸ ಸಿಗಲಿಲ್ಲ. ಕೆ.ಎಲ್. ರಾಹುಲ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಕಟ್ಟಿದ ಇನ್ನಿಂಗ್ಸ್‌ಗೆ ಡೆವಿಡ್ ಮಿಲ್ಲರ್ ಕಳಶ ಇಟ್ಟ ನಂತರ ದಿಲ್ಲಿ ಕ್ಯಾಪಿಟಲ್ಸ್ ಆರ್‌ಸಿಬಿಯನ್ನು 6 ವಿಕೆಟ್‌ಗಳಿಂದ ಸೋಲಿಸಿತು.

ಐತಿಹಾಸಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 100 ಪಂದ್ಯವಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬ್ಯಾಟಿಂಗ್ ಆಹ್ವಾನ ಪಡೆಯಿತು. ಫಿಲ್ ಸಾಲ್ಟ್ (63, 38ಎ, 4ಬೌ, 3ಸಿ) ಹಾಗೂ ಟೀಮ್ ಡೆವಿಡ್(26, 18ಎ, 3ಬೌ, 1ಸಿ) ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿತು. ದಿಲ್ಲಿ ಕ್ಯಾಪಿಟಲ್ಸ್ ಪರ ಸ್ಪಿನ್ನರ್ ಅಕ್ಷರ್ ಪಟೇಲ್(3-0-18-2), ಕುಲ್ದೀಪ್ ಯಾದವ್ (4-0-32-2) ಮಿಂಚಿದರು. ಗುರಿ ಬೆನ್ನತ್ತಿದ ದಿಲ್ಲಿ ರಾಹುಲ್ (57, 34ಎ, 6ಬೌ, 2ಸಿ) ಹಾಗೂ ಟ್ರಿಸ್ಟನ್ ಸ್ಟಬ್ಸ್*(60, 47ಎ, 4ಬೌ, 1ಸಿ) ಅವರ ಆಸರೆ ಪಡೆದು ಕೊನೆಯ ಓವರ್‌ನ ಥ್ರಿಲ್ಲಿಂಗ್‌ನಲ್ಲಿ ಡೆವಿಡ್(22, 10ಎ, 1ಬೌ, 2ಸಿ) ಅವರ ಅಬ್ಬರದರೊಂದಿಗೆ 19.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 179 ರನ್‌ಗಳಿಸಿ ಪಂದ್ಯ ಗೆದ್ದಿತು. ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ (4-0-26-3) ಹೋರಾಟ ನಡೆಸಿದರು.

ಬರ್ತ್‌ಡೇ ಬಾಯ್ ಕೆಎಲ್ ರಾಹುಲ್ ದಿಲ್ಲಿ ಪಾಲಿನ ಹೀರೋ. ಸ್ಟಬ್ಸ್ ಪಂದ್ಯದ ವಿನ್ನರ್ ಅನ್ನಿಸಿಕೊಂಡರು. ಆರ್‌ಸಿಬಿ ಪರ ಸಾಲ್ಟ್ ಮಿಂಚಿನಾಟ ಪ್ರದರ್ಶಿಸಿದರೆ, ಭುವನೇಶ್ವರ್ ಕುಮಾರ್ ಹೋಪ್ ಉಳಿಸಿದ ಆಪತ್ಬಾಂಧವ ಅನ್ನಿಸಿಕೊಂಡರು. ಈ ಗೆಲುವಿನೊಂದಿಗೆ ಆರ್‌ಸಿಬಿ ಐಪಿಎಲ್ ನಲ್ಲಿ 2ನೇ, ತವರಲ್ಲಿ ಮೊದಲನೇ ಸೋಲು ಎದುರಿಸಿತು.

ಆರ್‌ಸಿಬಿಗೆ ಉತ್ತಮ ಆರಂಭ: ಕೊಹ್ಲಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ್ದಾದರೂ 18 ರನ್ ಗಳಿಸಿದ್ದಾಗ, ಎನ್‌ಗಿಡಿಗೆ ಕ್ಯಾಚ್ ಆದರು. ಅತ್ತ ಇನ್ನೊಂದು ಬದಿಯಲ್ಲಿ ಸಾಲ್ಟ್ ಬೌಂಡರಿ ಸಿಕ್ಸರ್‌ಗಳೊಂದಿಗೆ ಮಿಂಚಿದರು. ಪಡಿಕ್ಕಲ್ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಜವಾಬ್ದಾರಿಕೆಗೆ ಬಿದ್ದರು. ಪವರ್‌ಪ್ಲೇನಲ್ಲಿ ಆರ್‌ಸಿಬಿ 59 ರನ್ ಗಳಿಸಿತು. ಮಧ್ಯಮ ಓವರ್ ಆರಂಭದಲ್ಲಿ ಸಾಲ್ಟ್ ಬಿರುಸಿನ ಬ್ಯಾಟಿಂಗ್ ಮಾಡಿದರು. ಆದರೆ ಅರ್ಧಶತಕ ಮುಗಿಸುತ್ತಲೇ ಕುಲ್ದೀಪ್‌ಗೆ ಕ್ಯಾಚ್ ಆದರು. ಟೀಮ್ ಡೆವಿಡ್ 26 ರನ್‌ಗೆ, ಶೆಫರ್ಡ್ 1 ರನ್‌ಗೆ ವಿಕೆಟ್ ಒಪ್ಪಿಸಿದರು. ಜಿತೇಶ್ ಶರ್ಮ ಸೆಟ್ ಆಗುವತ್ತ ಸಾಗಿದರು. ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು ಆರ್‌ಸಿಬಿ 84 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು. ಡೆತ್ ಓವರ್‌ನಲ್ಲಿ ಜಿತೇಶ್ ಹೆಚ್ಚಿನ ಬಾಲ್ ಎದುರಿಸಿದರೂ ಸ್ಕೋರ್ ಹಿಗ್ಗಿಸುವ ರನ್ ಮಾಡಲಿಲ್ಲ. ಪರಿಣಾಮ ಆರ್‌ಸಿಬಿ ಡೆತ್ ಓವರ್‌ನಲ್ಲಿ 27 ರನ್ ಮಾತ್ರ ಗಳಿಸಿತು. ಒಟ್ಟು ಇನ್ನಿಂಗ್ಸ್‌ನಲ್ಲಿ ಸಾಲ್ಟ್ ಅವರದ್ದೆ ಹೆಚ್ಚಿನ ಕೊಡುಗೆಯಿತ್ತು.

ರಾಹುಲ್ ಕಮಾಲ್: ಇತ್ತ ದಿಲ್ಲಿಗೆ ಆರಂಭದಲ್ಲೇ ಭಾರೀ ಆಘಾತ ಎದುರಾಯಿತು. ಭುವನೇಶ್ವರ್ ಕುಮಾರ್ ಕರಾರುವಾಕ್ ದಾಳಿ ಸಂಘಟಿಸಿ ನಿಸ್ಸಂಕಾ, ರಿಜ್ವಿ ಹಾಗೂ ಕರುಣ್ ನಾಯರ್ ವಿಕೆಟ್ ಕಿತ್ತರು. ಆದರೆ ಒಂದು ಬದಿಯಲ್ಲಿ ರಾಹುಲ್ ನಿಂತುಕೊಂಡರು. ತಮ್ಮ ಕ್ಲಾಸಿಕಲ್ ಆಟದೊಂದಿಗೆ ದಿಲ್ಲಿಗೆ ಆಸರೆಯಾದರು. ಅವರಿಗೆ ಸ್ಟಬ್ಸ್ ಸಾಥ್ ಸಿಕ್ಕಿತು. ಅಲ್ಲಿಗೆ ಪವರ್ ಪ್ಲೇ ಮುಕ್ತಾಯ. ದಿಲ್ಲಿ 50/3. ಮಧ್ಯಮ ಓವರ್‌ಗಳಲ್ಲಿ ರಾಹುಲ್ ಇನ್ನಷ್ಟು ಮಿಂಚಿನಾಟ ಪ್ರದರ್ಶಿಸಿ 30 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಹುಟ್ಟುಹಬ್ಬದಂದು ತವರಲ್ಲಿ ಅರ್ಧಶತಕ ಬಾರಿಸಿದ ಕನ್ನಡಿಗ ರಾಹುಲ್ ಆಟಕ್ಕೆ ಮೈದಾನವೇ ಸಂಭ್ರಮಿಸಿತು.

ಸ್ಟಬ್ಸ್ ಕೂಡಾ ಪಿಚ್‌ಗೆ ಹೊಂದಿಕೊಂಡಿದ್ದರು. ಇನ್ನೇನು ಪಂದ್ಯ ಮುಗಿಯಿತು, ದಿಲ್ಲಿಯತ್ತ ಸಾಗಿತು ಅನ್ನುವಷ್ಟರಲ್ಲಿ ದಾಳಿಗಿಳಿದ ಕೃಣಾಲ್ ಪಾಂಡ್ಯ ಆರ್‌ಸಿಬಿಗೆ ಮತ್ತೊಮ್ಮೆ ಆಪತ್ಬಾಂಧವರಾಗಿ ಕಾಣಿಸಿಕೊಂಡರು. 57 ರನ್‌ಗಳಿಸಿ ಆಕ್ರಮಣಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದ ರಾಹುಲ್ ಕೊಹ್ಲಿಗೆ ಕ್ಯಾಚ್ ಆದರು.

ಅಕ್ಷರ್ ಬರುತ್ತಲೇ ಸೆಟ್ ಆಗುವ ಜವಾಬ್ದಾರಿಕೆಗೆ ಬಿದ್ದರು. ಪಂದ್ಯ ನಿಧಾನಗತಿ ಪಡೆದುಕೊಂಡಿತು. ಕೊನೆಯ 3 ಓವರ್‌ಗಳಲ್ಲಿ ದಿಲ್ಲಿಗೆ 37 ರನ್ ಬೇಕಿದ್ದವು. ಅಲ್ಲಿಗೆ ಬಂದ ಹ್ಯಾಜೆಲ್ವುಡ್ 4 ರನ್ ಮಾತ್ರ ಬಿಟ್ಟುಕೊಟ್ಟರು. ಮುಂದಿನ ಓವರ್‌ನಲ್ಲಿ ಭುವನೇಶ್ವರ್ ಕುಮಾರ್ 12 ರನ್ ಬಿಟ್ಟುಕೊಟ್ಟರು. 2 ಓವರ್‌ಗಳಲ್ಲಿ 25 ರನ್ ಬೇಕಿದ್ದಾಗ ರಸಿಖ್ 10 ರನ್ ಬಿಟ್ಟುಕೊಟ್ಟರು.

ಚಿತ್ರ: ಮೋಹನ್ ಕುಮಾರ್ ಬಿ.ಎನ್.



ಸಂಕ್ಷಿಪ್ತ ಸ್ಕೋರ್

ಆರ್‌ಸಿಬಿ 20 ಓವರ್‌ಗಳಲ್ಲಿ 175/8: ಸಾಲ್ಟ್ 63, ಡೆವಿಡ್ 26; ಅಕ್ಷರ್ 18/2
ದಿಲ್ಲಿ 19.5 ಓವರ್‌ಗಳಲ್ಲಿ 179/4: ಸ್ಟಬ್ಸ್ 60★, ರಾಹುಲ್ 57; ಭುವನೇಶ್ವರ್ 26/3

ಡೆತ್ ಓವರ್‌ನಲ್ಲಿ ಆರ್‌ಸಿಬಿಗೆ ನಷ್ಟ

ಪವರ್‌ಪ್ಲೇನಲ್ಲಿ ಆರ್‌ಸಿಬಿ 1 ವಿಕೆಟ್ ಮಾತ್ರಕ್ಕೆ 59 ಗಳಿಸಿತು. ದಿಲ್ಲಿ 3 ವಿಕೆಟ್‌ಗೆ 50 ರನ್ ಮಾತ್ರ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಸಾಲ್ಟ್ ಆಸರೆಯೊಂದಿಗೆ ಆರ್‌ಸಿಬಿ 4 ವಿಕೆಟ್‌ಗೆ 89 ರನ್ ಗಳಿಸಿದರೆ, ದಿಲ್ಲಿ 1 ವಿಕೆಟ್‌ಗೆ 85 ರನ್ ಗಳಿಸಿತು. ಇನ್ನು ಡೆತ್ ಓವರ್‌ನಲ್ಲಿ ಭಾರೀ ಆಘಾತ ಎದುರಿಸಿ 27 ರನ್ ಮಾತ್ರ ಗಳಿಸಿ 3 ವಿಕೆಟ್ ಕಳೆದುಕೊಂಡಿತು. ಅತ್ತ ದಿಲ್ಲಿ ಅದೇ ಓವರ್ ಗಳಲ್ಲಿ ಯಾವುದೇ ವಿಕೆಟ್ ಇಲ್ಲದೆ 44 ರನ್‌ಗಳಿಸಿತು. ಬ್ಯಾಟಿಂಗ್ ವೇಳೆ ವಿಕೆಟ್‌ಗಳನ್ನು ಕಳೆದುಕೊಂಡ ಆರ್‌ಸಿಬಿ ಬೌಲಿಂಗ್ ಸಮಯದಲ್ಲಿ ಹೆಚ್ಚಿನ ರನ್ ಬಿಟ್ಟುಕೊಟ್ಟು ಡೆತ್ ಓವರ್‌ನಲ್ಲೇ ಸೋಲನುಭವಿಸಿತು.

ಗೆಲ್ಲಿಸಿದ ಮಿಲ್ಲರ್

ದಿಲ್ಲಿಗೆ ಕೊನೆಯ ಓವರ್‌ನಲ್ಲಿ 15 ರನ್ ಬೇಕು. ಕೊನೆಯ ಓವರ್ ಮಾಡಲು ಶೇಫರ್ಡ್ ಬಂದರು. ಅವರಿಗದು ಮೊದಲನೇ ಓವರ್. ಮೊದಲೆರಡು ಬಾಲ್‌ಗಳಲ್ಲಿ 2 ರನ್ ಮಾತ್ರ ಬಂದವು. ಪಂದ್ಯ ತೀರಾ ರೋಚಕ ಹಂತಕ್ಕೆ ಹೋಯಿತು. ಮಿಲ್ಲರ್ ಮುಂದಿನ ಮೂರು ಬಾಲ್‌ಗಳಲ್ಲಿ 2 ಸಿಕ್ಸರ್ ಹಾಗೂ 1 ಬೌಂಡರಿ ಬಾರಿಸಿ ಗೆಲ್ಲಿಸಿದರು.

ಚಿನ್ನಸ್ವಾಮಿಯಲ್ಲಿ ಆರ್‌ಸಿಬಿಗೆ 100ನೇ ಪಂದ್ಯ

ಅಂದು ಏಪ್ರಿಲ್ 18, 2008. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣವನ್ನು ತವರು ಮೈದಾನವಾಗಿ ಆರಿಸಿಕೊಂಡಿದ್ದ ಆರ್‌ಸಿಬಿ, ತನ್ನ ಮೊದಲ ಪಂದ್ಯವನ್ನು ಕೆಕೆಆರ್ ವಿರುದ್ಧ ಆಡಿತ್ತು. ವಿಶೇಷ ಕಾಕತಾಳಿಯೊಂದರಲ್ಲಿ ಶನಿವಾರದಂದು ಅದೇ ದಿನಾಂಕದಂದೇ ಆರ್‌ಸಿಬಿ ತನ್ನ ನೂರನೇ ತವರು ಪಂದ್ಯವಾಡಿದೆ. ಶನಿವಾರ ದಿಲ್ಲಿ ವಿರುದ್ಧ ನಡೆದಿದ್ದ ಪಂದ್ಯದ ವೇಳೆ ಆರ್‌ಸಿಬಿ ಚಿನ್ನಸ್ವಾಮಿಯಲ್ಲಿ ನೂರು ಪಂದ್ಯವಾಡುವ ಮೂಲಕ ತವರಲ್ಲಿ ಹೆಚ್ಚು ಪಂದ್ಯವಾಡಿದ ತಂಡ ಅನ್ನಿಸಿಕೊಂಡಿತು. ಇದರೊಂದಿಗೆ ತವರು ಮೈದಾನದಲ್ಲಿ ಅತಿ ಹೆಚ್ಚು ಪಂದ್ಯವನ್ನಾಡಿದ ದಾಖಲೆ ಮಾಡಿತು.

ಹೆಚ್ಚು ತವರು ಪಂದ್ಯವಾಡಿದ ತಂಡಗಳು

ತಂಡ	ಕ್ರೀಡಾಂಗಣ	ಪಂದ್ಯ
ಬೆಂಗಳೂರು	ಚಿನ್ನಸ್ವಾಮಿ	100*
ಕೆಕೆಆರ್	ಈಡನ್ ಗಾರ್ಡನ್ಸ್	98*
ಮುಂಬೈ	ವಾಂಖೆಡೆ	95*

ರಾಜಸ್ಥಾನ ರಾಯಲ್ಸ್‌ಗೆ ಆತ್ಮವಿಶ್ವಾಸ | 2ನೇ ಪಂದ್ಯ: ಪಂಜಾಬ್-ಲಖನೌ

ಇಂದಾದರೂ ಗೆಲ್ಲುತ್ತಾ ಕೆಕೆಆರ್?

ಕೋಲ್ಕತ್ತಾ: ಸತತ ಸೋಲುಗಳಿಂದ ಪಂದ್ಯಾವಳಿಯಲ್ಲಿ ಈಗಾಗಲೇ ಭಾರೀ ಹಿನ್ನಡೆ ಅನುಭವಿಸಿರುವ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ಕಳೆದ ಪಂದ್ಯದಲ್ಲಿ ಸೋತು ಅಗ್ರಸ್ಥಾನದಿಂದ ಕೆಳಗಿಳಿದಿರುವ ರಾಜಸ್ಥಾನ ರಾಯಲ್ಸ್ ತಂಡಗಳು ಭಾನುವಾರದ ಸೂಪರ್ ವೀಕೆಂಡ್ನ ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಶುಕ್ರವಾರವಷ್ಟೇ ತಮ್ಮ ನಾಲ್ಕನೇ ಪಂದ್ಯ ಸೋತಿರುವ ಕೋಲ್ಕತ್ತಾ ಪಡೆ ಇನ್ನೂ ಗೆಲುವಿನ ಖಾತೆ ತೆರದಿಲ್ಲ. ಪಂಜಾಬ್ ವಿರುದ್ಧ ನಡೆಯಬೇಕಿದ್ದ ಪಂದ್ಯ ರದ್ದಾದ ಬೆನ್ನಲ್ಲೇ ಒಂದು ಅಂಕ ಮಾತ್ರ ಪಡೆದಿರುವ ರಹಾನೆ ಪಡೆ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ. ಇತ್ತರ ರಾಜಸ್ಥಾನ ಪಂದ್ಯಾವಳಿಯ ಆರಂಭಿಕ ಪಂದ್ಯಗಳನ್ನು ಭರ್ಜರಿ ಗೆಲುವು ಸಾಧಿಸಿತ್ತು. ಆದರೆ ಕಳೆದ ಪಂದ್ಯದಲ್ಲಿ ಸೋಲನುಭವಿಸಿದ್ದು, ಪುಟಿದೇಳುವ ತವಕದಲ್ಲಿದೆ. ಈಡನ್ ಗಾರ್ಡನ್ಸ್‌ನಲ್ಲಿ ಪಂದ್ಯ ನಡೆಯಲಿದೆ.

ಇತ್ತ ಎರಡನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಹಾಗೂ ಲಖನೌ ಸೂಪರ್ ಜೇಂಟ್ಸ್ ತಂಡಗಳು ಎದುರಾಗಲಿವೆ. ಗೆಲುವಿನ ನಾಗಾಲೋಟ ಮುಂದುವರಿಸಿರುವ ಪಂಜಾಬ್ ಕಿಂಗ್ಸ್ ಆಡಿರುವ ಎಲ್ಲಾ ಪಂದ್ಯಗಳಲ್ಲಿ ಗೆದ್ದಿದೆ. ಇತ್ತ ಲಖನೌ ಸೂಪರ್ ಜೇಂಟ್ಸ್ 3 ಪಂದ್ಯಗಳಲ್ಲಿ ಸೋತಿದ್ದು, ಭಾರೀ ನಿರಾಸೆ ಮೂಡಿಸಿದೆ. ಅಗ್ರಸ್ಥಾನದಲ್ಲಿ ಮುಂದುವರಿಯುವ ವಿಶ್ವಾಸದಲ್ಲಿ ಪಂಜಾಬ್ ಕಾಣಿಸಿಕೊಂಡರೆ, ಇತ್ತ ಲಖನೌ ಗೆಲುವಿನ ಹಳಿಗೆ ಮರಳಲು ಯತ್ನಿಸಲಿದೆ. ಈ ಪಂದ್ಯವು ಚಂಡೀಗಢದಲ್ಲಿ ನಡೆಯಲಿದೆ.

ಪಂದ್ಯದ ವಿವರ

ಆರ್‌ಆರ್-ಕೋಲ್ಕತ್ತಾ
ಎಲ್ಲಿ: ಕೋಲ್ಕತ್ತಾ
ಯಾವಾಗ: ಭಾನುವಾರ
ಸಮಯ: ಮಧ್ಯಾಹ್ನ 3:30

ಪಂಜಾಬ್-ಲಖನೌ
ಎಲ್ಲಿ: ಚಂಡೀಗಢ
ಯಾವಾಗ: ಭಾನುವಾರ
ಸಮಯ: ಸಂಜೆ 7:30





ಆರ್‌ಆರ್ vs ಕೋಲ್ಕತ್ತಾ

ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಭಾನುವಾರ ಎದುರಾಗುತ್ತಿರುವ ತಂಡಗಳ ಪೈಕಿ ಒಂದು ತಂಡ ಗೆಲುವಿನ ಲಯದಲ್ಲಿದೆ. ಅಗ್ರಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿದೆ. ಇನ್ನು ಎರಡನೇ ತಂಡಕ್ಕೆ ಈವರೆಗೂ ಗೆಲುವಿಲ್ಲ. ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ ಕೆಕೆಆರ್ ಬೌಲಿಂಗ್‌ನಲ್ಲಿ ಅನುಭವದ ಕೊರತೆ ಎದುರಿಸುತ್ತಿದೆ. ತಂಡದಲ್ಲಿ ಫಿನ್, ಸೈಫರ್ಟ್, ರಹಾನೆ, ರಿಂಕು, ಗ್ರಿನ್ ಅಂಥವರಿದ್ದರೂ ಯಾರೊಬ್ಬರೂ ಲಯದಲ್ಲಿಲ್ಲ. ಕಳೆದ ಪಂದ್ಯದಲ್ಲಿ ಗ್ರೀನ್ ಉತ್ತಮ ಬ್ಯಾಟಿಂಗ್ ಮಾಡಿದ್ದಾದರೂ ಡೆತ್ ಓವರ್‌ನಲ್ಲಿ ರನ್ ಮಾಡಲಾಗಿಲ್ಲ. ಬೌಲಿಂಗ್ ವಿಭಾಗದಲ್ಲಿ ನರೈನ್, ವರುಣ್, ವೈಭವ್ ಹಾಗೂ ವರುಣ್ ಅಂಥವರಿದ್ದರೂ ಲಯದಲ್ಲಿಲ್ಲ. ಇತ್ತ ರಾಜಸ್ಥಾನ ಪರ ಪ್ರತಿಯೊಬ್ಬರೂ ಅಬ್ಬರಿಸಿದ್ದಾರೆ. ಕಳೆದ ಪಂದ್ಯಗಳಲ್ಲಿ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವದ ಗಮನ ಸೆಳೆದಿದ್ದಾರೆ. ಇತ್ತ ಜೈಸ್ವಾಲ್ ಕೂಡ ಅದೇ ಲಯದಲ್ಲಿದ್ದು ವಿಶ್ವಾಸ ಹೆಚ್ಚಿಸಿದೆ. ಮಧ್ಯಮ ಕ್ರಮಾಂಕದಲ್ಲಿ ಪರಾಗ್ ಮಿಂಚಬೇಕಿದೆ. ಇತ್ತ ಹೆಟ್ಮೇರ್ ಕಡೆಯಿಂದ ಹೆಚ್ಚಿನ ರನ್‌ಗಳು ಬಂದಿಲ್ಲ. ಫೆರಾರಿಯಾ ಕಳೆದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ್ದಾರೆ. ಜಡೇಜಾ ಕೂಡ ಉತ್ತಮ ಬ್ಯಾಟಿಂಗ್ ಮಾಡಿರುವುದು ಬಲ ಹೆಚ್ಚಿಸಿದೆ. ಬೌಲಿಂಗ್ ವಿಭಾಗದಲ್ಲಿ ಆರ್ಚರ್ ತಮ್ಮ ಅಸಲು ಬೌಲಿಂಗ್ ಪ್ರದರ್ಶನ ನೀಡುತ್ತಿದ್ದಾರೆ. ಬರ್ಗರ್ ಕೂಡ ಅಷ್ಟೇ ಅಚ್ಚುಕಟ್ಟಾದ ಬೌಲಿಂಗ್ ಮಾಡಿದ್ದಾರೆ. ಸ್ಪಿನ್ನರ್ ರವಿ ಬಿಷ್ಣೋಯ್ ಗೆಲುವಿನಾಟವಾಡಿದ್ದಾರೆ.

ಪಂಜಾಬ್-ಲಖನೌ ಪಂದ್ಯ

ಎರಡನೇ ಪಂದ್ಯವೂ ಸ್ಟಾರ್ ವಾರ್‌ಗೆ ಸಾಕ್ಷಿಯಾಗಲಿದೆ. ರಿಷಭ್ ಪಂತ್ ನೇತೃತ್ವದ ಲಖನೌ ಸೂಪರ್ ಜೇಂಟ್ಸ್ ಅಯ್ಯರ್ ನೇತೃತ್ವದ ಪಂಜಾಬ್ ತಂಡವನ್ನು ಎದುರಿಸಲಿದೆ. ಹಿಂದಿನ ಪಂದ್ಯಗಳಲ್ಲಿ ಪಂಜಾಬ್ ಗೆಲುವಿನ ನಗಾರಿ ಬಾರಿಸುತ್ತಾ ಬಂದಿದೆ. ಆಡಿರುವ ಎಲ್ಲಾ ಪಂದ್ಯಗಳಲ್ಲಿ ಶ್ರೇಯಸ್ ಪಡೆ ಗೆಲುವಿನ ಆಟವಾಡಿದೆ. ಇತ್ತ ಲಖನೌ ಸೋಲುಗಳಿಂದ ಕಂಗೆಟ್ಟಿದೆ. ಪಂಜಾಬ್ ಪಡೆಯಲ್ಲಿ ದೊಡ್ಡ ಹಿಟ್ಟರ್ ಗಳಿದ್ದಾರೆ. ಪ್ರಭುಸಿಮ್ರನ್, ಪ್ರಿಯಾಂಶ್, ಶ್ರೇಯಸ್ ಸೇರಿದಂತೆ ಪ್ರಮುಖ ಬ್ಯಾಟರ್‌ಗಳಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಶಶಾಂಕ್, ಸ್ಟೋಯಿನಿಸ್ ಕೂಡ ಉತ್ತಮ ಲಯದಲ್ಲಿದ್ದಾರೆ. ಇತ್ತ ಬೌಲಿಂಗ್‌ನಲ್ಲಿ ಅರ್ಷದೀಪ್ ಸಿಂಗ್, ಬಾರ್ಟ್‌ಲೆಟ್, ಯಾನ್ಸನ್ ಉತ್ತಮ ಬೌಲಿಂಗ್ ಮಾಡಿದ್ದಾರೆ. ಗೆಲುವಿನ ಹಳಿಯಲ್ಲೇ ಉಳಿಯಲು ಪಂಜಾಬ್ ಅದೇ ಆಟ ಮುಂದುವರಿಸಬೇಕಿದೆ. ಇತ್ತ ಲಖನೌ ಪರ ಇಬ್ಬರೂ ಆರಂಭಿಕರು ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಿಲ್ಲ. ನಾಯಕ ರಿಷಭ್ ಪಂತ್ ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಲಯಕಿದ ಹುಡುಕಾಟದಲ್ಲಿದ್ದಾರೆ. ಪೂರನ್ ಪ್ರತಿ ಪಂದ್ಯದಲ್ಲೂ ಹಿನ್ನಡೆ ಅನುಭವಿಸಿ ದ್ದಾರೆ. ಇನ್ನು ಬೌಲಿಂಗ್‌ನಲ್ಲಿ ಶಮಿ, ಪ್ರಿನ್ಸ್ ಬಿಟ್ಟು ಇನ್ನುಳಿದವರು ಹಿನ್ನಡೆ ಅನುಭವಿಸಿದ್ದಾರೆ. ಲಖನೌ ಪುಟಿದೇಳಬೇಕಾದರೆ ಬ್ಯಾಟಿಂಗ್ ಬಲ ಹೆಚ್ಚಿಸಿಕೊಳ್ಳಬೇಕಿದೆ.

ಚೆನ್ನೈಗೆ ಕಠಿಣ ಗುರಿ



ಹೈದರಾಬಾದ್: ಅಭಿಷೇಕ್ ಶರ್ಮಾ ಮತ್ತು ಹೆನ್ರಿಚ್ ಕ್ಲಾಸೆನ್ ಅವರ ಅದ್ಭುತ ಬ್ಯಾಟಿಂಗ್ ನೆರವಿನಿಂದಾಗಿ ಚೆನ್ನೈ ವಿರುದ್ಧದ ಪಂದ್ಯದಲ್ಲಿ ಹೈದರಾಬಾದ್ ಸ್ಪರ್ಧಾತ್ಮಕ ಗುರಿ ನೀಡಿದೆ. ಒಂದು ಹಂತದಲ್ಲಿ 10ಕ್ಕೂ ಅಧಿಕ ರನ್‌ರೇಟ್ ಉಳಿಸಿಕೊಂಡಿದ್ದ ಹೈದರಾಬಾದ್ ಕೊನೆಯಲ್ಲಿ ಅಲ್ಪ ಎಡವಿತು. ಆದಾಗ್ಯೂ ಮೊದಲು ಬ್ಯಾಟಿಂಗ್ ಆಹ್ವಾನ ಪಡೆದ ನಂತರ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 194 ರನ್ ಗಳಿಸಿದೆ.

ಪವರ್‌ಪ್ಲೇನ ಕೊನೆ ಎರಡು ಬಾಲ್‌ಗಳಲ್ಲಿ ಎರಡು ವಿಕೆಟ್ ಬೀಳುವ ಮುನ್ನ ಚೆನ್ನೈ ತಂಡವನ್ನು ಹೈದರಾಬಾದ್ ದಂಡಿಸಿತು. ಅಭಿಷೇಕ್ ಶರ್ಮ ಸಿಕ್ಸರ್‌ಗಳ ಸುರಿಮಳೆಗೈದರೆ ಟ್ರಾವಿಸ್ ಹೆಡ್ ಚೆನ್ನೈನ ಹಡೆಮುರಿ ಕಟ್ಟಿದರು. ಶುರುವಿನಿಂದಲೇ ರನ್‌ರೇಟ್ ಹೆಚ್ಚಿಸಿದ ಈ ಜೋಡಿ ಚೆನ್ನೈ ಮೇಲೆ ಒತ್ತಡ ಹೇರಿತು. 4 ಸಿಕ್ಸರ್, 5 ಬೌಂಡರಿ ಬಾರಿಸಿದ ಅಭಿಷೇಕ್ ಶರ್ಮ 15 ಬಾಲ್ ಗಳಲ್ಲಿ ಅರ್ಧಶತಕ ಬಾರಿಸಿದುರು. ಇತ್ತ ಹೆಡ್ ಕೂಡ 20 ರನ್ ದಾಟಿದರು. 5.4 ಓವರ್‌ಗಳಲ್ಲಿ ಹೈದರಾಬಾದ್ 75 ರನ್ ಗಳಿಸಿತ್ತು. ಮುಕೇಶ್ ಚೌಧರಿ ಪವರ್‌ಪ್ಲೇನ ಕೊನೆಯ ಓವರ್ ಮಾಡಲು ಬಂದರು. ಮೊದಲಿನ ನಾಲ್ಕು ಬಾಲ್‌ಗಳಲ್ಲಿ ದಂಡಿಸಿಕೊಂಡ ಅವರು, ಸರಸರನೇ ಹೆಡ್ ಹಾಗೂ ಕಿಶನ್ ವಿಕೆಟ್ ಪಡೆದರು. ಪವರ್‌ಪ್ಲೇ 75/2ಕ್ಕೆ ಮುಕ್ತಾಯಗೊಂಡಿತು.

ಮಧ್ಯಮ ಓವರ್‌ಗಳಲ್ಲಿ ಅಭಿಷೇಕ್ ಅರ್ಭಟ ನಿಂತಿತು. ಓವರ್ ಟನ್ ಅವರಿಗೆ ಪೆವಿಲಿಯನ್ ತೋರಿದರು. ಕ್ಲಾಸೆನ್ ನಿಂತು ಆಡುವ ಜವಾಬ್ದಾರಿ ಹೊತ್ತಿಕೊಂಡರು. ಸೆಟ್ ಆಗುತ್ತಲೇ ದಂಡಿಸಲಾರಂಭಿಸಿದ ಅವರು 32 ಬಾಲ್ ಗಳಲ್ಲಿ ಅರ್ಧಶತಕ ಪೂರೈಸಿದರು. 14.3 ಓವರ್‌ಗಳಲ್ಲಿ ಹೈದರಾಬಾದ್ 150 ರನ್ ದಾಟಿತ್ತು. ದೊಡ್ಡ ಸ್ಕೋರ್‌ನತ್ತ ಸಾಗಿತ್ತು. ಆದರೆ ಈ ಹಂತದಲ್ಲಿ ಪುಟಿದೆದ್ದ ಚೆನ್ನೈ ಬೌಲರ್‌ಗಳು ಹೈದರಾಬಾದ್‌ನ ಮಧ್ಯಮ ಕ್ರಮಾಂಕವನ್ನು ಪೆವಿಲಿಯನ್‌ಗಟ್ಟಿತ್ತು. ಅನಿಕೇತ್ 2, ರೆಡ್ಡಿ 12, ಅರೋರಾ 13 ರನ್‌ಗೆ ವಿಕೆಟ್ ಕೊಟ್ಟರು. ರನ್‌ರೇಟ್ ಇಳಿಯಿತು. ಮಧ್ಯಮ ಓವರ್‌ಗಳಲ್ಲಿ ಹೈದರಾಬಾದ್ 88 ರನ್‌ಗಳಿಸಿತು.

ಇನ್ನು ಡೆತ್ ಓವರ್‌ನಲ್ಲಿ ತೀರಾ ಹಿನ್ನಡೆ ಅನುಭವಿಸಿದ ಹೈದರಾಬಾದ್ 4 ವಿಕೆಟ್ ಕಳೆದುಕೊಂಡಿತು. ಯಾರೊಬ್ಬರೂ ನಿಲ್ಲಲಿಲ್ಲ. ಕ್ಲಾಸೆನ್ 59 ರನ್ ಗೆ ವಿಕೆಟ್ ಒಪ್ಪಿಸಿದರು. ಶಿವಾಂಗ್ ಕುಮಾರ್ 12 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದ್ದಾದರೂ 200 ರನ್ ಮುಟ್ಟಲಾಗಲಿಲ್ಲ.

ಕೆಕೆಆರ್ ವಿರುದ್ಧ ಗುಜರಾತ್‌ಗೆ ಗೆಲುವು

ಅಹಮದಾಬಾದ್: ತಮ್ಮ ಅಸಲು ಲಯಕ್ಕೆ ಮರಳಿರುವ ಗುಜರಾತ್ ತಂಡದ ನಾಯಕ ಶುಭಮನ್ ಗಿಲ್ ಸೋಲಿನಲ್ಲಿ ಸಿಲುಕಿರುವ ಕೆಕೆಆರ್‌ಗೆ ಮತ್ತಷ್ಟು ಆಘಾತ ನೀಡಿದರು. ಅಹಮದಾಬಾದ್ ಅಂಗಳದಲ್ಲಿ 181 ಸ್ಪರ್ಧಾತ್ಮಕ ಗುರಿ ಪಡೆದ ಗುಜರಾತ್ 19.4 ಓವರ್‌ಗಳಲ್ಲಿ ಪಂದ್ಯ ಮುಗಿಸಿತು. ಇದರೊಂದಿಗೆ ಐದನೇ ಸೋಲು ಕಂಡಿರುವ ಕೆಕೆಆರ್ ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿತು.



ಬ್ಯಾಟಿಂಗ್ ಆಹ್ವಾನ ಪಡೆದ ಕೆಕೆಆರ್ 180 ರನ್‌ಗಳಿಗೆ ಆಲೌಟ್ ಆಯಿತು. ಗ್ರೀನ್ 79 ರನ್‌ಗಳಿಸಿ ಹೋರಾಡಿದರು. ರಬಾಡ 3 ವಿಕೆಟ್ ಪಡೆದು ಮಿಂಚಿದರು. ಗುರಿ ಬೆನ್ನತ್ತಿದ ಗುಜರಾತ್ 19.4 ಓವರ್ ಅನ್ನುವಷ್ಟರಲ್ಲಿ 181 ರನ್ ಗಳಿಸಿ ಗುರಿ ಮುಟ್ಟಿತು. ಗಿಲ್ 86 ರನ್ ಗಳಿಸಿದರು, ಬಟ್ಲರ್ 25, ಸುದರ್ಶನ್ 22 ರನ್ ಗಳಿಸಿ ಸಾಥ್ ಕೊಟ್ಟರು. ಕೆಕೆಆರ್ ಪರ ವರುಣ್ 2 ವಿಕೆಟ್ ಪಡೆದರು.


ಉಭಯ ತಂಡಗಳ ರನ್ ಮಟ್ಟ ಗಮನಿಸಿದಾಗ ಆರಂಭಿಕ ಓವರ್‌ಗಳಲ್ಲಿ ಕೆಕೆಆರ್ 37 ರನ್ ಗಳಿಸಿತು. ಅತ್ತ ಗುಜರಾತ್ 71 ರನ್ ಬಾರಿಸಿತು. ಮಧ್ಯಮ ಓವರ್‌ಗಳಲ್ಲಿ ಗ್ರೀನ್ ಅತ್ಯುತ್ತಮ ಬ್ಯಾಟಿಂಗ್ ಮಾಡಿದ ಪರಿಣಾಮ ಪುಟಿದೆದ್ದ ಕೆಕೆಆರ್ 7-15 ಓವರ್‌ಗಳಲ್ಲಿ 120 ರನ್‌ಗಳಿಸಿತು, 3 ವಿಕೆಟ್ ಕಳೆದುಕೊಂಡಿತು. ಇತ್ತ ಗುಜರಾತ್ ಗಿಲ್ ಅವರ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಧ್ಯಮ ಓವರ್‌ಗಳಲ್ಲಿ ಮಿಂಚಿತು.

ಅರ್ಧಶತಕ ಪೂರೈಸಿಕೊಂಡ ಅವರು, ಪಂದ್ಯ ಗತಿ ಬದಲಾಯಿಸಿದರು. ಕೆಕೆಆರ್‌ಗೆ ಯಾವುದೇ ಅವಕಾಶ ಸಿಗಲಿಲ್ಲ. 7-15 ಓವರ್‌ಗಳಲ್ಲಿ ಗುಜರಾತ್ 78 ರನ್‌ಗಳಿಸಿತು.

ಡೆತ್ ಓವರ್‌ಗಳಲ್ಲಿ ಕೆಕೆಆರ್ ತೀರಾ ಹಿನ್ನಡೆ ಅನುಭವಿಸಿತು. ಕರಾರುವಾಕ್ ದಾಳಿ ಮಾಡಿದ ರಬಾಡ ಡೆತ್‌ನಲ್ಲಿ ಹೆಚ್ಚಿನ ರನ್ ಬಿಟ್ಟುಕೊಡಲೇ ಇಲ್ಲ. ಅಲ್ಲಿ ಕೇವಲ 24 ರನ್‌ಗಳಿಸಿದ ಕೆಕೆಆರ್ 4 ವಿಕೆಟ್ ಕಳೆದುಕೊಂಡಿತು. ಇನ್ನು ಗುಜರಾತ್ ಗೆ ಒತ್ತಡ ಇರಲಿಲ್ಲ. ಗಿಲ್ 86 ರನ್‌ಗಳಿಸಿ ವಿಕೆಟ್ ಒಪ್ಪಿಸಿದ್ದಾದರೂ ಹೆಚ್ಚಿನ ರನ್ ಗಳಿಸಬೇಕಿರಲಿಲ್ಲ. ಬೇಕಿದ್ದ 32 ರನ್‌ಗಳನ್ನು ಸುಂದರ್ ಮತ್ತು ಫಿಲಿಪ್ಸ್ ಗಳಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5958

ಎಡದಿಂದ ಬಲಕ್ಕೆ
2. ಕೃಪೆ ಮಾಡಿ ಕೊಡು-ಕರುಣೆಯಿಂದ ನೀಡು (5)
5. ವಾಯುದೇವತೆ, ಗಾಳಿ (3)
6. ಬರೆಹ ರೂಪದಲ್ಲಿರುವಂಥಹದ್ದು (3)
7. ನಿಗದಿತ ದಿನದಂದು ಹೊರಟದ್ದು ಈ ಹೊಳೆಯೆಡೆಗೆ (2)
9. ಈತ ಸಾತ್ವಿಕ ಸ್ವಭಾವದ ವ್ಯಕ್ತಿ (2)
11. ವ್ಯತ್ಯಾಸ ತಿಳಿಸಲು ಆನೆಯೊಂದಿಗೆ ಬಂದ ಪ್ರಾಣಿ (2)
12. ಸೈನ್ಯ-ಗುಂಪಿನ ಒಂದು ಭಾಗ (2)
15. ನರನಿಗೆ ವಾರ ಕೇಳಿದ ಕಪಿ (3)
16. ತುಂಬಾ ಶಿಥಿಲಗೊಂಡದ್ದು (3)
17. ಆತುರ ಪಡು, ಗಡಿಬಿಡಿ ಮಾಡು (5)

ಮೇಲಿನಿಂದ ಕೆಳಕ್ಕೆ
1. ತಾಳೆಯ ಮರದ ಎಲೆಯಿದು (4)
2. ರಾವಣನ ಒಂದು ಹೆಸರು (4)
3. ಸುಲಭ ಎಂಬರ್ಥದ ಸುಂದರವಾದದ್ದು (4)
4. ನ್ಯಾಯಬೆಲೆ ಅಂಗಡಿಯಲ್ಲಿ ಸಿಗುವ ದಿನಸಿ (4)
8. ವಿಜಯ ಪಡೆದ ದೇವತೆ (3)
9. ಸಾದೃಶ್ಯವಾದ ಸಂಭಾಷಣೆ (3)
10. ಚಿಕಿತ್ಸಾಲಯವಿದು (4)
11. ಹೂವಿನ ರಾಜ, ಈ ಕಮಲ (4)
13. ಆನಂದ ಭಾಷ್ಪವಿಲ್ಲಿ ತಲೆಕೆಳಗಾಗಿದೆ (4)
14. ಬಾಗಿಲಿಗೆ ಆಸರೆಯಾದ ಚೌಕಟ್ಟು (4)

5957 ಉತ್ತರ

ಎಡದಿಂದ ಬಲಕ್ಕೆ:
2. ಕೊಡುಗೈ
5. ರತ್ನಾಕರ 6. ರಹದಾರಿ
7. ಪುದೀನ 9. ಆಧಾರ
10. ತೇಲಿಸು 11. ಮಶಕ
15. ಮಾತುಮೀರು
16. ವಕ್ರತುಂಡ 17. ಹಗಲು

ಮೇಲಿನಿಂದ ಕೆಳಕ್ಕೆ :
1. ಸುರರಿಪು 2. ಕೊರಡು
3. ಗೈರತ್ತು 4. ಹರಿಹರ
8. ನನಸು 9. ಆಯಾಮ
10. ತೇಲುಮಾತು
12. ಕನ್ನಡಕ 13. ಹರುಷ
14. ಕವಲು

ಸರ್ಕಾರಿ ನ್ಯಾಯಬೆಲೆ ಅಂಗಡಿ ಶೀರ್ಷಿಕೆಗೀತೆ ಸಿಎಂ ಬಿಡುಗಡೆ

- ಸಾಮಾಜಿಕ ಕಳಕಳಿಯ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರಕ್ಕೆ ಸಿ.ಎಂ ಮೆಚ್ಚುಗೆ
- ಪೋಸ್ಟ್ ಪ್ರೊಡಕ್ಷನ್ ಕೆಲಸ ಮುಗಿಸಿಕೊಂಡು ತೆರೆಗೆ ಬರಲು ಸಿದ್ದವಾದ 'ಸರ್ಕಾರಿ ನ್ಯಾಯಬೆಲೆ ಅಂಗಡಿ'





ಸಾಮಾಜಿಕ ಕಥಾಹಂದರವನ್ನು ಇಟ್ಟುಕೊಂಡು ತಯಾರಾಗಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರ ಇದೀಗ ತೆರೆಗೆ ಬರಲು ಸಿದ್ದವಾಗಿದೆ. ಈಗಾಗಲೇ ತನ್ನ ಬಹುತೇಕ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಶೀರ್ಷಿಕೆ ಗೀತೆ ಇತ್ತೀಚೆಗೆ ಬಿಡುಗಡೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಚಿತ್ರದ ಶೀರ್ಷಿಕೆ ಗೀತೆಯನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಸಿನಿಮಾದ ಹೆಸರೇ ಹೇಳುವಂತೆ, ಇದು 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಮತ್ತು ಪಡಿತರ ವ್ಯವಸ್ಥೆಯ ಸುತ್ತ ನಡೆಯುವ ಕಥಾಹಂದರ ಒಳಗೊಂಡ ಚಿತ್ರವಾಗಿದೆ. ಪಕ್ಕಾ ಗ್ರಾಮೀಣ ಸೊಗಡಿನ ಕಥೆಯನ್ನು ಒಳಗೊಂಡಿರುವ ಈ ಚಿತ್ರದ ಸಂಪೂರ್ಣ ಚಿತ್ರೀಕರಣವನ್ನು ಮಂಡ್ಯ ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳಲ್ಲೇ ನಡೆಸಿರುವುದು ವಿಶೇಷ.

ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಶೀರ್ಷಿಕೆ ಗೀತೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಮುಖ್ಯಮಂತ್ರಿ, ಸಿದ್ದರಾಮಯ್ಯ, 'ಸಿನಿಮಾ ಎಂಬುದು ಬಹಳ ಪ್ರಭಾವಶಾಲಿ ಮಾಧ್ಯಮ. ಸಿನಿಮಾಗಳ ಮೂಲಕ ವಾಸ್ತವ ವಿಷಯಗಳನ್ನು ಬಹಳ ಬೇಗ ಜನರಿಗೆ ತಲುಪಿಸಬಹುದು. 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರವು ವಾಸ್ತವ ಸ್ಥಿತಿಯನ್ನು ಕಥಾಹಂದರವಾಗಿ ಇಟ್ಟುಕೊಂಡು ತಯಾರಾಗಿರುವುದು ಶ್ಲಾಘನೀಯ. ಜನ ಸಾಮಾನ್ಯರು, ಬಡವರು ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 'ಸರ್ಕಾರಿ ನ್ಯಾಯಬೆಲೆ ಅಂಗಡಿ'ಗಳ ಮೂಲಕ ದಿನಸಿ ಮತ್ತು ಆಹಾರ ಪದಾರ್ಥಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದೆ. ಆದರೆ, ಈ ವ್ಯವಸ್ಥೆಯಲ್ಲಿರುವ ಕೆಲವು ಲೋಪ ದೋಷಗಳಿಂದ ಇದರ ಉದ್ದೇಶ ಅಷ್ಟು ಪರಿಣಾಮಕಾರಿಯಾಗಿ ಈಡೇರುತ್ತಿಲ್ಲ, ಈಗ ಇದೇ ವಿಷಯವನ್ನು ಸಿನಿಮಾವಾಗಿಸಿ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರತಂಡವು ಪ್ರೇಕ್ಷಕರ ಮುಂದೆ ಹೇಳಲು ಹೊರಟಿದೆ. ಈ ಚಿತ್ರವು ಜನರಲ್ಲಿ ಜಾಗೃತಿ ಮೂಡಿಸಿ, ಯಶಸ್ವಿಯಾಗಲಿ" ಎಂದು ಶುಭ ಹಾರೈಸಿದರು.

ಸರ್ಕಾರಿ ನ್ಯಾಯಬೆಲೆ ಅಂಗಡಿ ಚಿತ್ರದಲ್ಲಿ ನಟ ರಾಜಕಾರಣಿ ಕುಮಾರ್ ಬಂಗಾರಪ್ಪ, ನಟಿ ರಾಗಿಣಿ ದ್ವಿವೇದಿ, ಹಿರಿಯ ನಟ ದೊಡ್ಡಣ್ಣ ಸೇರಿದಂತೆ ಅನೇಕ ಕಲಾವಿದರುಗಳು ಇತರ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

'ಜಯಶಂಕರ ಟಾಕೀಸ್ ಬ್ಯಾನರ್ ಅಡಿಯಲ್ಲಿ, ಇಬ್ಬರು ಮಹಿಳಾ ನಿರ್ಮಾಪಕಿಯರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿರುವುದು ಚಿತ್ರದ ವಿಶೇಷ. 'ಸರ್ಕಾರಿ ನ್ಯಾಯಬೆಲೆ ಅಂಗಡಿ ಚಿತ್ರವನ್ನು ತೇಜು ಮೂರ್ತಿ ಮತ್ತು ಪದ್ಮಾವತಿ ಚಂದ್ರಶೇಖರ್ ಅವರು ಜಂಟಿಯಾಗಿ ನಿರ್ಮಿಸಿದ್ದಾರೆ. ಈ ಚಿತ್ರದ ಹಾಡುಗಳಿಗೆ ಅನಂತ್ ಆರ್ಯನ್ ಅವರು ಸಂಗೀತ ಸಂಯೋಜಿಸುತ್ತಿದ್ದಾರೆ. ಬಿ. ರಾಮಮೂರ್ತಿ ಅವರ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ ಚಿತ್ರಕ್ಕೆ ಸಾತ್ವಿಕ್ ಪವನ್ ಕುಮಾರ್ ಅವರು ಕ್ಯಾಮೆರಾ ವರ್ಕ್ ಜೊತೆಗೆ ನಿರ್ದೇಶನವನ್ನೂ ಸಹ ಮಾಡುತ್ತಿದ್ದಾರೆ.

'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಶೀರ್ಷಿಕೆ ಗೀತೆಯ ಬಿಡುಗಡೆ ಸಂದರ್ಭದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಕೆ. ಹೆಚ್. ಮುನಿಯಪ್ಪ, ನಿರ್ಮಾಪಕರಾದ ಭಾ.ಮ. ಹರೀಶ್, ಭಾ.ಮ. ಗಿರೀಶ್, ಚೆಲುವ ಮೂರ್ತಿ, ಕರ್ನಾಟಕ ರಾಜ್ಯ ಪಡಿತರ ಸಂಘದ ಅಧ್ಯಕ್ಷ ಕೃಷ್ಣಪ್ಪ ಸೇರಿದಂತೆ ಚಿತ್ರರಂಗ ಮತ್ತು ರಾಜಕೀಯ ರಂಗದ ಅನೇಕ ಗಣ್ಯರುಗಳು ಹಾಜರಿದ್ದರು.

ಅಂದಹಾಗೆ, ಸುಮಾರು 52 ದಿನಗಳ ಕಾಲ ಮಂಡ್ಯ ಸುತ್ತಮುತ್ತಲಿನ ಗ್ರಾಮೀಣ ಸ್ಥಳಗಳಲ್ಲಿ, 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಚಿತ್ರೀಕರಣವನ್ನು ನಡೆಸಲಾಗಿದೆ. ಸದ್ಯ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡಿರುವ ಚಿತ್ರತಂಡ, ಶೀಘ್ರದಲ್ಲೇ ಸಿನಿಮಾವನ್ನು ಪ್ರೇಕ್ಷಕರ ಮುಂದೆ ತರುವ ತಯಾರಿಯಲ್ಲಿದೆ. ಕನ್ನಡದ ಜೊತೆಗೆ ದೇಶದ ಇತರ ಭಾಷೆಗಳಲ್ಲೂ ಸಹ ಈ ಸಿನಿಮಾವನ್ನು ಬಿಡುಗಡೆ ಮಾಡುವ ಯೋಚನೆಯೂ ಚಿತ್ರತಂಡಕ್ಕಿದೆ.

ಹೊಂಬಾಳೆ ಫಿಲಂಸ್‌ನ ನೂತನ ಚಿತ್ರದ ಶೀರ್ಷಿಕೆ ಇಂದು ಬಿಡುಗಡೆ





ಭಾರತೀಯ ಚಿತ್ರರಂಗದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಎನಿಸಿಕೊಂಡ ಹೊಂಬಾಳೆ ಫಿಲಂಸ್ ಇದೀಗ ಮತ್ತೊಂದು ಮಹತ್ವಾಕಾಂಕ್ಷೆಯ ಚಿತ್ರವನ್ನು ಘೋಷಣೆ ಮಾಡಿದೆ. ಮಹಾವತಾರ ನರಸಿಂಹದಂಥ ಸೂಪರ್ ಹಿಟ್ ಚಿತ್ರವನ್ನು ನಿರ್ಮಿಸಿದ ಅಶ್ವಿನ್ ಅವರ ಜತೆ ಕೈಜೋಡಿಸಿ ಮತ್ತೊಂದು ವಿಭಿನ್ನ ಸಾಹಸಕ್ಕೆ ಹೊಂಬಾಳೆ ಫಿಲಂಸ್ ಮುಂದಾಗಿದೆ.

ರಾಜಕುಮಾರ, ಯುವರತ್ನ, ಕೆಜಿಎಫ್, ಕಾಂತಾರಾ ಹಾಗೂ ಸಲಾರ್ ನಂತಹ ಅದ್ಭುತ ದೃಶ್ಯಕಾವ್ಯಗಳನ್ನು ನಿರ್ಮಿಸುವ ಮೂಲಕ ಭಾರತೀಯ ಚಿತ್ರರಂಗದ ಗತಿಯನ್ನೇ ಬದಲಿಸಿ, ಕಥೆ ಮತ್ತು ಮೇಕಿಂಗ್‌ಗೆ ಹೊಸ ವ್ಯಾಖ್ಯಾನ ಬರೆದಂಥ ಸಂಸ್ಥೆ ಹೊಂಬಾಳೆ ಫಿಲಂಸ್, ಈಗ ತನ್ನ ಮುಂದಿನ ಬಹುನಿರೀಕ್ಷಿತ ಸಿನಿಮಾದ ಶೀರ್ಷಿಕೆಯನ್ನು ಅಧಿಕೃತವಾಗಿ ಇಂದು ಮಧ್ಯಾಹ್ನ ಘೋಷಿಸಲಿದೆ. ಪವರ್‌ಸ್ಟಾರ್ ಪುನೀತ್ ರಾಜಕುಮಾರ್ ಅಭಿನಯದ ನಿನ್ನಿಂದಲೇ ಚಿತ್ರದ ಮೂಲಕ ಚಿತ್ರನಿರ್ಮಾಣ ಆರಂಭಿಸಿ ನಂತರ ಅವರ ಜತೆ ಮೂರು ಚಿತ್ರಗಳು ಅಲ್ಲದೆ ರಾಕಿಂಗ್ ಸ್ಟಾರ್ ಯಶ್ ಜತೆಗೂ ಮೂರು ಚಿತ್ರಗಳು ಮತ್ತು ರಿಶಭ್ ಶೆಟ್ಟಿ ಅವರ ಜತೆ ಎರಡು ಚಿತ್ರಗಳನ್ನು ನಿರ್ಮಾಣ ಮಾಡಿರುವ ಹೆಗ್ಗಳಿಕೆ ಹೊಂಬಾಳೆ ಫಿಲಂಸ್‌ಗಿದೆ. ಈ ಎಲ್ಲಾ ಚಿತ್ರಗಳೂ ಸೂಪರ್ ಹಿಟ್ ಆಗಿ ದಾಖಲೆ ಬರೆದಿರುವುದು ಹೊಂಬಾಳೆ ಫಿಲಂಸ್‌ನ ಮತ್ತೊಂದು ಹೆಗ್ಗಳಿಕೆ, ಮಹಾವತಾರ ನರಸಿಂಹ ಚಿತ್ರದ ಮೂಲಕ ಸಂಚಲನ ಮೂಡಿಸಿದ್ದ ಅದೇ ಸೃಜನಶೀಲ ತಂಡವು ಈಗ ಮತ್ತೆ ಒಂದಾಗುತ್ತಿದ್ದು, ಮತ್ತೊಂದು ಅದ್ಭುತ ಕಥಾಹಂದರವನ್ನು ತೆರೆಯ ಮೇಲೆ ತರಲು ಸಜ್ಜಾಗಿದೆ. ವಿಶೇಷವೆಂದರೆ, ವಿಭಿನ್ನ ದೃಷ್ಟಿಕೋನ ಹಾಗೂ ಹೊಸತನದ ಕಥೆಯನ್ನು ಒಳಗೊಂಡಿರುವ ಈ ಚಿತ್ರವನ್ನು ಅಶ್ವಿನ್ ಅವರು ನಿರ್ದೇಶಿಸಲಿದ್ದಾರೆ. ಸಿನಿ ಪ್ರೇಕ್ಷಕರಲ್ಲಿ ಈಗಾಗಲೇ ಈ ಪ್ರಾಜೆಕ್ಟ್ ಬಗ್ಗೆ ದೊಡ್ಡ ಮಟ್ಟದ ಕುತೂಹಲವಂತೂ ಗರಿಗೆದರಿದ್ದು, ಭಾರತೀಯ ಚಿತ್ರರಂಗದ ಕಣ್ಣುಗಳು ಇದೀಗ ಹೊಂಬಾಳೆ ಫಿಲಂಸ್‌ನ ನೂತನ ಸಿನಿಮಾದ ಘೋಷಣೆಯ ಮೇಲಿದೆ. ವಿಭಿನ್ನ ದೃಶ್ಯ ವೈಭವದೊಂದಿಗೆ ಮೂಡಿಬರಲಿರುವ ಈ ಚಿತ್ರದ ಶೀರ್ಷಿಕೆಯನ್ನು ಹೊಂಬಾಳೆ ಫಿಲಂಸ್ ಇಂದು ಮಧ್ಯಾಹ್ನ 11-22ಕ್ಕೆ ಅಧಿಕೃತವಾಗಿ ಪ್ರಕಟಿಸಲಿದೆ.



ಐತಿಹಾಸಿಕ ಪಾತ್ರದಲ್ಲಿ ನೆನಪಿರಲಿ ಪ್ರೇಮ್

ಇದೇ ಮೊದಲಬಾರಿಗೆ ಪೂರ್ಣ ಪ್ರಮಾಣದ ಐತಿಹಾಸಿಕ ಪಾತ್ರದಲ್ಲಿ ನೆನಪಿರಲಿ ಪ್ರೇಮ್

ವೈವಿಧ್ಯಮಯ ಫೀಲ್ ಗುಡ್ ಸಿನಿಮಾಗಳ(ನೆನಪಿರಲಿ, ಜೊತೆ ಜೊತೆಯಲಿ, ಪಲ್ಲಕ್ಕಿ, ಚಾರ್ ಮಿನಾರ್, ಮಳೆ) ಮೂಲಕ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ತನ್ನದೇ ಆದ ವಿಶಿಷ್ಟ ಶೈಲಿಯ ಯಶಸ್ಸಿನ ಮೈಲುಗಲ್ಲು ನೆಟ್ಟಿರುವ ಕನ್ನಡದ ಪ್ರತಿಭಾವಂತ ನಟ ಲವ್ಲಿ ಸ್ಟಾರ್ ಪ್ರೇಮ್ ಇದೇ ಮೊದಲಬಾರಿಗೆ ಐತಿಹಾಸಿಕ ಕಥಾಹಂದರ ಒಳಗೊಂಡ ಚಲನಚಿತ್ರವೊಂದರಲ್ಲಿ ನಾಯಕ ನಟನಾಗಿ ಕಾಣಿಸಿಕೊಳ್ಳುತ್ತಿದ್ದಾರೆ, ಈ ಮೂಲಕ ಕೆರಿಯರ್‌ನ್ನು ಹೊಸತೊಂದು ಮಜಲಿಗೆ ಕೊಂಡೊಯ್ಯಲು ಸಿದ್ಧತೆ ನಡೆಸಿದ್ದಾರೆ.

ನಟ ಪ್ರೇಮ್ ಅವರ ಜನ್ಮದಿನದ ಕೊಡುಗೆಯಾಗಿ ಅವರ ಪಾತ್ರದ ಹೊಸ ಲುಕ್‌ಅನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ಈ ಪೋಸ್ಟರ್‌ನಲ್ಲಿ ಪೂರ್ತಿ ಮಾಸ್ ಲುಕ್‌ನ ತೀವ್ರ ಹರಿತ ನೋಟದಲ್ಲಿರುವ ಪ್ರೇಮ್ ಕಾಣಿಸುತ್ತಾರೆ. ಕೈಯಲ್ಲಿ ಹೊಳೆಯುವ ಮುದ್ರೆಯುಂಗುರ ಮತ್ತು ಹಿಡಿದ ಕತ್ತಿ ಅವರ ಕಣ್ಣ ನೋಟಕ್ಕೆ ಮತ್ತಷ್ಟು ಹೊಳಪು ನೀಡಿದೆ. ಹಣೆಯಲ್ಲಿ ಕಂಡೂ ಕಾಣದಂತೆ ಹರಡಿದ ಮುಂಗುರುಳು ಗಾಳಿಯಲ್ಲಿ ಹಾರುತ್ತಾ ಇಡೀ ನಿಲುವಿಗೆ ಮಾಸ್ ಲುಕ್ ನೀಡಿದೆ. ಇತಿಹಾಸ ಪುರುಷರ ಪರಂಪರೆ ಬಿಂಬಿಸುವ ಹೊಳೆವ ತ್ರಿಪುಂಡ್ರ, ಕೇಶವಿನ್ಯಾಸ, ಟ್ರೆಂಡಿ ಗಡ್ಡ ಪ್ರೇಮ್ ಅವರನ್ನು ಬೇರೆಯ ಒಂದು ಅವತಾರದಲ್ಲಿ ಕಾಣಿಸುತ್ತಿದೆ. 2023ರ ವಿಶೇಷ ಚಿತ್ರಗಳಲ್ಲಿ ಒಂದಾಗಿದ್ದ, ಪರಿಸರ ಕಾಳಜಿಯಂಥ ಸಾಮಾಜಿಕ ಸಂದೇಶ ಹೊತ್ತು ನಿರ್ಮಾಣವಾಗಿದ್ದ ಜಲಪಾತ ಚಿತ್ರವನ್ನು ನಿರ್ಮಿಸಿದ ಶ್ರೀ ಬ್ಯಾನರ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗಲಿದೆ, ಈ ಚಿತ್ರದಲ್ಲೂ ಸಹ ಪರಿಸರದ ಅರಿವಿನ ವಿಚಾರಗಳಿದ್ದರೂ, ಇದೇ ಮೊದಲಬಾರಿಗೆ ಐತಿಹಾಸಿಕ ಹಿನ್ನೆಲೆಯ ಕಥೆಯನ್ನು ಹೊಂದಿರುವುದು ಮತ್ತು ಪೂರ್ತಿ ಮಾಸ್ ಶೈಲಿಯಲ್ಲಿರುವುದು ವಿಶೇಷವಾಗಿದೆ. ಇತಿಹಾಸ ಮತ್ತು ವರ್ತಮಾನಕ್ಕೆ ಕೊಂಡಿ ಬೆಸೆಯುತ್ತಾ ವಿಭಿನ್ನವಾಗಿ ಸಾಗುವ ಈ ಚಿತ್ರವು ಸಾಹಿತಿ ಜಾಣಗೆರೆ ವೆಂಕಟರಾಮಯ್ಯ ಅವರ ಕಾದಂಬರಿಯನ್ನು ಆಧರಿಸಿ ನಿರ್ಮಾಣವಾಗುತ್ತಿದೆ.



ಶೃಂಗೇರಿಯ ಪ್ರಸಿದ್ಧ ರಂಗಕರ್ಮಿ, ಯಕ್ಷಗಾನ, ಕಿರುತೆರೆ, ಜಾನಪದ, ಹಿರಿತೆರೆಗಳಂಥ ಬಹುಮಾಧ್ಯಮದಲ್ಲಿ ತೊಡಗಿಕೊಂಡಿರುವ ರಮೇಶ್ ಬೇಗಾರ್ ಅವರು ಬರವಣಿಗೆಯ ಜೊತೆಗೆ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಈಗಾಗಲೇ ಈ ಚಿತ್ರದ ನಾಯಕನಟ ನೆನಪಿರಲಿ ಪ್ರೇಮ್ ಅವರ ಭಾಗದ ಚಿತ್ರೀಕರಣ ಪೂರ್ಣಗೊಂಡಿದೆ. ಸದ್ಯ ಕನ್ನಡ ಚಿತ್ರರಂಗದಲ್ಲಿರುವ ಐತಿಹಾಸಿಕ ಸಿನಿಮಾಗಳ ಕೊರತೆಯನ್ನು ನೀಗುವ ಸಲುವಾಗಿ ಎನ್ನುವಂತೆ ಈ ಚಿತ್ರವು ನಿರ್ಮಾಣವಾಗುತ್ತಿದೆ, ಚಿತ್ರದ ಪೂರ್ತಿವಿವರ ಮತ್ತು ಶೀರ್ಷಿಕೆಯನ್ನು ಟೀಸರ್ ಮೂಲಕ ಹಂಚಿಕೊಳ್ಳಲಾಗುವುದು ಎಂದು ನಿರ್ದೇಶಕ ರಮೇಶ್ ಬೇಗಾರ್ ಅವರು ತಿಳಿಸಿದ್ದಾರೆ. ಜನ್ಮದಿನದ ಅಂಗವಾಗಿ ಬಿಡುಗಡೆಗೊಂಡಿರುವ ನೆನಪಿರಲಿ ಪ್ರೇಮ್ ಅವರ ಪಾತ್ರದ ಫಸ್ಟ್‌ಲುಕ್ ಪೋಸ್ಟರ್ ಒಂದಷ್ಟು ಕಥೆಯನ್ನು ಹೇಳುತ್ತದೆ,

ಜೆರಾಕ್ಸ್ ಟ್ರೈಲರ್ ಬಿಡುಗಡೆ



ನಟ, ನಿರ್ಮಾಪಕ ಡಾಲಿ ಧನಂಜಯ ಅವರ ಡಾಲಿ ಪಿಕ್ಚರ್ಸ್ ಲಾಂಛನದಲ್ಲಿ ಹಾಗೂ ಬ್ಲಿಂಕ್ ಖ್ಯಾತಿಯ ನಿರ್ದೇಶಕ ಶ್ರೀನಿಧಿ ಬೆಂಗಳೂರು ಅವರ ನಿರ್ದೇಶನದ ಜೆರಾಕ್ಸ್ ವೆಬ್ ಸರಣಿಯ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಆರು ಸಂಚಿಕೆಗಳ ಹಾಸ್ಯ ವೆಬ್ ಸರಣಿ ಇದಾಗಿದೆ. ಜೆರಾಕ್ಸ್ ಸರಣಿ ಚಿತ್ರದ ಮುಖ್ಯ ಭೂಮಿಕೆಯಲ್ಲಿ ನಾಗಭೂಷಣ್, ಪಾಯಲ್ ಚೆಂಗಪ್ಪ ಕಾಣಿಸಿಕೊಂಡಿದ್ದು, ಮಂಜು ಪಾವಗಡ, ಓಂ ಪ್ರಕಾಶ್ ರಾವ್, ಶ್ರೀವತ್ಸ, ಯಶ್ವಂತ್ ಶೆಟ್ಟಿ, ವಿಜಯ್ ಪ್ರಸಾದ್, ತುಕಾಲಿ ಸಂತು, ಜಗ್ಗಪ್ಪ, ಸಿದ್ದು ಮಂಡ್ಯ, ಸುಧಾಕರ್ ಗೌಡ ಹಾಗೂ ಇತರರು ಉಳಿದ ಪಾತ್ರಗಳಲ್ಲಿ ನಟಿಸಿದ್ದಾರೆ. ಮಳವಳ್ಳಿಯ ರಾಯದುರ್ಗದ ಪ್ರಕಾಶ ಒಬ್ಬ ಸಾಮಾನ್ಯ ಜೆರಾಕ್ಸ್ ಅಂಗಡಿ ಕೆಲಸಗಾರ. ಅವನ ಜೆರಾಕ್ಸ್ ಯಂತ್ರಕ್ಕೆ ಒಂದು ತಾಯಿತ ಸೇರಿದಾಗ ಅವನ ಜೀವನವೇ ಬದಲಾಗುತ್ತದೆ. ಅವನು ತೆಗೆಯುವ ಜೆರಾಕ್ಸ್ ಕಾಪಿಗಳಿಗೆ ಜೀವ ಬಂದು, ಅವನ ಜೀವನ ಉಲ್ಟಾ ಪಲ್ಟಾ ಆಗುತ್ತದೆ. ಇದರಿಂದ ಆಗುವ ಅಚಾನಕ್ ಬದಲಾವಣೆಗಳು, ಊರಿನಲ್ಲಾಗುವ ಆಶ್ಚರ್ಯಕರ ಘಟನೆಗಳು, ಕುತೂಹಲಕಾರಿ ಸನ್ನಿವೇಶಗಳನ್ನು ಜೆರಾಕ್ಸ್ ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಜೀ 5ನಲ್ಲಿ ಏಪ್ರಿಲ್ 24ರಿಂದ ಈ ವೆಬ್ ಸರಣಿಯು ಪ್ರಸಾರವಾಗಲಿದೆ. ನಿರ್ಮಾಪಕ ಡಾಲಿ ಧನಂಜಯ ಮಾತನಾಡಿ, ನನಗೆ ಈ ಕಥೆ ಇಷ್ಟವಾಗಲು ಕಾರಣ ಅದು ಹೇಳುವ ತತ್ವ, ಪ್ರತಿ ಹಾಸ್ಯ ಸನ್ನಿವೇಶದ ಹಿಂದೆ ಅಡಗಿರುವ ತತ್ವ, ನನ್ನನ್ನು ತಕ್ಷಣ ಸೆಳೆಯಿತು. ಜೆರಾಕ್ಸ್ ಕಾಪಿಗಳಿಗೆ ಜೀವ ಬಂದಾಗ, ಜನರು ತಮ್ಮ ಪ್ರತಿಬಿಂಬವನ್ನೇ ಸ್ವೀಕರಿಸಲು ಹೇಗೆ ನಿರಾಕರಿಸುತ್ತಾರೆ ಇವೆಲ್ಲವೂ ನನ್ನನ್ನು ಆಕರ್ಷಿಸಿತು. ಈ ಕಥೆಯು ಒಂಟಿತನ, ಹಾಸ್ಯ, ಪಶ್ಚಾತ್ತಾಪ, ಗೊಂದಲ ಎಲ್ಲವನ್ನೂ ಒಳಗೊಂಡಿದೆ. ಇದು ಕೇವಲ ಹಾಸ್ಯವನ್ನಷ್ಟೇ ಹೇಳದೇ, ಜೀವನದ ಮೌಲ್ಯಗಳನ್ನೂ ಕೂಡ ಹೇಳುತ್ತದೆ ಎಂದು ವಿವರಿಸಿದರು. ನಿರ್ದೇಶಕ ಶ್ರೀನಿಧಿ ಬೆಂಗಳೂರು ಮಾತನಾಡಿ, ನಮ್ಮ ಕಾಪಿ, ನಾವು ನೋಡಲು ಬಯಸದ ನಮ್ಮ ಒಂದು ವ್ಯಕ್ತಿತ್ವವನ್ನು ಬಿಂಬಿಸಿದರೆ ಹೇಗೆ ಇರುತ್ತದೆ ? ಜೆರಾಕ್ಸ್ ಈ ಭಯದಿಂದ ಹುಟ್ಟಿದ ಕಥೆ. ಮಳವಳ್ಳಿಯಲ್ಲಿ ನಡೆಯುವ ಈ ಆಶ್ಚರ್ಯಕರ ಘಟನೆ ಹೇಗೆ ಹಲವಾರು ಹೊಸ ತಿರುವುಗಳಿಗೆ ಕಾರಣವಾಗುತ್ತದೆ, ಹೇಗೆ ಜನರ ಜೀವನವನ್ನು ಬದಲಾಯಿಸುತ್ತದೆ, ಇವೆಲ್ಲವನ್ನೂ ಕುತೂಹಲಕಾರಿಯಾಗಿ ತೋರಿಸುವ ಪ್ರಯತ್ನವೇ ಜೆರಾಕ್ಸ್ ಎಂದರು. ನಟ ನಾಗಭೂಷಣ ಮಾತನಾಡಿ, ಜೆರಾಕ್ಸ್ ಅಂಗಡಿ ಕೆಲಸಗಾರ ಪ್ರಕಾಶ್ ಆಗಿ ನಾನೀ ಚಿತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಒಂದು ಘಟನೆಯಿಂದ ಆತನ ಜೀವನ ಹೇಗೆ ಸಂಪೂರ್ಣವಾಗಿ ಬದಲಾಗುತ್ತದೆ ಎಂಬುದನ್ನು ಈ ಕಥೆಯಲ್ಲಿ ಹೇಳಲಾಗಿದೆ. ಎಲ್ಲರ ಜೀವನದಲ್ಲಿ ನಡೆಯುವ ಘಟನೆಗಳಿಗೆ ಇವನು ಕಾರಣಕರ್ತನಾಗಿರುತ್ತಾನೆ. ಅವನು ಶಕ್ತಿಶಾಲಿಯೇನಲ್ಲ, ಕೆಟ್ಟವನೂ ಅಲ್ಲ, ಆದರೆ ಎಲ್ಲದರ ಹಿಂದೆ ಇವನ ಕೈವಾಡವಿರುತ್ತದೆ. ಇದೊಂದು ವಿಭಿನ್ನವಾದ ಪಾತ್ರ ಎಂದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26